ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 25 ಶುಕ್ರವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23 ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695 ಸುದ್ದಿ ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 189

ಪುಟಗಳು: 12 ₹4

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com,
website: www.mysurumithra.com









ಅರಮನೆ ಪ್ರವೇಶಕ್ಕೆ ಪರಿಷ್ಕೃತ ಶುಲ್ಕ ನಿಗದಿ



ಮೈಸೂರು,ಅ.24– ವಿಶ್ವವಿಖ್ಯಾತ ಮೈಸೂರು ಅರಮನೆಗೆ ದಿನನಿತ್ಯ ದೇಶ–ವಿದೇಶಗಳಿಂದ ಸಹಸ್ರಾರು ಸಂಖ್ಯೆಯಲ್ಲಿ ಅರಮನೆ ವೀಕ್ಷಣೆಗಾಗಿ ಆಗಮಿಸುವ ಪ್ರವಾಸಿಗರ ಅನುಕೂಲಕ್ಕಾಗಿ ಅರಮನೆಯ ಒಳಾವರಣದಲ್ಲಿ ಬರುವ ಚಪ್ಪಲಿ ಸ್ಟಾಂಡ್, ಲಗ್ಗೇಜ್ ಕೊಠಡಿ ಮತ್ತು ಶೌಚಾಲಯಗಳನ್ನು ಪ್ರವಾಸಿಗರಿಗೆ ಉಚಿತಗೊಳಿಸಿ, ಅರಮನೆಯ ಪ್ರವೇಶ ಶುಲ್ಕವನ್ನು ಪರಿಷ್ಕರಿಸಲಾಗಿದೆ. ಅದರಂತೆ ವಯಸ್ಕರಿಗೆ ರೂ.120, 10ರಿಂದ 18 ವರ್ಷದೊಳಗಿನ ಮಕ್ಕಳಿಗೆ 70 ರೂ. (10 ವರ್ಷದೊಳಗಿನ ಮಕ್ಕಳಿಗೆ ಉಚಿತ), ಶೈಕ್ಷಣಿಕ ಪ್ರವಾಸ ಕೈಗೊಳ್ಳುವ ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ರಿಯಾಯಿತಿ ದರ 50 ರೂ. ಹಾಗೂ ವಿದೇಶಿ ಪ್ರವಾಸಿಗರಿಗೆ 1000 ರೂ. ಅನುಮೋದಿತ ಪರಿಷ್ಕೃತ ಶುಲ್ಕವನ್ನು ನಿಗದಿ ಮಾಡಲಾಗಿದೆ ಎಂದು ಮೈಸೂರು ಅರಮನೆ ಮಂಡಳಿ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಧನ

ಬಿ.ವಿಜಯ್ ಸಿಂಗ್



ಮೈಸೂರು, ಅ.24– ಮೈಸೂರಿನ ವಿಜಯನಗರ 3ನೇ ಹಂತದ ನಿವಾಸಿ ದಿವಂಗತ ಎಂ.ಹೆಚ್.ಬಾಲಾಜಿಸಿಂಗ್ ಮತ್ತು ದಿವಂಗತರಾದ ದೇವಕಿ ಬಿ.ಸಿಂಗ್ ಅವರ ಪುತ್ರ ಬಿ.ವಿಜಯ್ ಸಿಂಗ್(78) ಗುರುವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ ಕೆ.ಎ.ಪಾರ್ವತಿ, ಪುತ್ರ ವಿ.ಪ್ರವೀಣ್ ಸಿಂಗ್, ಸೊಸೆ ಸಾರಿಕಾ ಪಿ.ಸಿಂಗ್, ಮೊಮ್ಮಕ್ಕಳಾದ ಸುಹಾನಿ ಮತ್ತು ಮಾನ್ವಿಸಿಂಗ್, ಸಹೋದರಿ ಶೀಲಾ ಬೋಲಾರ್ ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪಾಲೇಕಂಡ ಶಂಭು ಅಯ್ಯಪ್ಪ



ಮೂಲತಃ ವಿರಾಜಪೇಟೆ ತಾಲೂಕು ಕದನೂರು ಗ್ರಾಮದವರಾಗಿದ್ದು, ಹಾಲಿ ಮೈಸೂರಿನ ವಿಜಯನಗರ ಎರಡನೇ ಹಂತದ ನಿವಾಸಿ ಪಾಲೇಕಂಡ ಶಂಭು ಅಯ್ಯಪ್ಪ (87) ಅವರು ಇಂದು ನಿಧನರಾದರು. ಮೃತರು ಪತ್ನಿ, ಪುತ್ರ, ಪುತ್ರಿ ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ (ಅ.25) ಮಧ್ಯಾಹ್ನ 2.30ಕ್ಕೆ ವಿಜಯನಗರ ನಾಲ್ಕನೇ ಹಂತದಲ್ಲಿರುವ ಮುಕ್ತಿಧಾಮದಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಗ್ರಾಪಂ ಮಾಜಿ ಅಧ್ಯಕ್ಷ ರಮೇಶ್



ಮೈಸೂರು ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷ ಕಡಕೊಳ ನಾಗರಾಜ್ ಸಹೋದರ ಕಡಕೊಳ ಗ್ರಾ.ಪಂ. ಮಾಜಿ ಅಧ್ಯಕ್ಷ ರಮೇಶ (56) ಹೃದಯಾಘಾತದಿಂದ ನಿಧನರಾಗಿದ್ದಾರೆ. ಅ.18ರಂದು ಸ್ನೇಹಿತರೊಂದಿಗೆ ಮೇಘಾಲಯ, ಅಸ್ಸಾಂ ಪ್ರವಾಸಕ್ಕೆ ತೆರಳಿದ್ದ ರಮೇಶ್ ಅವರು. ಬುಧವಾರ ರಾತ್ರಿ 1.30ಕ್ಕೆ ಅಸ್ಸಾಂನ ಗೌಹಟಿಯ ಖಾಸಗಿ ಆಸ್ಪತ್ರೆಯಲ್ಲಿ ಹೃದಯಾಘಾತದಿಂದ ನಿಧನರಾಗಿದ್ದಾರೆ. ತಾಯಿ ಪುಟ್ಟಮಾದಮ್ಮ, ಪತ್ನಿ ನೀಲಮ್ಮ, ಪುತ್ರ ನಿಶಾಂತ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಶುಕ್ರವಾರ 12 ಗಂಟೆಗೆ ಕಡಕೊಳದಲ್ಲಿ ಮೃತರ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಜಿ.ಪಂ ಮಾಜಿ ಅಧ್ಯಕ್ಷ ಕೆ.ಮರಿಗೌಡ, ಮಾಜಿ ಸದಸ್ಯ ಎಂ.ಪಿ.ನಾಗರಾಜ್, ಮಾರ್ಚಳ್ಳಿ ಶಿವರಾಂ, ಎಂ.ಟಿ.ಕುಮಾರ, ಬೀರಿಹುಂಡಿ ಬಸವಣ್ಣ, ಶ್ರೀಕಂಠ ತೊಂಡೇಗೌಡ ಹೊಸಹುಂಡಿ ರಘು, ಜವರಪ್ಪ, ಉದ್ದೂರು ಕೃಷ್ಣ, ಸಂತಾಪ ಸೂಚಿಸಿದ್ದಾರೆ.

ರಂಗಾಯಣದಲ್ಲಿ ಹಿರಿಯ ಕಲಾವಿದರೊಂದಿಗೆ ತಿಂಗಳ ಮಾತುಕತೆ

ಮೈಸೂರು,ಅ.24(ಎಂಟಿವೈ)– ಮೈಸೂರಿನ ರಂಗಾಯಣದಲ್ಲಿ 'ಹಿರಿಯ ಕಲಾವಿದರೊಂದಿಗೆ ತಿಂಗಳ ಮಾತುಕತೆ' ವಿನೂತನ ಮಾತಿನ ಮನೆ ಕಾರ್ಯಕ್ರಮ ಆರಂಭಿಸಲಾಗುತ್ತಿದೆ ಎಂದು ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು ತಿಳಿಸಿದ್ದಾರೆ.

ಮೈಸೂರಿನ ರಂಗಾಯಣ ಶ್ರೀರಂಗ ಸಭಾಂಗಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿವಿಧ ಕಾರ್ಯಕ್ರಮಗಳ ಮೂಲಕ ರಂಗಾಯಣ ರಂಗಾಸಕ್ತರ ಮನಸೂರೆಗೊಂಡಿದೆ. ಇದೀಗ ಹೊಸ ಕಾರ್ಯಕ್ರಮ ಆರಂಭಿಸಲಾಗುತ್ತಿದ್ದು, ಪ್ರತಿ ತಿಂಗಳು ನಾಲ್ಕನೇ ಶನಿವಾರ ರಂಗಭೂಮಿಯಲ್ಲಿ ಸಾಧನೆ ಮಾಡಿರುವ ಹಾಗೂ ಕ್ಷೇತ್ರಕ್ಕೆ ತನ್ನದೇ ಆದ ಕೊಡುಗೆ ನೀಡಿರುವ ಹಿರಿಯ ಕಲಾವಿದರನ್ನು ಆಹ್ವಾನಿಸಿ 'ಮಾತಿನ ಮನೆ' ಮಾತುಕತೆ ಕಾರ್ಯಕ್ರಮ ನಡೆಸಿ, ಅಲ್ಲಿ ವ್ಯಕ್ತವಾದ ಅಭಿಪ್ರಾಯವನ್ನು ದಾಖಲೀಕರಿಸಲಾಗುತ್ತದೆ ಎಂದರು.



ಮೈಸೂರಿನ ರಂಗಾಯಣದ ಶ್ರೀರಂಗದಲ್ಲಿ ರಂಗಾಯಣದ ನಿರ್ದೇಶಕ ಸತೀಶ್ ತಿಪಟೂರು ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಚಿತ್ರದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ಅವರನ್ನು ಕಾಣಬಹುದು.

ಮಾತಿನ ಮನೆಯ ಮೊದಲ ಕಾರ್ಯಕ್ರಮವನ್ನು ಅ.26ರಂದು ಬೆಳಗ್ಗೆ 10.30ಕ್ಕೆ ರಂಗಾಯಣದ ಭೂಮಿಗೀತದಲ್ಲಿ ನಾಟಕಕಾರ ಕೋಟಿಗಾನಹಳ್ಳಿ ರಾಮಯ್ಯ ಉದ್ಘಾಟಿಸಲಿದ್ದಾರೆ. ಮೊದಲ ಕಾರ್ಯಕ್ರಮದಲ್ಲಿ ಹಿರಿಯ ವೃತ್ತಿ ರಂಗಭೂಮಿ ಕಲಾವಿದೆ ಸರಸ್ವತಿ ಉರುಫ್ ಜುಲೇಖಾ ಬೇಗಂ ಪಾಲ್ಗೊಳ್ಳಲಿದ್ದಾರೆ. ಇವರೊಂದಿಗೆ ಕಥೆಗಾರ ಅಬ್ದುಲ್ ರಶೀದ್ ಮಾತುಕತೆ ನಡೆಸಿಕೊಡಲಿದ್ದಾರೆ. ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ, ರಂಗಾಯಣದ ನಿರ್ದೇಶಕ ಸತೀಶ್ ತಿಪಟೂರು, ಉಪನಿರ್ದೇಶಕ ಡಾ.ಎಂ.ಡಿ. ಸುದರ್ಶನ್ ಉಪಸ್ಥಿತರಿರುವರು.

ನಾಳೆ ಮೊದಲ ಕಾರ್ಯಕ್ರಮ

ರಂಗಾಯಣವು ಗ್ರಾಮೀಣ ಪ್ರದೇಶ ಸೇರಿದಂತೆ ಸಮಾಜದ ಎಲ್ಲಾ ವರ್ಗದ ಜನರಿಗೂ ರಂಗ ಚಟುವಟಿಕೆ ತಲುಪಿಸಲು ವಿವಿಧ ಕಾರ್ಯಕ್ರಮ ರೂಪಿಸಿದೆ. ಗ್ರಾಮೀಣ ಪ್ರದೇಶಕ್ಕೆ ತೆರಳಿ ನಾಟಕ ಪ್ರದರ್ಶಿಸಲು ನಿರ್ಧರಿಸಲಾಗಿದೆ. ಈ ಬಾರಿ ಮಕ್ಕಳು, ಶಿಕ್ಷಕರು, ರಂಗಾಯಣದ ಹಿರಿಯ ಕಲಾವಿದರಿಗೂ ನಾಟಕ ತರಬೇತಿ ನೀಡಲಾಗುತ್ತದೆ. ಹಿರಿಯ ಕಲಾವಿದರು ಬಹುರೂಪಿಯಲ್ಲಿ ನಾಟಕ ಪ್ರದರ್ಶಿಸಲಿದ್ದಾರೆ. ಪ್ರಸ್ತುತ ಸವಾಲು ಮತ್ತು ಸಾಧ್ಯತೆಯನ್ನು ಗಮನದಲ್ಲಿರಿಸಿಕೊಂಡು ಮಕ್ಕಳಿಗಾಗಿಯೇ ನಾಟಕ ಪ್ರಯೋಗಕ್ಕೆ ಮುಂದಾಗಿದ್ದೇವೆ. ಎಲ್ಲಾ ಶಾಲೆಯ ಮಕ್ಕಳು ಈ ನಾಟಕವನ್ನು ವೀಕ್ಷಿಸುವಂತೆ ವ್ಯವಸ್ಥೆ ಮಾಡಲಾಗುವುದು ಎಂದು ತಿಳಿಸಿದರು.

ಚೆಕ್‌ಮೇಟ್ ನೂರನೇ ಪ್ರದರ್ಶನ: ರಂಗಾಯಣದ ಹಿರಿಯ ಕಲಾವಿದರೇ ಅಭಿನಯಿಸಿರುವ 'ಚೆಕ್‌ಮೇಟ್' ನಾಟಕದ ನೂರನೇ ಪ್ರದರ್ಶನಕ್ಕೆ ಸಿದ್ಧತೆ ನಡೆಸಲಾಗಿದೆ. ಮುಂದಿನ ವಾರದಲ್ಲಿ ಈ ನಾಟಕದ ಪ್ರದರ್ಶನವಿದೆ ಎಂದ ಅವರು, ರಂಗಾಯಣವನ್ನು ಗ್ರಾಮೀಣ ಪ್ರದೇಶಕ್ಕೂ ಕೊಂಡೊಯ್ಯುವ ಸಲುವಾಗಿ ತಾಲೂಕು ಮಟ್ಟದಲ್ಲಿ ಶಿಬಿರ ಆಯೋಜಿಸಲು ರೂಪುರೇಷೆ ಸಿದ್ಧಪಡಿಸಲಾಗಿದೆ ಮೂಲಸೌಕರ್ಯಗಳಿಲ್ಲದಿದ್ದರೂ ಇರುವ ಸವಲತ್ತನ್ನು ಬಳಸಿಕೊಂಡು ಪ್ರಯೋಗಗಳನ್ನು ಮಾಡಲಾಗುವುದು ಎಂದು ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಕನ್ನಡ– ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ಇದ್ದರು.

50 ದಿನ ಪೂರೈಸಿದ ಅನ್ನ ಚಿತ್ರಕ್ಕೆ ತೆರಿಗೆ ವಿನಾಯಿತಿ

ಮುಂದಿನ ದಿನಗಳಲ್ಲಿ ಮತ್ತಷ್ಟು ಚಿತ್ರಮಂದಿರಗಳಲ್ಲಿ ಚಿತ್ರ ಬಿಡುಗಡೆ

ಮೈಸೂರು, ಅ.24(ಜಿಎ)–ಗಗನ್ ಪಿಕ್ಚರ್ ವತಿಯಿಂದ ನಿರ್ಮಾಣಗೊಂಡಿರುವ 'ಅನ್ನ'ಚಿತ್ರವು 50 ದಿನಗಳನ್ನು ಪೂರೈಸಿದ್ದು, ರಾಜ್ಯ ಸರ್ಕಾರ ತೆರಿಗೆ ವಿನಾಯಿತಿ ನೀಡಿದೆ. ಮುಂದಿನ ದಿನಗಳಲ್ಲಿ ಮತ್ತಷ್ಟು ಚಿತ್ರಮಂದಿಗಳಲ್ಲಿ ಚಿತ್ರ ಪ್ರದರ್ಶನಗೊಳ್ಳಲಿದೆ ಎಂದು ನಿರ್ದೇಶಕ ಇಸ್ಲಾಹುದೀನ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹನೂರು ಚೆನ್ನಪ್ಪ ಅವರ ಕಾದಂಬರಿ ಆಧರಿಸಿ ಮೂಡಿ ಬಂದಿರುವ ಚಿತ್ರ ಮೈಸೂರಿನ ಡಿಆರ್‌ಸಿ ಮಲ್ಟಿ ಪ್ಲೆಕ್ಸ್‌ನಲ್ಲಿ ಪ್ರದರ್ಶನವಾಗುತ್ತಿದ್ದು, ಅ.25ಕ್ಕೆ 50 ದಿನ ಪೂರೈಸುತ್ತಿದೆ. ಈಗಾಗಲೇ ಚಿತ್ರವು ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ಭಾರತೀಯ ಚಿತ್ರ ವಿಭಾಗದಲ್ಲಿ ಪ್ರದರ್ಶನಗೊಂಡು ಮೆಚ್ಚುಗೆ ಪಡೆದುಕೊಂಡಿದೆ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಚಿತ್ರವನ್ನು ಸಂಪೂರ್ಣವಾಗಿ ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿ, ತಂಡವನ್ನು ಭೇಟಿ ಮಾಡಿ ಅನ್ನಕ್ಕಾಗಿ ಜನರು ಪರದಾಡಿದ ಸ್ಥಿತಿಗತಿಗಳ ಬಗ್ಗೆ ಚರ್ಚಿಸಿದರು.

ನಂತರ ಚಿತ್ರಕ್ಕೆ ತೆರಿಗೆ ವಿನಾಯಿತಿ ನೀಡಿದ್ದಾರೆ. ಹಾಗೇ ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ರಿಯಾ ಯಿತಿ ದರದಲ್ಲಿ ಸಿನಿಮಾ ವೀಕ್ಷಣೆಗೆ ಅವಕಾಶ ಕಲ್ಪಿಸಲಾಗುವುದು ಎಂದು ಭರವಸೆ ನೀಡಿದ್ದಾರೆ ಎಂದು ತಿಳಿಸಿದರು.

ಈಗಾಗಲೇ ಚಿತ್ರಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿರುವುದರಿಂದ ರಾಜ್ಯದ ವಿವಿಧ ಭಾಗಗಳಿಂದಲೂ ಚಿತ್ರವನ್ನು ಮತ್ತಷ್ಟು ಚಿತ್ರಮಂದಿರದಲ್ಲಿ ಬಿಡುಗಡೆಗೊಳಿಸುವಂತೆ ಸಾಕಷ್ಟು ಮನವಿ ಬರುತ್ತಿರುವುದರಿಂದ ಮುಂದಿನ ದಿನಗಳಲ್ಲಿ ಮತ್ತಷ್ಟು ಚಿತ್ರಮಂದಿರಗಳಲ್ಲಿ ಪ್ರದರ್ಶನವಾಗಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಡಾ.ಭುವನೇಶ್ವರಿ, ಬಸವರಾಜು, ಪದ್ಮಶ್ರೀ ಮತ್ತಿತರರು ಉಪಸ್ಥಿತರಿದ್ದರು.

ಜಾನಪದ ಹಾಡುಗಳಿಂದ ಮನಸಿಗೆ ಹಿತ; ಬೇರೆ ಗೀತೆಗಳಿಂದ ಅನಾಹುತ!

ಜಾನಪದ ಪ್ರಪಂಚ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾಜಿ ಸಚಿವ ಎಂ.ಶಿವಣ್ಣ ಅಭಿಪ್ರಾಯ



ಮೈಸೂರಿನ ಮಾನಸಗಂಗೋತ್ರಿಯ ಇಎಂಆರ್‌ಸಿ ಸಭಾಂಗಣದಲ್ಲಿ ಗುರುವಾರ ಜಾನಪದ ಕಲಾವಿದರಿಗೆ ಜಾನಪದ ಪ್ರಪಂಚ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು.

ಮೈಸೂರು, ಅ.24(ಬಿಎಲ್‌ಯು)– ಜಾನಪದ ಗೀತೆಗಳನ್ನು ಕೇಳಿದರೆ ಮನಸಿಗೆ ಹಿತವಾಗುತ್ತದೆ, ಅದೇ ಬೇರೆ ಗೀತೆಗಳನ್ನು ಕೇಳಿದರೆ ಬಿಪಿ, ಶುಗರ್ ಬರುತ್ತದೆ ಎಂದು ಮಾಜಿ ಸಚಿವ ಎಂ.ಶಿವಣ್ಣ ಅಭಿಪ್ರಾಯಪಟ್ಟರು.

ಮೈಸೂರಿನ ಮಾನಸಗಂಗೋತ್ರಿಯ ಇಎಂಆರ್‌ಸಿ ಸಭಾಂಗಣದಲ್ಲಿ ಜಾನಪದ ಪ್ರಪಂಚ ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಜಾನಪದ ಹಾಡುಗಳನ್ನು ಕೇಳುತ್ತಿದ್ದರೆ ಬಿಪಿ, ಶುಗರ್ ಕಡಿಮೆಯಾಗುತ್ತದೆ.

ನಮ್ಮ ಸಂಸ್ಕೃತಿ, ಸಂಪ್ರದಾಯ ಉಳಿಯಬೇಕಾದರೆ ಜಾನಪದ ಕ್ಷೇತ್ರಕ್ಕೆ ಹೆಚ್ಚು ಒತ್ತು ನೀಡಬೇಕು, ಇಲ್ಲದಿದ್ದರೆ ಭಾರತೀಯ ಸಂಸ್ಕೃತಿ ನಾಶವಾಗುತ್ತದೆ ಎಂದು ಎಚ್ಚರಿಸಿದರು.

ಈ ನಿಟ್ಟಿನಲ್ಲಿ ಅರ್ಜಿ ಕರೆದು ಪ್ರಶಸ್ತಿ ನೀಡುವುದಕ್ಕಿಂತ ಜಾನಪದ ಕಲಾವಿದರನ್ನು ಸರ್ಕಾರವೇ ಗುರುತಿಸಿ ಅವರ ಮನೆ ಬಾಗಿಲಿಗೆ ಹೋಗಿ ಪ್ರಶಸ್ತಿ ನೀಡಬೇಕು. ಜಾನಪದ ಕಲಾವಿದರು ಅಕ್ಷರಸ್ಥರಲ್ಲ, ಆದರೂ ಮಂಟೇಸ್ವಾಮಿ, ಸಿದ್ದಪ್ಪಾಜಿ, ಮಹದೇಶ್ವರರ ಜಾನಪದ ಗೀತೆಗಳನ್ನು ಚೆನ್ನಾಗಿ ಹಾಡುತ್ತಾರೆ. ಇಂತಹವರ ಹಾಡುಗಳು ಉಳಿಯಬೇಕು. ಈ ನಿಟ್ಟಿನಲ್ಲಿ ಜಾನಪದ ಕಲಾವಿದರನ್ನು ಪೋಷಿಸಬೇಕು ಎಂದು ಶಿವಣ್ಣ ಹೇಳಿದರು.

ಈ ವೇಳೆ ಮಾತನಾಡಿದ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಹಿಂದಿನ ಕಾಲದಲ್ಲಿ ನಾಟಿ ಮಾಡುವಾಗ, ರಾಗಿ ಬೀಸುವಾಗ, ಭತ್ತ ಕಟ್ಟುವಾಗ, ಮಗು ಮಲಗಿಸುವಾಗ ಜಾನಪದ ಗೀತೆ ಹಾಡಲಾಗುತ್ತಿತ್ತು. ಆದರೆ ಈಗ ಇಂತಹ ಜಾನಪದ ಹಾಡುಗಳು ಕಣ್ಮರೆಯಾಗುತ್ತಿದ್ದು, ಇದನ್ನು ಉಳಿಸಿ, ಬೆಳೆಸಬೇಕಾದ ಅನಿವಾರ್ಯತೆ ಇದೆ ಎಂದು ಎಂ.ಶಿವಣ್ಣ ಅಭಿಪ್ರಾಯಪಟ್ಟರು.

ಈ ವೇಳೆ ಜಾನಪದ ಕಲಾವಿದರನ್ನು ಸನ್ಮಾನಿಸಲಾಯಿತು. ಕನ್ನಡ ಜಾನಪದ ಪರಿಷತ್ ಅಧ್ಯಕ್ಷ ಕ್ಯಾತನಹಳ್ಳಿ ಪ್ರಕಾಶ್, ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಬಿ.ಸುಬ್ರಹ್ಮಣ್ಯ, ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ದೀಪಾ ಶಿಕ್ಷಣ ಸಂಸ್ಥೆ ಅಧ್ಯಕ್ಷ ಎಂ.ರಾಮಪ್ಪ, ಮೈಸೂರು ವಕೀಲರ ಸಂಘದ ಕಾರ್ಯದರ್ಶಿ ಎಸ್.ಉಮೇಶ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

25.10.2024 ಶುಕ್ರವಾರ, ಮಳೆ ನಕ್ಷತ್ರ: ಸ್ವಾತಿ, 24.10.2024ರಿಂದ 05.11.2024 ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಯುಜ ಮಾಸ, ಕೃಷ್ಣ ಪಕ್ಷ, ತಿಥಿ: ಅಷ್ಟಮಿ, ನಕ್ಷತ್ರ: ಪುಷ್ಯ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಕುತ್ತಿಗೆ ಹಾಗೂ ಬೆನ್ನು ನೋವಿಗೆ ಅಕ್ಯೂಪಂಕ್ಚರ್ ಮತ್ತು ಯೋಗ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9ರಿಂದ ಸಂಜೆ 4.30 ರವರೆಗೆ.

■ **ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜು:** ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮೀಜಿ ಸ್ಮರಣಾರ್ಥ ಪುರುಷರ ಬ್ಯಾಸ್ಕೆಟ್‌ಬಾಲ್ ಮತ್ತು ಮಹಿಳೆಯರ ಥ್ರೋಬಾಲ್ ಅಂತರ ಕಾಲೇಜು ಪಂದ್ಯಾವಳಿ, ಉದ್ಘಾಟನೆ : ವಿಶ್ರಾಂತ ದೈಹಿಕ ಶಿಕ್ಷಣ ನಿರ್ದೇಶಕ ಎಂ.ಬಿ. ಹುಚ್ಚಗೊಂಡರ್, ಅಧ್ಯಕ್ಷತೆ : ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿವಿ ಕುಲಪತಿ ಪ್ರೊ. ಎ.ಎನ್. ಸಂತೋಷ್‌ಕುಮಾರ್, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 9.30ಕ್ಕೆ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆ ಬೊಂಬೆ ಪ್ರದರ್ಶನದ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆಯ ಮೇಲೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಉಚಿತ ಆರೋಗ್ಯ ತಪಾಸಣೆ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್, ಬೆಳಗ್ಗೆ 10ರಿಂದ

■ **ಅಭಿವೃದ್ಧಿ ಸಿಲ್ಕ್ ಇಂಡಿಯಾ :** ದೀಪಾವಳಿ ಹಬ್ಬದ ಪ್ರಯುಕ್ತ ಪರಿಶುದ್ಧ ರೇಷ್ಮೆ ಸೀರೆ ಮತ್ತು ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ, ಸ್ಥಳ: ನಂಜರಾಜ ಬಹದ್ದೂರ್ ಛತ್ರ, ವಿನೋಬಾ ರಸ್ತೆ, ಬೆಳಗ್ಗೆ 10.30 ರಿಂದ.

■ **ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ, ಅಹಿಂದ ಸಂಘಟನೆಗಳು :** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಕೇಂದ್ರ ಸರ್ಕಾರದ ಹುನ್ನಾರವನ್ನು ಖಂಡಿಸಿ ದೆಹಲಿ ಚಲೋ–ದುಂಡು ಮೇಜಿನ ಸಭೆ, ಉಪಸ್ಥಿತರು: ಮಾಜಿ ಸಚಿವ ಎಂ.ಶಿವಣ್ಣ, ಮಾಜಿ ಸಂಸದ ಕಾಗಲವಾಡಿ ಶಿವಣ್ಣ, ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಸಾಹಿತಿ ಪ್ರೊ.ಕೆ.ಎಸ್.ಭಗವಾನ್, ಮಾಜಿ ಮೇಯರ್ ಅನಂತು, ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಚಾಲಕ ದೇವಗಳ್ಳಿ ಸೋಮಶೇಖರ್, ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮು, ಮಂಜುಳ ಮಂಜುನಾಥ್, ಚುಂಚನಹಳ್ಳಿ ಮಲ್ಲೇಶ್, ಎಫ್.ಕಲೀಂ, ರಹೀಂಖಾನ್, ನಾಸಿರ್ ಪಾಷ, ಹೆಚ್.ಎಸ್.ಪ್ರಕಾಶ್, ಯೋಗೇಶ್ ಉಪ್ಪಾರ್, ರವಿನಂದನ್, ಮೊಗಣ್ಣಾಚಾರ್, ಎನ್.ಆರ್. ನಾಗೇಶ್, ಲೋಕೇಶ್‌ಕುಮಾರ್ ಮಾದಾಪುರ, ಮಹೇಂದ್ರ ಕಾಗಿನೆಲೆ, ಸ್ಥಳ: ಜಲದರ್ಶಿನಿ ಅತಿಥಿ ಗೃಹ (ಹೊಸ ಕಟ್ಟಡ), ಬೆಳಗ್ಗೆ 11.30ಕ್ಕೆ.

■ **ಡಿ. ಬನುಮಯ್ಯ ಬಾಲಕಿಯರ ಪ್ರೌಢಶಾಲೆ:** ಕಿತ್ತೂರು ರಾಣಿ ಚೆನ್ನಮ್ಮ ಜನ್ಮ ದಿನಾಚರಣೆ, ಅಧ್ಯಕ್ಷತೆ: ಶಾಲೆ ಮುಖ್ಯೋಪಾಧ್ಯಾಯ ಹೆಚ್.ಎಸ್. ತಿಪ್ಪೇಸ್ವಾಮಿ, ಪ್ರಧಾನ ಭಾಷಣ: ಸಾಹಿತಿ ಬನ್ನೂರು ಕೆ.ರಾಜು, ಮುಖ್ಯ ಅತಿಥಿಗಳು: ದೊಡ್ಡನಹುಂಡಿ ರಾಜಣ್ಣ, ಬಹುಮಾನ ವಿತರಣೆ : ಕಾವೇರಿ ಬಳಗದ ಅಧ್ಯಕ್ಷೆ ಶ್ರೀಮತಿ ಎನ್.ಕೆ.ಕಾವೇರಿಯಮ್ಮ, ಪ್ರಾಸ್ತಾವಿಕ ನುಡಿ: ಹಿರಣ್ಮಯಿ ಪ್ರತಿಷ್ಠಾನ ಅಧ್ಯಕ್ಷ ಎ. ಸಂಗಪ್ಪ, ಸ್ಥಳ: ಡಿ.ಬನುಮಯ್ಯ ಬಾಲಕಿಯರ ಪ್ರೌಢಶಾಲೆ, ಸಯ್ಯಾಜಿರಾವ್ ರಸ್ತೆ, ಬೆಳಗ್ಗೆ 11.45ಕ್ಕೆ.

■ **ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಸ್ನೇಹ ಸಿಂಚನ ಟ್ರಸ್ಟ್ :** ಸಂಸ್ಕೃತಿ ಸಿಂಚನ ಪ್ರಶಸ್ತಿ ಪ್ರದಾನ, ನವರಾತ್ರಿ ಗೊಂಬೆ ಪ್ರದರ್ಶನ ಸ್ಪರ್ಧೆಯ ಬಹುಮಾನ ವಿತರಣೆ, ಭಾವಯಾನ ಗೀತಗಾಯನ ಸಮಾರಂಭ, ಉದ್ಘಾಟನೆ : ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಎಂ.ಡಿ. ಸುದರ್ಶನ್ ಹಾಗೂ ವಿಜಯವಿಠಲ ಕಾಲೇಜಿನ ಪ್ರಾಂಶುಪಾಲ ಎಸ್. ಸತ್ಯಪ್ರಸಾದ್, ಪ್ರಶಸ್ತಿ ಪ್ರದಾನ: ಹಿರಿಯ ಸಮಾಜ ಸೇವಕರಾದ ಡಾ.ಕೆ.ರಘುರಾಂ ವಾಜಪೇಯಿ, ನಗರ ಹಾಗೂ ಜಿಲ್ಲಾ ಬ್ರಾಹ್ಮಣ ಮಹಾ ಸಭಾ ಅಧ್ಯಕ್ಷ ಡಿ.ಟಿ.ಪ್ರಕಾಶ್, ಬಹುಮಾನ ವಿತರಣೆ: ಹಿರಿಯ ಸಮಾಜ ಸೇವಕರಾದ ಸುಶೀಲ ಶ್ಯಾಮ ಸುಂದರ್, ಹಿರಿಯ ನಾಗರಿಕರ ಹಗಲು ಯೋಗಕ್ಷೇಮದ ಅಧ್ಯಕ್ಷ ಮಲೆಯೂರು ಪ್ರಭುಸ್ವಾಮಿ, ಪ್ರಾಸ್ತಾವಿಕ ನುಡಿ: ಕಸಾಪ ಕಾರ್ಯದರ್ಶಿ ಹಾಗೂ ಸ್ನೇಹಸಿಂಚನ ಟ್ರಸ್ಟ್‌ನ ಅಧ್ಯಕ್ಷೆ ಮ.ನ.ಲತಾ ಮೋಹನ್, ಸ್ಥಳ: ವಿಜಯ ವಿಠ್ಠಲ ವಿದ್ಯಾಸಂಸ್ಥೆ ಆವರಣ, ಸರಸ್ವತಿಪುರಂ, ಸಂಜೆ 4ಕ್ಕೆ.

■ **ಕುಮಾರ್ ಪ್ರದರ್ಶಕ ಕಲೆಗಳ ಕೇಂದ್ರ:** ರಾಜ್ಯ ಮಟ್ಟದ ಕಲೆಮನೆ ಕಲಾಶ್ರೀ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭ, ಪ್ರಶಸ್ತಿ ಪುರಸ್ಕೃತರು : ರಾಯಚೂರಿನ ಸಾಂಸ್ಕೃತಿಕ ಸಂಘಟಕ ಮಾರುತಿ ಬಡಿಗೇರ್, ಸಾಗರದ ಪರಿಣಿತಿ ಕಲಾಕೇಂದ್ರದ ನಿರ್ದೇಶಕ ಎಂ.ಗೋಪಾಲ್, ಮೈಸೂರು ರಾಮಾಮೃತ ಕಲಾಮಂಟಪದ ನಿರ್ದೇಶಕ ಆನಂದ ರಾಜೇ ಅರಸ್, ಭರತನಾಟ್ಯ ಕಲಾವಿದ ಎಸ್.ಎಂ. ಶರತ್, ಮೈಸೂರಿನ ಕಲಾನಿಧಿ ನೃತ್ಯಶಾಲೆಯ ನಿರ್ದೇಶಕಿ ಪದ್ಮಶೀ, ಮಂಡ್ಯದ ಶ್ರೀ ನಂದಿಕೇಶ್ವರ ಭರತನಾಟ್ಯ ಕಲಾಶಾಲೆಯ ನಿರ್ದೇಶಕಿ ಕೆ.ಎಸ್.ಶೈಲಾ, ಸ್ಥಳ: ಮಂಚೇ ಗೌಡನಕೊಪ್ಪಲಿನ ಕಲೆಮನೆ ಸಭಾಂಗಣ, ಸಂಜೆ 4.30ಕ್ಕೆ.

■ **ಕೊಡಗು ರಂಗಭೂಮಿ ಟ್ರಸ್ಟ್, ಅಯೋಧ್ಯಾ ಪ್ರಕಾಶನ :** ರಂಗಾಯಣ ಮಾಜಿ ನಿರ್ದೇಶಕ ಅಡ್ಡಂಡ ಕಾರ್ಯಪ್ಪ ಅವರು ರಚಿಸಿರುವ 'ಸತ್ಯವನ್ನೇ ಹೇಳುತ್ತೇನೆ' ಚರಿತ್ರೆಯ ಉತ್ಖನನ ನಾಟಕ ಪುಸ್ತಕದ ಲೋಕಾರ್ಪಣೆ ಸಮಾರಂಭ, ಉಪಸ್ಥಿತರು : ಸಂಸದ ಯದುವೀರ ಒಡೆಯರ್, ಚಿತ್ರನಟರೂ ಆದ ರಂಗಕರ್ಮಿ ಪ್ರಕಾಶ್ ಬೆಳವಾಡಿ, ಆದಿತ್ಯ ಅಧಿಕಾರಿ ಆಸ್ಪತ್ರೆಯ ಡಾ.ಚಂದ್ರಶೇಖರ್, ಕಲಾ ಮಂದಿರ ಆವರಣದ ಕಿರುರಂಗಮಂದಿರ, ಸಂಜೆ 5.30ಕ್ಕೆ.

■ **ಸ್ವರಾಮೃತ ಮೆಲೋಡೀಸ್:** ಗಾನ ಕೋಗಿಲೆಗಳಾದ ಎಸ್.ಜಾನಕಿ ಮತ್ತು ಕೆ.ಎಸ್. ಚಿತ್ರ ಅವರು ಹಾಡಿರುವ ಜನಪ್ರಿಯ ಚಲನಚಿತ್ರ ಗೀತೆಗಳ ಗಾಯನ ಸಂಜೆ, 'ಗಗನವು ಎಲ್ಲೋ ಭೂಮಿಯು ಎಲ್ಲೋ' ಸ್ಥಳ: ನಾದಬ್ರಹ್ಮ ಸಂಗೀತ ಸಭಾಂಗಣ, ನಂಜುಮಳಿಗೆ, ಲಕ್ಷ್ಮೀಪುರಂ, ಸಂಜೆ 5.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಬಣ್ಣದ ಬಾನಾಡಿಗಳು–ಬಾನುಲಿ ಸರಣಿ, ರಚನೆ: ಡಾ.ಕಲೀಂ ವುಲ್ಲಾ, ಪ್ರಸ್ತುತಿ: ಜಿ.ಶಾಂತಕುಮಾರ್, 6.40 ಮತ್ತು ಸಂಜೆ 5.45 ಕರಾಮುವಿವಿ ಮುಕ್ತವಾಣಿ–ಕರ್ನಾಟಕ ರಾಜ್ಯಮುಕ್ತ ವಿಶ್ವವಿದ್ಯಾನಿಲಯದ ಅಧ್ಯಯನ ಅವಕಾಶಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣಿ. ಭಾಗವಹಿಸುತ್ತಾರೆ: ಡಾ.ಸಿ.ಅನಿತಾ, ಮುಖ್ಯಸ್ಥರು, ಆಹಾರ ವಿಜ್ಞಾನ ಮತ್ತು ಪೋಷಣೆ ಹಾಗೂ ಸಂಶೋಧನಾ ವಿಭಾಗ, ಪ್ರಾಯೋಜಕರು : ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು. ಪ್ರಸ್ತುತಿ: ಎನ್.ಕೇಶವಮೂರ್ತಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಹಾಸನಾಂಬೆ ದರ್ಶನ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: ಜಿಲ್ಲಾಡಳಿತ, ಹಾಸನ, 9.00 ನಮ್ಮ ಆರೋಗ್ಯ–ವಿಶ್ವ ಅಯೋಡಿನ್ ಕೊರತೆ ಜಾಗೃತಿ ದಿನಾಚರಣೆ ಸಂದರ್ಭದಲ್ಲಿ 'ಅಯೋಡಿನ್ ಕೊರತೆಯಿಂದ ಉಂಟಾಗುವ ತೊಂದರೆಗಳು ಮತ್ತು ಪರಿಹಾರ' ಕುರಿತು ಡಾ.ಕವಿತಾ. ಅವರೊಂದಿಗೆ ಮಾತುಕತೆ. ನಂತರ ಸ್ತನ ಕ್ಯಾನ್ಸರ್ ಜಾಗೃತಿ ಮಾಸಾಚರಣೆಯ ಸಂದರ್ಭದಲ್ಲಿ ಸ್ತನ ಕ್ಯಾನ್ಸರ್ ಲಕ್ಷಣಗಳು, ಚಿಕಿತ್ಸೆ ಕುರಿತು ತಿಳಿಸಿಕೊಡಲಿದ್ದಾರೆ ಡಾ.ಮೇಖಲಾ ಶ್ವೇತಾದ್ರಿ ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್, 9.30 ಗಾಂಧಿ ಸ್ಮೃತಿ, 9.45 ಹಾಸನಾಂಬೆ ದರ್ಶನ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: ಜಿಲ್ಲಾ ಪ್ರವಾಸೋದ್ಯಮ ಇಲಾಖೆ, ಹಾಸನ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಟಿ.ವಿ. ಗೋಪಾಲಕೃಷ್ಣ –ಮೃದಂಗ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ 'ಸಂಗೀತ ಸಂಭ್ರಮ ನಾದಲಯ ಸಂಗಮ', ಪ್ರಸ್ತುತಿ: ಹೆಚ್.ಎಲ್.ಶಿವಶಂಕರಸ್ವಾಮಿ **ಮಧ್ಯಾಹ್ನ:** 12.30 ದೇವರನಾಮ–ಎ. ಆರ್.ರಾಗಿಣಿ, 12.45 ಕಾದಂಬರಿ ವಿಹಾರ–ಅನಕೃ ಅವರ 'ಉದಯರಾಗ' ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ: ಉಮೇಶ್. ಎಸ್.ಎಸ್., 1.00 ಸಕ್ಕರೆ ನಾಡಿನ ಅಕ್ಕರೆಯ ಲೇಖಕರು, ಲೇಖಕರು ಹಾಗೂ ಪ್ರಸ್ತುತಿ: ಶಭಾನ ಮತ್ತು ಕೀರ್ತಿ, ಪರಿಕಲ್ಪನೆ: ಅಬ್ದುಲ್ ರಶೀದ್, 1.20 ಹಾಸನಾಂಬೆ ದರ್ಶನ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: ಜಿಲ್ಲಾಡಳಿತ, ಹಾಸನ, 1.25 ಭಾವಗೀತೆಗಳು–ಇಂದ್ರಾಣಿ ಅನಂತರಾಮ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40ದಾರಿ ದೀಪ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ನಟರಾಜನ್. ಎಸ್.ಪಿ.–ಕೊಳಲು ವಾದನ, 4.00 ಮಹಿಳಾ ರಂಗ, 4.30 ವೃತ್ತಿ ಮಾರ್ಗದರ್ಶನ–ಮೈಸೂರು ವಿಶ್ವವಿದ್ಯಾಲಯದ ಮಾನಸ ಗಂಗೋತ್ರಿಯಲ್ಲಿರುವ ಇಎಂಆರ್‌ಸಿ ಅಂದರೆ ಎಜುಕೇಶನಲ್ ಮಲ್ಟಿಮೀಡಿಯಾ ರಿಸರ್ಚ್ ಸೆಂಟರ್‌ನ ಚಟುವಟಿಕೆಗಳು ಕುರಿತು ಇಎಂಆರ್‌ಸಿ ಕೇಂದ್ರದ ನಿರ್ದೇಶಕಿ ಡಾ. ಸಪ್ನಾ. ಎಂ.ಎಸ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ : ಬೇದ್ರೆ ಮಂಜುನಾಥ್, 6.50 ಕೃಷಿರಂಗ: ಸಮಗ್ರ ಕೃಷಿ ಪ್ರಾಮುಖ್ಯತೆ ಕುರಿತು ಕೆ.ಆರ್. ಪೇಟೆ ತಾಲೂಕು ಮಡುವಿನಕೋಡಿ ಅಂಚೆ ಹೊಸಕೋಟೆಯ ಲಕ್ಷ್ಮಿ ಅವರೊಂದಿಗೆ ಸಂದರ್ಶನ, ಸಂದರ್ಶಕರು: ಎನ್. ಕೇಶವಮೂರ್ತಿ, 8.00 ಸಂಧ್ಯಾರಾಗ–ಹಿರಿಯರಾದ ಟಿ. ನರಸೀಪುರದ ರಂಗಗೀತೆ ಕಲಾವಿದ ಕಿರುಗಸೂರು ರಾಜಪ್ಪ ಅವರೊಂದಿಗೆ ಮಾತುಕತೆ. ಭಾಗವಹಿಸುತ್ತಾರೆ : ಟಿ.ವಿ. ವಿದ್ಯಾಶಂಕರ್, ಪ್ರಸ್ತುತಿ : ಜಿ.ಶಾಂತಕುಮಾರ್, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ : ಎಸ್.ಬಾಲಚಂದರ್– ವೀಣಾ ವಾದನ, 10.00 ಜನಪದ ಸಂಗೀತ, 10.30 ಸವಿನೆನಪು

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 25 ಶುಕ್ರವಾರ 2024

ಸಂಪುಟ: 45 | ಸಂಚಿಕೆ: 189 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಚನ್ನಪಟ್ಟಣ ವಿಧಾನಸಭಾ ಕ್ಷೇತ್ರ ಉಪ ಚುನಾವಣೆ

ನಿಖಿಲ್ ಕುಮಾರಸ್ವಾಮಿ ಎನ್‌ಡಿಎ ಅಭ್ಯರ್ಥಿ

● ಸಾಮಾನ್ಯ ಕಾರ್ಯಕರ್ತನ ಕಣಕ್ಕಿಳಿಸಲು ಜೆಡಿಎಸ್ ಚಿಂತನೆ ನಡುವೆ ಬಿಜೆಪಿ ನಾಯಕರ ಸಲಹೆಯಂತೆ ಕುಟುಂಬ ಸದಸ್ಯರಿಗೆ ಮಣೆ ● ಚುನಾವಣಾ ರಣಾಂಗಣವಾದ ಗೊಂಬೆ ನಗರಿ!



ಚನ್ನಪಟ್ಟಣ ಎನ್‌ಡಿಎ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಅವರನ್ನು ಬಿಜೆಪಿ ನಾಯಕರು ಅಭಿನಂದಿಸಿದರು.

ಬೆಂಗಳೂರು, ಅ.24(ಕೆಎಂಶಿ)– ಮಿತ್ರ ಪಕ್ಷ ಬಿಜೆಪಿ ನಾಯಕರ ಒತ್ತಡಕ್ಕೆ ಮಣಿದ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ತಮ್ಮ ಪುತ್ರ ನಿಖಿಲ್ ಕುಮಾರಸ್ವಾಮಿ ಅವರನ್ನು ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಎನ್‌ಡಿಎ ಅಭ್ಯರ್ಥಿಯಾಗಿ ಕಣಕ್ಕಿಳಿಸಿದ್ದಾರೆ.

ನಿಖಿಲ್ ಕುಮಾರಸ್ವಾಮಿ ಬಿಜೆಪಿ ಮುಖಂಡರ ಜೊತೆಗೂಡಿ ನಾಳೆ ತಮ್ಮ ಉಮೇದುವಾರಿಕೆಯನ್ನು ಸಲ್ಲಿಸಲಿದ್ದಾರೆ.

ಕಳೆದ ಮೂರು ದಿನಗಳಿಂದ ಎನ್‌ಡಿಎ ಅಭ್ಯರ್ಥಿ ಆಯ್ಕೆಗೆ ನಡೆದ ಕಸರತ್ತಿನ ವೇಳೆ, ತಾವು ಸ್ಪರ್ಧಿಸುವುದಿಲ್ಲ ಎಂದಿದ್ದ ನಿಖಿಲ್, ಅನಿವಾರ್ಯವಾಗಿ ಕಣಕ್ಕಿಳಿಯುವ ಪರಿಸ್ಥಿತಿ ನಿರ್ಮಾಣವಾಯಿತು.

ಬಿಜೆಪಿ ಹಿರಿಯ ಮುಖಂಡ, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು, ನಿಖಿಲ್ ಅವರನ್ನೇ ಕಣಕ್ಕಿಳಿಸಬೇಕೆಂದು ಹಿಡಿದ ಪಟ್ಟಿಗೆ ದೇವೇಗೌಡ ಹಾಗೂ ಕುಮಾರಸ್ವಾಮಿ ಅವರು ಮಣಿದಿದ್ದಾರೆ. ■ 6ನೇ ಪುಟಕ್ಕೆ

ಅದ್ಧೂರಿ ಮೆರವಣಿಗೆಯೊಂದಿಗೆ ಕಾಂಗ್ರೆಸ್ ಅಭ್ಯರ್ಥಿ

ಯೋಗೇಶ್ವರ್ ನಾಮಪತ್ರ ಸಲ್ಲಿಕೆ

ಕನಿಷ್ಠ 50 ಸಾವಿರ ಅಂತರದಲ್ಲಿ ಯೋಗೇಶ್ವರ್ ಗೆಲ್ಲುತ್ತಾರೆ: ಸಿಎಂ ಸಿದ್ದರಾಮಯ್ಯ ವಿಶ್ವಾಸ



ಚನ್ನಪಟ್ಟಣ ನಗರದ ಮಿನಿ ವಿಧಾನಸೌಧದಲ್ಲಿ ಚನ್ನಪಟ್ಟಣ ಕ್ಷೇತ್ರದ ಉಪ ಚುನಾವಣಾಧಿಕಾರಿ ಪಿ.ಕೆ.ಬಿನೋಯ್ ಅವರಿಗೆ ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ.ಯೋಗೇಶ್ವರ್ ನಾಮಪತ್ರ ಸಲ್ಲಿಸಿದರು. ಈ ಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ರಾಮಲಿಂಗಾರೆಡ್ಡಿ ಹಾಗೂ ರಾಮನಗರ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಗಂಗಾಧರ್ ಉಪಸ್ಥಿತರಿದ್ದರು.

ಚನ್ನಪಟ್ಟಣ, ಅ.24(ಮೋಹನ್‌ರಾಜ್)– ರಾಜ್ಯದ ಮೂರು ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆ ಪೈಕಿ ರಂಗು ಪಡೆದಿರುವ ಚನ್ನಪಟ್ಟಣದ ಕ್ಷೇತ್ರದಲ್ಲಿ ಗುರುವಾರ ಕಾಂಗ್ರೆಸ್ ಅಭ್ಯರ್ಥಿ, ಮಾಜಿ ಸಚಿವ ಸಿ.ಪಿ.ಯೋಗೇಶ್ವರ್ ನಾಮಪತ್ರ ಸಲ್ಲಿಸಿದರು. ಪಟ್ಟಣದ ಮಂಗಳವಾರಪೇಟೆಯಿಂದ ತೆರೆದ ವಾಹನದಲ್ಲಿ ಬೃಹತ್ ರೋಡ್ ಶೋ ಮೂಲಕ ಮಿನಿ ವಿಧಾನಸೌಧಕ್ಕೆ ಆಗಮಿಸಿ ಚುನಾವಣಾಧಿಕಾರಿ ಪಿ.ಕೆ.ಬಿನೋಯ್ ಅವರಿಗೆ ನಾಮಪತ್ರ ಸಲ್ಲಿಸಿದರು. ರೋಡ್ ಶೋನಲ್ಲಿ ಯೋಗೇಶ್ವರ್‌ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಾಥ್ ನೀಡಿದರು.

ಮಂಗಳವಾರಪೇಟೆ ಬಳಿ ರೋಡ್ ಶೋನಲ್ಲಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಚನ್ನಪಟ್ಟಣ ಉಪ ಚುನಾವಣೆ ಫಲಿತಾಂಶಕ್ಕೆ ನಾನು ಕಾಯುತ್ತಿದ್ದು, ಕನಿಷ್ಠ 50 ಸಾವಿರ ಮತಗಳ ಅಂತರದಿಂದ ■ 6ನೇ ಪುಟಕ್ಕೆ

ಹೈಕೋರ್ಟ್ ಏಕಸದಸ್ಯ ಪೀಠದ ತೀರ್ಪು ಪ್ರಶ್ನಿಸಿ ಸಿಎಂ ಸಿದ್ದರಾಮಯ್ಯ ಮೇಲ್ಮನವಿ



ಬೆಂಗಳೂರು, ಅ.24 (ಬಿಎಲ್‌ಯು)– ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಮುಡಾ ಹಗರಣದ ಬಗ್ಗೆ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ್ದ ಆದೇಶ ಎತ್ತಿ ಹಿಡಿದ ಹೈಕೋರ್ಟ್ ಏಕಸದಸ್ಯ ಪೀಠದ ತೀರ್ಪು ಪ್ರಶ್ನಿಸಿ ಸಿದ್ದರಾಮಯ್ಯ ಇಂದು ಹೈಕೋರ್ಟ್ ವಿಭಾಗೀಯ ಪೀಠಕ್ಕೆ ಮೇಲ್ಮನವಿ ಸಲ್ಲಿಸಿದ್ದಾರೆ.

ಶೇ.50:50 ಅನುಪಾತದಲ್ಲಿ ಮುಡಾದಿಂದ ಮೈಸೂರಿನ ವಿಜಯನಗರದಲ್ಲಿ 14 ನಿವೇಶನ ಪಡೆದ ಪ್ರಕರಣ ಸಂಬಂಧ ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ್ದರು. ಇದನ್ನು ಪ್ರಶ್ನಿಸಿ ಸಿದ್ದರಾಮಯ್ಯ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದರು. ಹೈಕೋರ್ಟ್ ನ್ಯಾಯಮೂರ್ತಿ ನಾಗಪ್ರಸನ್ನ ನೇತೃತ್ವದ ಏಕಸದಸ್ಯ ಪೀಠ ಈ ಬಗ್ಗೆ ಸುದೀರ್ಘ ವಾದ–ಪ್ರತಿವಾದ ಆಲಿಸಿ ಅಂತಿಮವಾಗಿ ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿರುವ ಕ್ರಮ ಸರಿ ಇದೆ ಎಂದು ತೀರ್ಪು ನೀಡಿತ್ತು. ಅದೇ ವೇಳೆ ವಿಚಾರಣೆ ನಡೆಸುತ್ತಿದ್ದ ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಸಿದ್ದರಾಮಯ್ಯ ವಿರುದ್ಧದ ಮುಡಾ ಹಗರಣದ ಬಗ್ಗೆ ತನಿಖೆ ನಡೆಸಿ ಡಿ.24 ರೊಳಗೆ ತನಿಖಾ ವರದಿ ನೀಡುವಂತೆ ಆದೇಶಿಸಿತ್ತು.

ರಸ್ತೆಯಲ್ಲಿ ಜೋತು ಬಿದ್ದಿದ್ದ ವಿದ್ಯುತ್ ತಂತಿ ತಗುಲಿ

ಇಬ್ಬರು ರೈತರ ಸಾವು



ನಾಗೇಂದ್ರ



ಮಲ್ಲೇಶ

ಚಾಮರಾಜನಗರ, ಅ.24–ಜಮೀನಿಗೆ ಹೋಗುವ ರಸ್ತೆಯಲ್ಲಿ ಜೋತು ಬಿದ್ದಿದ್ದ ವಿದ್ಯುತ್ ತಂತಿ ತಗುಲಿ ಇಬ್ಬರು ರೈತರು ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ತಾಲೂಕಿನ ಅಯ್ಯನಪುರ–ಮಲ್ಲೇದೇವನಹಳ್ಳಿ ಗ್ರಾಮದ ನಡುವೆ ರಸ್ತೆಯಲ್ಲಿ ಬುಧವಾರ ರಾತ್ರಿ ನಡೆದಿದೆ.

ಅಯ್ಯನಪುರ ಗ್ರಾಮದ ನಾಗೇಂದ್ರ (48) ಹಾಗೂ ಮಲ್ಲೇಶ (45) ಮೃತಪಟ್ಟ ರೈತರು.

ನಾಗೇಂದ್ರ ಹಾಗೂ ಮಲ್ಲೇಶ ಬುಧವಾರ ರಾತ್ರಿ ಸುಮಾರು 10 ಗಂಟೆಯಲ್ಲಿ ಒಂದೇ ಬೈಕ್‌ನಲ್ಲಿ ಜಮೀನಿಗೆ ತೆರಳಿದ್ದರು. ನಂತರ ವಾಪಸ್ ಗ್ರಾಮಕ್ಕೆ ಬರುವಾಗ ರಸ್ತೆಯಲ್ಲಿ ಜೋತು ಬಿದ್ದಿದ್ದ ವಿದ್ಯುತ್ ತಂತಿ ತಗುಲಿದೆ. ಬೈಕ್ ಓಡಿಸುತ್ತಿದ್ದ ನಾಗೇಂದ್ರ ಕುತ್ತಿಗೆಗೆ ವಿದ್ಯುತ್ ತಂತಿ ತಗುಲಿದೆ. ಹಿಂಬದಿಯಲ್ಲಿ ಕುಳಿತಿದ್ದ ಮಲ್ಲೇಶ್‌ಗೂ ವಿದ್ಯುತ್ ತಂತಿ ತಗುಲಿ ಇಬ್ಬರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಘಟನೆ ■ 6ನೇ ಪುಟಕ್ಕೆ

ಮುಡಾ ನಿವೇಶನ ಹಂಚಿಕೆ ಹಗರಣಕ್ಕೆ ದಿನಕ್ಕೊಂದು ಹೊಸ ತಿರುವು

ಲೋಕಾಯುಕ್ತರಿಂದ ಮಾಜಿ ನಗರಾಭಿವೃದ್ಧಿ ಸಚಿವ ಬಿ.ಎನ್.ಬಚ್ಚೇಗೌಡರ ವಿಚಾರಣೆ

● 26 ವರ್ಷಗಳ ಹಿಂದಿನ ಟಿಪ್ಪಣಿಗೆ ಮರು ಜೀವ ● ಬೆಂಗಳೂರು ಮನೆಯಲ್ಲಿ ಬಚ್ಚೇಗೌಡರಿಗೆ ಪ್ರಶ್ನೆಗಳ ಸುರಿಮಳೆ ● ಡಿ ನೋಟಿಫೈ ಮಾಡಿದ ಕಾರಣ ಕೇಳಿದ ಲೋಕಾಯುಕ್ತರು ● ರಾಜಕೀಯ ನಿವೃತ್ತಿ ಘೋಷಿಸಿದ್ದ ಬಚ್ಚೇಗೌಡರಿಗೆ ಹಗರಣದ ಬಿಸಿ




ಬಿ.ಎನ್.ಬಚ್ಚೇಗೌಡ ಮಾಜಿ ಸಚಿವ



ಉದೇಶ್ ಲೋಕಾಯುಕ್ತ ಎಸ್ಪಿ

ಮೈಸೂರು, ಅ.24(ಬಿಎಲ್‌ಯು)– ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಹೈ ಪ್ರೊಫೈಲ್ ಮುಡಾ ಹಗರಣ ಅನಿರೀಕ್ಷಿತ ತಿರುವು ಪಡೆಯುತ್ತಿದ್ದು, ಮೈಸೂರು ನಗರಕ್ಕೆ ಮಾತ್ರ ಸೀಮಿತವಾಗಿದ್ದ ಲೋಕಾಯುಕ್ತ ತನಿಖೆ ಈಗ ರಾಜಧಾನಿ ಬೆಂಗಳೂರಿಗೂ ವ್ಯಾಪಿಸಿದೆ. ಸಿದ್ದರಾಮಯ್ಯ ಪತ್ನಿ ಪಾರ್ವತಿ ಅವರಿಗೆ ಸೇರಿದ ಮೈಸೂರಿನ ಕೆಸರೆ ಭೂಮಿ ಡಿ ನೋಟಿಫೈಗೆ ಅನುಮೋದನೆ ನೀಡಿದ್ದ ಅಂದಿನ ನಗರಾಭಿವೃದ್ಧಿ ಸಚಿವ ಬಿ.ಎನ್.ಬಚ್ಚೇಗೌಡ ಅವರನ್ನು ಲೋಕಾಯುಕ್ತರು ತನಿಖೆಗೊಳಪಡಿಸಿದ್ದಾರೆ.

ಸಿದ್ದರಾಮಯ್ಯ ವಿರುದ್ಧದ ಮುಡಾ ಹಗರಣ ನಿರೀಕ್ಷೆ ಮಾಡದಂತಹ ಹಲವು ರಾಜಕಾರಣಿಗಳ ಕೊರಳಿಗೆ ಸುತ್ತಿಕೊಳ್ಳುತ್ತಿದ್ದು, ಅಚ್ಚರಿ ಮೂಡಿಸಿದೆ. ಶೇಕಡ 50:50ರ ಅನುಪಾತದ ನಿವೇಶನವನ್ನು ಸಿದ್ದರಾಮಯ್ಯ ಪತ್ನಿ ಪಾರ್ವತಿ ಇತ್ತೀಚಿಗೆ ಪಡೆದಿದ್ದರೂ ಲೋಕಾಯುಕ್ತರು ಇದರ ಮೂಲವನ್ನು ಕೆದಕುತ್ತಾ ಹೋಗಿದ್ದು, ಸಾಕಷ್ಟು ಕುತೂಹಲ ಮೂಡಿಸಿದೆ. ಪಾರ್ವತಿ ಅವರಿಗೆ ದಾನವಾಗಿ ಬಂದ ಮೈಸೂರಿನ ಕೆಸರೆ ಸರ್ವೆ ■ 6ನೇ ಪುಟಕ್ಕೆ



ದಿನಾಂಕ: 13-6-96.

ಲೋಕಾಯುಕ್ತರಿಂದ ನಿವೃತ್ತ ಐಎಎಸ್ ಅಧಿಕಾರಿ ವಿಚಾರಣೆ

ಸಿದ್ದರಾಮಯ್ಯ ವಿರುದ್ಧದ ಮುಡಾ ಹಗರಣ ಸಂಬಂಧ ಸರ್ಕಾರ ಸೇವೆ ಸಲ್ಲಿಸಿ ನಿವೃತ್ತರಾದ ಹಲವು ಅಧಿಕಾರಿಗಳನ್ನು ಕಾಡುತ್ತಿದೆ. ನಗರಾಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿಯಾಗಿದ್ದ ಹಿರಿಯ ಐಎಎಸ್ ಅಧಿಕಾರಿ ಸುಬ್ರಹ್ಮಣ್ಯ ರಾವ್ ಅವರನ್ನು ಲೋಕಾಯುಕ್ತರು ವಿಚಾರಣೆಗೊಳಪಡಿಸಿದ್ದಾರೆ. ಸುಬ್ರಹ್ಮಣ್ಯರಾವ್ ಅವರಿಗೂ ವಯಸ್ಸಾಗಿರುವ ಕಾರಣ ಲೋಕಾಯುಕ್ತ ಎಸ್ಪಿ ಟಿ.ಜೆ.ಉದೇಶ್ ನೇತೃತ್ವದ ತಂಡ ಬೆಂಗಳೂರಿನ ಅವರ ಮನೆಗೆ ಹೋಗಿ ನಿನ್ನೆ ವಿಚಾರಣೆ ಮಾಡಿದೆ.

ಪ್ರಾಧಿಕಾರದ ಅಧಿಕಾರಿಗಳು, ಸಿಬ್ಬಂದಿಗೆ ಇಡಿ ನೋಟಿಸ್

ಮೈಸೂರು, ಅ.24(ಆರ್‌ಕೆ)–ಮುಖ್ಯಮಂತ್ರಿ ಸಿದ್ದರಾಮಯ್ಯನವರ ಪತ್ನಿ ಬಿ.ಎಂ. ಪಾರ್ವತಿ ಅವರಿಗೆ 14 ನಿವೇಶನ ಮಂಜೂರು ಹಾಗೂ ಶೇ.50:50ರ ಅನುಪಾತ ದಡಿ ಸಾವಿರಾರು ನಿವೇಶನಗಳ ಅಕ್ರಮ ಹಂಚಿಕೆ ಹಗರಣ ಕುರಿತಂತೆ ತನಿಖೆ ನಡೆಸುತ್ತಿರುವ ಜಾರಿ ನಿರ್ದೇಶನಾಲಯವು ಇಂದು ಮುಡಾದ 8 ಮಂದಿ ಅಧಿಕಾರಿಗಳು ಹಾಗೂ ಸಿಬ್ಬಂದಿಗಳಿಗೆ ನೋಟಿಸ್ ಜಾರಿ ಮಾಡಿದೆ. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ವಿಶೇಷ ಭೂ ಸ್ವಾಧೀನಾಧಿಕಾರಿ (SLAO) ಕಚೇರಿ ವ್ಯವಸ್ಥಾಪಕಿ ಶೃತಿ, ವಿಶೇಷ ತಹಶೀಲ್ದಾರ್ ರಾಜಶೇಖರ್, ಅಭಿಲೇಖಾಲಯ (Record Room)ದ ಇನ್‌ಚಾರ್ಜ್ ರವಿ, ಈ ಹಿಂದಿನ ಆಯುಕ್ತರ ಆಪ್ತ ಸಹಾಯಕ ಪ್ರಶಾಂತ್, ಶೀಘ್ರ ಲಿಪಿಗಾರ (Stenographer) ಚಂದ್ರು, ಇಂಜಿನಿಯರ್‌ಗಳಾದ ಆರ್.ಶ್ರೀನಿವಾಸ ಮತ್ತು ರಾಜಶೇಖರ್‌ಗೆ ನೋಟಿಸ್ ನೀಡಿರುವ ■ 6ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಅತ್ತೆ : ಅಳಿಯಂದ್ರೆ, ನೀವು ಏನ್ ಕೆಲಸ ಮಾಡ್ತೀರಿ?
ಅಳಿಯ : ನಾನು ಪೈಲಟ್ ಆಗಿದೀನಿ
ಅತ್ತೆ : ಯಾವ ಏರ್‌ಲೈನ್ಸಲ್ಲಿ ಪೈಲಟ್ ಆಗಿದೀರಿ?
ಅಳಿಯ : ಮದುವೆ ಮನೇಲಿ ಡ್ರೋನ್ ಹಾರಿಸೋ ಕೆಲಸ ಮಾಡ್ತೀನಿ ಅತ್ತೆ!

ಮೈಸೂರು ಮಿತ್ರ

ಶುಕ್ರವಾರ, 25 ಅಕ್ಟೋಬರ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಸಾವಿನ ಬಗ್ಗೆ ಎಚ್ಚರಿಸಲು ಕಾಲರಾಯನು ವರ್ಷಕ್ಕೊಮ್ಮೆ
ಗಂಟೆ ಬಾರಿಸುವ ದಿನವೇ ಜನ್ಮ ದಿನ – ಬೀಚಿ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು	ಅಡ್ಡಗೋಡೆಯ ಮೇಲೆ ದೀಪ ಇಟ್ಟ ಹಾಗೆ

ನಿಮ್ಮ ಪತ್ರಗಳು

■ ಪಾಲಿಕೆಯಿಂದ ತುರ್ತು ಸ್ಪಂದನೆ: ಶ್ಲಾಘನೀಯ

ಮಾನ್ಯರೆ,

ಮೈಸೂರು ನಗರಪಾಲಿಕೆ ವ್ಯಾಪ್ತಿಯ ಬೀದಿದೀಪಗಳ ದುರಸ್ತಿಗೆ ಸಂಬಂಧಿಸಿದಂತೆ ಮೈಸೂರು ನಗರಪಾಲಿಕೆ ಅಳವಡಿಸಿಕೊಂಡಿರುವ ನಿಯಂತ್ರಣ ಕೊಠಡಿ ಶುಲ್ಕ ರಹಿತ ದೂರವಾಣಿ ಸಂಖ್ಯೆ 18004255925 ಕರೆ ಮಾಡಿದಲ್ಲಿ ಅವರು ಸ್ಪಂದಿಸುವ ರೀತಿ ಅತ್ಯಂತ ಶ್ಲಾಘನೀಯ. ಪಾಲಿಕೆ ರಾಜ್ಯದಲ್ಲಿಯೇ ಪ್ರಥಮವಾಗಿ ಅಳವಡಿಸಿಕೊಂಡಿರುವ ವ್ಯವಸ್ಥೆಯಾಗಿರುವುದಾಗಿ ತಿಳಿದುಬಂದಿದೆ. ಸಾಮಾನ್ಯವಾಗಿ ಕರೆ ಮಾಡಿದ ಐದು ನಿಮಿಷದಲ್ಲಿ ದುರಸ್ತಿ ಮಾಡುವ ಕೆಲಸಗಾರರಿಂದ ವಿವರ ಪಡೆಯುವ ಮತ್ತೊಂದು ಕರೆ ಬರುತ್ತದೆ. ದೂರು ನೀಡಿದ ಅರ್ಧ ಗಂಟೆಯಲ್ಲಿ ಕೆಟ್ಟಿರುವ ದೀಪವನ್ನು ಸರಿಪಡಿಸಲಾಗುತ್ತದೆ. ಈ ಅನುಭವ ನನಗೆ ಎರಡು ಬಾರಿಯಾಗಿದೆ. ಮೊನ್ನೆಯಂತೂ ಮಳೆಯಲ್ಲಿಯೇ ಬಂದು ದುರಸ್ತಿಪಡಿಸಿರುತ್ತಾರೆ. ಪಾಲಿಕೆ ಇತರೆ ಕಾರ್ಯವನ್ನು ನಿಗದಿತ ಸಮಯದಲ್ಲಿ ಮಾಡುತ್ತದೋ ಇಲ್ಲವೋ ಆದರೆ ಈ ಕಾರ್ಯದಲ್ಲಿನ ಬದ್ಧತೆಗೆ ಶ್ಲಾಘಿಸಬೇಕಾದದ್ದು ನಮ್ಮ ಕರ್ತವ್ಯವೂ ಹೌದು. ಹಂತ ಹಂತವಾಗಿ ಇತರೆ ದೂರುಗಳ ಬಗ್ಗೆಯೂ ಇದೇ ರೀತಿಯ ಮಿಂಚಿನ ಕಾರ್ಯಾಚರಣೆಯನ್ನು ಅಳವಡಿಸಿಕೊಳ್ಳಲೆಂಬುದು ಆಶಯ.

–ಕೆ.ಎಂ. ನಾಗರಾಜು, ವಿಜಯನಗರ 1ನೇ ಹಂತ, ಮೈಸೂರು

■ ಜೆಎಸ್‌ಎಸ್ ಬಡಾವಣೆಯಲ್ಲಿ ಮುಳ್ಳಿನ ಗಿಡಗಳನ್ನು ತೆರವುಗೊಳಿಸಿ

ಮಾನ್ಯರೆ,

ಮೈಸೂರಿನ ಜೆಎಸ್‌ಎಸ್ 2ನೇ ಹಂತ ಬಡಾವಣೆ ಮುಖ್ಯ ರಸ್ತೆಯಲ್ಲಿ ಮುಳ್ಳಿನ ಇತರೆ ಗಿಡಗಂಟಿಗಳು ಬೆಳೆದು ನಿಂತಿವೆ. ಇದರಿಂದ ವಾಯುವಿಹಾರಿಗಳಿಗೆ ತುಂಬಾ ತೊಂದರೆಯಾಗುತ್ತಿದೆ. ಅಲ್ಲದೆ ದ್ವಿಚಕ್ರ ವಾಹನ ಚಾಲಕರಿಗೂ ತುಂಬಾ ಕಿರಿಕಿರಿಯಾಗುತ್ತಿದೆ. ಇದರಿಂದ ಅನಾಹುತಗಳು ಸಂಭವಿಸುವುದುಂಟು. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಮುಳ್ಳಿನ ಗಿಡಗಂಟಿಗಳನ್ನು ತೆರವುಗೊಳಿಸಬೇಕೆಂದು ಈ ಮೂಲಕ ಮನವಿ.

–ರಾಜೇಂದ್ರ, ಮೈಸೂರು.

■ ಏನೆಂದು ಕರೆಯೋಣ?

ಮಾನ್ಯರೆ,

'ಸೈನಿಕ' ಎಂಬ ಚಲನಚಿತ್ರದಲ್ಲಿ ಸೈನಿಕನ ಪಾತ್ರವನ್ನು ವಹಿಸಿದ್ದಾರೆಂಬ ಕಾರಣದಿಂದ ಸಿ.ಪಿ.ಯೋಗೇಶ್ವರ್ ಅವರನ್ನು ನಮ್ಮ ಮಾಧ್ಯಮಗಳು ಹಾಗೂ ಸುದ್ದಿವಾಹಿನಿಗಳು 'ಸೈನಿಕ' ಎಂದೇ ಕರೆಯುತ್ತಿವೆ. 'ಸೈನಿಕ' ಎಂಬ ಚಲನಚಿತ್ರದಲ್ಲಿ ನಟಿಸಿರುವ ನಟನನ್ನು 'ಸೈನಿಕ' ಎಂದೇ ಕರೆಯುವುದಾದರೆ.... ಅಯೋಗ್ಯ, ಗುಲಾಮ, ಹುಚ್ಚ, ಪೊರ್ಕಿ ಮುಂತಾದ ಚಲನಚಿತ್ರಗಳಲ್ಲಿ ನಟಿಸಿರುವ ನಟರನ್ನು ನಮ್ಮ ವಾಹಿನಿಗಳು ಮತ್ತು ಮಾಧ್ಯಮಗಳು ಏನೆಂದು ಕರೆಯುತ್ತವೆ?

–ಪಿ.ಜೆ.ರಾಘವೇಂದ್ರ ನ್ಯಾಯವಾದಿ ಮೈಸೂರು

■ ನಮ್ಮ ಸಮಸ್ಯೆ ಕೇಳುವವರ್ಯಾರು?



ಮಾನ್ಯರೆ,

ಮೈಸೂರಿನ ಶ್ರೀರಾಂಪುರ, ವಾರ್ಡ್ ನಂ.64ರಲ್ಲಿರುವ ಸೂರ್ಯ ಬಡಾವಣೆಯಲ್ಲಿ ಮಳೆ ನೀರು ಕಾಮಗಾರಿ ಅಪೂರ್ಣಗೊಂಡಿದೆ. ಅಲ್ಲದೆ ಕಾಮಗಾರಿಗೆ ಅಳವಡಿಸಲಾಗಿರುವ ಪೈಪ್‌ಲೈನ್ ಲೀಕೇಜ್ ಆಗಿ ಕೊಳಚೆ ನೀರು ಮಿಶ್ರಿತಗೊಂಡು ದುರ್ವಾಸನೆ ಬೀರುತ್ತಿದೆ. ಇದರಿಂದ ಬಡಾವಣೆಯ ನಿವಾಸಿಗಳು ವಾಸಿಸಲು ಕಷ್ಟಪಡುವಂತಾಗಿದೆ. ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ದೂರು ನೀಡಿದರೂ ಯಾವುದೇ ಪ್ರಯೋಜನವಾಗಿಲ್ಲ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಇತ್ತ ಗಮನಹರಿಸಿ ಈ ಸಮಸ್ಯೆಯನ್ನು ಪರಿಹರಿಸಬೇಕೆಂದು ಈ ಮೂಲಕ ಮನವಿ.

–ಸತೀಶ್, ಮೈಸೂರು.

■ ಹೆಚ್ಚಿನ ಬಸ್ ಸೌಲಭ್ಯ ಕಲ್ಪಿಸಿಕೊಡಲು ಮನವಿ

ಮಾನ್ಯರೆ,



ಸರಗೂರು ತಾಲೂಕಿನ ಚಾಮಲಾಪುರ, ಕುಂದೂರು, ಕಲ್ಲಂಬಾಳು, ನಂಜೀಪುರ, ಕಟ್ಟೆಹುಣಸೂರು ಈ ಮಾರ್ಗವಾಗಿ ಹೆಚ್ಚಿನ ಸರ್ಕಾರಿ ಬಸ್ಸುಗಳ ಸಂಚಾರ ವಿಲ್ಲದೆ ಸಾರ್ವಜನಿಕರಿಗೆ, ವಿದ್ಯಾರ್ಥಿಗಳಿಗೆ, ನೌಕರರಿಗೆ, ವ್ಯಾಪಾರಸ್ಥರಿಗೆ, ರೋಗಿಗಳಿಗೆ ತುಂಬಾ ತೊಂದರೆಯಾಗಿ ದಿನಂಪ್ರತಿ ನರಕಯಾತನೆ ಅನುಭವಿಸುತ್ತಿದ್ದಾರೆ. ಅನೇಕ ಬಾರಿ ದೂರು ನೀಡಿದರೂ ಪ್ರಯೋಜನವಾಗಿಲ್ಲ. ಈ ಮಾರ್ಗವಾಗಿ ಒಂದೇ ಬಸ್ಸು ಮೂರು ಬಾರಿ ಸಂಚರಿಸುತ್ತದೆ. ಅದು ಕೂಡ ಸರಿಯಾದ ವೇಳೆಗೆ ಬರುವುದಿಲ್ಲ. ಇದರಿಂದ ಬೇಸತ್ತ ಜನರು ಡಿಪೋಗೆ ಮತ್ತು ಸರ್ಕಾರಕ್ಕೆ ಶಾಪ ಹಾಕುತ್ತಾರೆ. ಇದು ಪ್ರತಿದಿನವೂ ರೋದನೆಯಾಗಿದೆ. ಒಮ್ಮೊಮ್ಮೆ ಈ ಬಸ್ಸು ಬರದಿದ್ದರೆ ಅಧೋಗತಿ. ಈ ಬಸ್ಸಿನಲ್ಲಿ ಕಂಡಕ್ಟರ್ ರಹಿತವಾಗಿರುವುದರಿಂದ ಡ್ರೈವರ್ ಪ್ರಯಾಣಿಕರಿಗೆ ಟಿಕೆಟ್ ನೀಡಿ ಮುಂದೆ ಹೋಗಬೇಕಾಗಿರುವುದರಿಂದ ಇಲ್ಲೂ ಕೂಡ ಇನ್ನೂ ತಡವಾಗುತ್ತದೆ. ಸರಿಯಾದ ವೇಳೆಗೆ ತಲುಪುವ ಸ್ಥಳವನ್ನು ತಲುಪದೇ ಸಾರ್ವಜನಿಕರು ತುಂಬಾ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಇರುವುದೊಂದೇ ಬಸ್ಸು, ಈ ಬಸ್ಸು ಪ್ರತಿನಿತ್ಯ ಯಾವಾಗಲೂ ಜನ ಜಂಗುಳಿಯಿಂದ ತುಂಬಿರುತ್ತದೆ. ಮಳೆಗಾಲದಲ್ಲಂತೂ ದೇವರೇ ಕಾಪಾಡಬೇಕು. ಇದಕ್ಕೆ ಸಂಬಂಧಪಟ್ಟವರು ತುರ್ತಾಗಿ ಸ್ಪಂದಿಸಿ ಹೆಚ್ಚಿನ ಬಸ್ ಸೌಲಭ್ಯವನ್ನು ಕಲ್ಪಿಸಿ ಕೊಡಬೇಕೆಂದು ಮನವಿ.

–ಪರಶಿವಮೂರ್ತಿ ಎನ್.ಪಿ. ನಂಜೀಪುರ, ಸರಗೂರು ತಾಲೂಕು.



ಕಾರ್ಕಳ ಆನಂದ ಭಟ್
ಮೊ: 7676554198
ಫ್ಲಾಟ್ ನಂ.204, ಮೂರನೇ ಮಹಡಿ, ಏಕದಂತ ಅಪಾರ್ಟ್‌ಮೆಂಟ್ಸ್,
OPP H.P. ಗ್ಯಾಸ್ ಪೆರ್ವಾಜೆ ರಸ್ತೆ, ಕಾರ್ಕಳ– 574 104, ಉಡುಪಿ ಜಿಲೆ

ದಿಕ್ಕುದೆಸೆ

ಹರ್‍ಯಾಣದಲ್ಲಿ ಮ್ಯಾಜಿಕ್; ಬಿಜೆಪಿಗೆ ಹ್ಯಾಟ್ರಿಕ್ ಜಯ

ರಾಷ್ಟ್ರದ ರಾಜಧಾನಿ ದಿಲ್ಲಿಗೆ ತಾಗಿಕೊಂಡಿರುವ, ಪುಟ್ಟದಾದರೂ ಪ್ರಬಲ ರಾಜ್ಯ ಹರ್‍ಯಾಣ. ಅಕ್ಟೋಬರ್ ಐದರಂದು ರಾಜ್ಯ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಯಾರೂ ಊಹಿಸದ ಫಲಿತಾಂಶ ಪ್ರಕಟವಾಗಿದೆ. ಭಾರೀ ವಿಜಯದ ಆತ್ಮವಿಶ್ವಾಸದಲ್ಲಿದ್ದ ಕಾಂಗ್ರೆಸ್‌ಗೆ ಆಘಾತವಾದರೆ, ಪರಾಜಯದ ಆತಂಕದಲ್ಲಿದ್ದ ಬಿಜೆಪಿಗೆ ಆಶ್ಚರ್ಯ, ಆನಂದ ನೀಡಿದೆ. 2019ರ ವಿಧಾನಸಭಾ ಚುನಾವಣೆಯಲ್ಲಿ ಸ್ವಲ್ಪ ಎಡವಿ 40 ಸ್ಥಾನ ಗಳಿಸಿದರೂ ಜೆಜೆಪಿ ಬೆಂಬಲದೊಂದಿಗೆ ಸರಕಾರ ರಚಿಸಿತ್ತು.

2024ರ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ರಾಜ್ಯದ ರಾಜಕೀಯ ಚಿತ್ರಣ ಬದಲಾಗಿತ್ತು. ಪಕ್ಷದಲ್ಲಿ ಆಂತರಿಕ ಭಿನ್ನಮತ, ರಾಜ್ಯದಲ್ಲಿ ಆಡಳಿತ ವಿರೋಧಿ ಅಲೆ ವ್ಯಾಪಕವಾಗಿತ್ತು. ರಾಜ್ಯದ ಒಟ್ಟು ಮತದಾರರಲ್ಲಿ ಶೇ.27ರಷ್ಟಿರುವ ಪ್ರಭಾವಿ ಜಾಟ್ ಸಮುದಾಯಕ್ಕೆ ಬಿಜೆಪಿ ವಿರುದ್ಧ ಆಕ್ರೋಶವಿತ್ತು. ನೂತನ ಕೃಷಿ ಕಾನೂನುಗಳನ್ನು ಹಿಂದೆಗೆದರೂ ಜಾಟ್‌ರ ಆಕ್ರೋಶ ಕಡಿಮೆಯಾಗಲಿಲ್ಲ. ಅಗ್ನಿವೀರ್ ಯೋಜನೆ, ಸಂವಿಧಾನ ಬದಲಾವಣೆ, ದಲಿತರ ಮೀಸಲಾತಿ ರದ್ದು ಮೊದಲಾದ ವಿಷಯಗಳ ಬಗ್ಗೆ ವ್ಯಾಪಕ ಅಪಪ್ರಚಾರ ನಡೆಸಿದ ಪರಿಣಾಮ ಕಾಂಗ್ರೆಸ್‌ಗೆ ಹತ್ತರಲ್ಲಿ ಐದು ಲೋಕಸಭಾ ಕ್ಷೇತ್ರಗಳಲ್ಲಿ ಗೆಲುವು ದೊರೆಯಿತು. ಈ ಚುನಾವಣೆಯಲ್ಲಿ 45ಕ್ಕಿಂತ ಹೆಚ್ಚು ವಿಧಾನಸಭೆ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಮುನ್ನಡೆ ಸಾಧಿಸಿತ್ತು. ಈ ಗೆಲುವು ಕಾಂಗ್ರೆಸ್‌ಗೆ ಭಾರೀ ಆತ್ಮವಿಶ್ವಾಸ ನೀಡಿತ್ತು. ರಾಜಕೀಯವಾಗಿ ಮಹತ್ವ ಪಡೆದಿರುವ ಈ ರಾಜ್ಯದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲುವಿನ ಕನಸು ಕಾಣುತ್ತಿತ್ತು.

ಹರ್‍ಯಾಣ ರಾಜ್ಯದ ಮಹತ್ವ: ಹರ್‍ಯಾಣ ಮೂರು ಕೋಟಿ ಜನಸಂಖ್ಯೆ ಇರುವ ಮಧ್ಯಮ ಗಾತ್ರದ ಶ್ರೀಮಂತ ರಾಜ್ಯ. ದೇಶದ ಒಟ್ಟು ಕೃಷಿ ಉತ್ಪನ್ನಗಳ ರಫ್ತಿನಲ್ಲಿ ಶೇ.7ರಷ್ಟು ಹಾಗೂ ಬಾಸ್ಮತಿ ಅಕ್ಕಿಯ ರಫ್ತಿನಲ್ಲಿ ಶೇ.60ರಷ್ಟು ಪಾಲು ಹೊಂದಿದೆ. ದೇಶದ ಒಟ್ಟು ಉತ್ಪಾದನೆಯಲ್ಲಿ ಶೇ.60ರಷ್ಟು ದ್ವಿಚಕ್ರ ವಾಹನಗಳು ಹಾಗೂ ಶೇ.50ರಷ್ಟು ಟ್ರಾಕ್ಟರ್, ಕಾರುಗಳು ಈ ರಾಜ್ಯದಲ್ಲಿ ತಯಾರಾಗುತ್ತವೆ. ಐಟಿ, ಬಿಟಿ, ಮೊಬೈಲ್ ಮೊದಲಾದ ಉತ್ಪಾದನಾ ಕ್ಷೇತ್ರಗಳಲ್ಲೂ ಪ್ರಮುಖ ಪಾತ್ರ ನಿರ್ವಹಿಸುತ್ತಿದೆ. ಕ್ರೀಡೆ, ಸೇನೆ, ರಕ್ಷಣೆ ತಂತ್ರಜ್ಞಾನಗಳಲ್ಲೂ ಮುಂಚೂಣಿಯಲ್ಲಿದೆ. ತಲಾ ಆದಾಯವೂ ಹೆಚ್ಚಿರುವ, 140 ಬಿಲಿಯನ್ ಡಾಲರ್ (ಬಿ.ಡಾ.) ಜಿಡಿಪಿ ಇರುವ ದೇಶದ ಆರ್ಥಿಕ ಶಕ್ತಿಯಾಗಿದೆ. ದೆಹಲಿ ರಾಜಕೀಯದ ಮೇಲೆ ಪ್ರಭಾವ ಬೀರಿದ್ದ ಮಾಜಿ ಉಪ ಪ್ರಧಾನಿ ದಿ. ದೇವಿಲಾಲ್, ಬನ್ಸಿಲಾಲ್, ಭಜನ್ ಲಾಲ್ ಮೊದಲಾದವರು ಈ ರಾಜ್ಯಕ್ಕೆ ಸೇರಿದವರು. ಹೀಗಾಗಿ ಲೋಕಸಭಾ ಚುನಾವಣೆಯಲ್ಲಿ ಬಹುಮತ ಗಳಿಸುವಲ್ಲಿ ವಿಫಲವಾಗಿ ಕಳೆಗುಂದಿದ ಬಿಜೆಪಿಗೆ ಈ ಚುನಾವಣೆ ಗೆಲ್ಲಲೇಬೇಕಾದ ಅನಿವಾರ್ಯತೆ ಎದುರಾಗಿತ್ತು. ಇದಕ್ಕೆ ಪ್ರತಿಯಾಗಿ ಉತ್ತಮ ಸಾಧನೆ ಮಾಡಿದ್ದ ಕಾಂಗ್ರೆಸ್ ಕೂಡ ಈ ಚುನಾವಣೆಯ ಮಹತ್ವ ಅರಿತಿತ್ತು. ಪ್ರಾಯಶಃ ಹರ್‍ಯಾಣದಲ್ಲಿ ಬಿಜೆಪಿ ಸೋತಿದ್ದರೆ ಮುಂಬರುವ ಮೂರು ರಾಜ್ಯಗಳ ಚುನಾವಣೆಗಳಲ್ಲಿ ಕಳಪೆ ಫಲಿತಾಂಶ ಬರುವ ಸಾಧ್ಯತೆ ಇತ್ತು. ಇದರಿಂದ ಕೇಂದ್ರ ಸರಕಾರ ಅಸ್ಥಿರಗೊಳ್ಳುವ ಅಪಾಯವಿತ್ತು. ಆದ್ದರಿಂದ ಹರ್‍ಯಾಣ ಚುನಾವಣೆಯನ್ನು ಬಿಜೆಪಿಯು ಸವಾಲಾಗಿ ಸ್ವೀಕರಿಸಿದರೆ, ಕಾಂಗ್ರೆಸ್ ಅತಿಯಾದ ಆತ್ಮವಿಶ್ವಾಸದಿಂದ ಕಣಕ್ಕಿಳಿಯಿತು. ಕಾಂಗ್ರೆಸ್ ಮೊಲದಂತೆ ಸೋತು ನೆಲ ಕಚ್ಚಿದರೆ, ಬಿಜೆಪಿಯು ಆಮೆಯಂತೆ ವ್ಯವಸ್ಥಿತವಾದ ಕಾರ್ಯತಂತ್ರ ರೂಪಿಸಿ ಹ್ಯಾಟ್ರಿಕ್ ಮೂರನೇ ಬಾರಿ ವಿಜಯ ಗಳಿಸಿತು.

ಕಾಂಗ್ರೆಸ್ ಸೋಲಿನ ಕಾರಣಗಳು: ಲೋಕಸಭಾ ಚುನಾವಣೆಯಲ್ಲಿ ಉತ್ತಮ ಫಲಿತಾಂಶ ನೀಡಿದ್ದ ಜಾಟ್, ದಲಿತ, ಅಲ್ಪಸಂಖ್ಯಾತರ ಸಮೀಕರಣದ ಫಾರ್ಮುಲಾವನ್ನು ವಿಧಾನಸಭಾ ಚುನಾವಣೆಯಲ್ಲೂ ಕಾಂಗ್ರೆಸ್ ಅಳವಡಿಸಿತು. ಆದರೆ ಅನುಷ್ಠಾನ ಹಂತದಲ್ಲಿ ಮಾಡಿದ ಎಡವಟ್ಟುಗಳಿಂದ ಗೆಲ್ಲುವಲ್ಲಿ ಎಡವಿತು. ಪ್ರಬಲ ಜಾಟ್ ಸಮುದಾಯದ ಮತಗಳಿಗಾಗಿ ದಲಿತರ ಸಹಿತ ಇತರರೆಲ್ಲ ಸಮುದಾಯಗಳನ್ನು ಕಾಂಗ್ರೆಸ್ ಕಡೆಗಣಿಸಿತು. ಕಾಂಗ್ರೆಸ್‌ನ ಜಿ–23 ಭಿನ್ನಮತೀಯ ಗುಂಪಿನಲ್ಲಿದ್ದ ಜಾಟ್ ಮುಖಂಡ ಮಾಜಿ ಮುಖ್ಯಮಂತ್ರಿ ಭೂಪಿಂದರ್ ಹೂಡಾರನ್ನು ಕಡೆಗಣಿಸಿದಲ್ಲಿ ಬಂಡಾಯವೇಳಬಹುದೆಂಬ ಭಯದಲ್ಲಿ ದುರ್ಬಲ ಹೈಕಮಾಂಡ್ ಚುನಾವಣೆಯ ಸಂಪೂರ್ಣ ಹೊಣೆಗಾರಿಕೆಯನ್ನು ಹೂಡಾ ಮತ್ತು ಪುತ್ರ ದೀಪೆಂದರ್ ಹೂಡಾರಿಗೆ ನೀಡಿತು. ಮತ್ತೆ ಮುಖ್ಯಮಂತ್ರಿಯಾಗುವ ಕನಸು ಕಾಣುತ್ತಿದ್ದ ಹೂಡಾರವರು ತಮ್ಮ ಬೆಂಬಲಿಗರಾದ ಎಪ್ಪತ್ತರಷ್ಟು ಅಭ್ಯರ್ಥಿಗಳಿಗೆ ಟಿಕೆಟ್ ನೀಡಿದ್ದು, ಪಕ್ಷದ ಸೋಲಿಗೆ ಪ್ರಮುಖ ಕಾರಣವಾಯಿತು. ರಣದೀಪ್ ಸಿಂಗ್ ಸುರ್ಜೇವಾಲಾ ಮೇಲಿನ ಅತಿಯಾದ ಅವಲಂಬನೆಯೂ ಪಕ್ಷಕ್ಕೆ ದುಬಾರಿಯಾಯಿತು. ಶೇ.17ರಷ್ಟು ಮತಗಳಿದ್ದ ದಲಿತರ ಪ್ರಬಲ ನಾಯಕಿ, ಮುಖ್ಯಮಂತ್ರಿ ಸ್ಥಾನದ ಮೇಲೆ ಕಣ್ಣಿಟ್ಟಿದ್ದ ಕುಮಾರಿ ಶೆಲ್ಜಾರನ್ನು ಸಂಪೂರ್ಣ ಕಡೆಗಣಿಸಿದ್ದು, ಚುನಾವಣೆಯಲ್ಲಿ ಸ್ಪರ್ಧಿಸಲು ಟಿಕೆಟ್ ನಿರಾಕರಿಸಿದ್ದು, ಹೂಡಾ ಬೆಂಬಲಿಗರು ಜಾತಿ ಆಧಾರಿತ ಟೀಕೆ ಮಾಡಿದ್ದು, ಕಾಂಗ್ರೆಸ್‌ಗೆ ಬಲವಾದ ಹೊಡೆತ ನೀಡಿತು. ಕು. ಶೆಲ್ಜಾರಿಗಾದ ಅಪಮಾನವನ್ನು ಅಮಿತ್ ಷಾ ಸಹಿತ ಬಿಜೆಪಿ ನಾಯಕರು ಕಾಂಗ್ರೆಸ್ ವಿರುದ್ಧ ಅಸ್ತ್ರವಾಗಿ ಬಳಸಿದ್ದು, ಕಾಂಗ್ರೆಸ್‌ಗೆ ಸೋಲನ್ನು ಖಾತ್ರಿ ಪಡಿಸಿತು. ಇನ್ನುಳಿದಂತೆ ಎಎಪಿಯೊಂದಿಗೆ ಮೈತ್ರಿಯ ನಿರಾಕರಣೆ, ಮೂವತ್ತಾರರಷ್ಟು ಬಂಡಾಯ ಅಭ್ಯರ್ಥಿಗಳು ಕಾಂಗ್ರೆಸ್ ಮತಬುಟ್ಟಿಗೆ ಕನ್ನ ಹಾಕಿದ್ದು ಕಾಂಗ್ರೆಸ್‌ಗೆ ಗೆಲುವನ್ನು ನಿರಾಕರಿಸಿತು.



> “ಹರ್‍ಯಾಣದಲ್ಲಿ ಬಿಜೆಪಿ ಸೋತಿದ್ದರೆ ಮುಂಬರುವ ಮೂರು ರಾಜ್ಯಗಳ ಚುನಾವಣೆಗಳಲ್ಲಿ ಕಳಪೆ ಫಲಿತಾಂಶ ಬರುವ ಸಾಧ್ಯತೆ ಇತ್ತು. ಇದರಿಂದ ಕೇಂದ್ರ ಸರಕಾರ ಅಸ್ಥಿರಗೊಳ್ಳುವ ಅಪಾಯವಿತ್ತು. ಆದ್ದರಿಂದ ಹರ್‍ಯಾಣ ಚುನಾವಣೆಯನ್ನು ಬಿಜೆಪಿಯು ಸವಾಲಾಗಿ ಸ್ವೀಕರಿಸಿದರೆ, ಕಾಂಗ್ರೆಸ್ ಅತಿಯಾದ ಆತ್ಮವಿಶ್ವಾಸದಿಂದ ಕಣಕ್ಕಿಳಿಯಿತು. ಕಾಂಗ್ರೆಸ್ ಮೊಲದಂತೆ ಸೋತು ನೆಲ ಕಚ್ಚಿದರೆ, ಬಿಜೆಪಿಯು ಆಮೆಯಂತೆ ವ್ಯವಸ್ಥಿತವಾದ ಕಾರ್ಯತಂತ್ರ ರೂಪಿಸಿ ಹ್ಯಾಟ್ರಿಕ್ ಮೂರನೇ ಬಾರಿ ವಿಜಯ ಗಳಿಸಿತು.

ಐಎನ್‌ಎಲ್‌ಡಿ, ಬಿಎಸ್‌ಪಿ ಮತ್ತು ಜೆಜೆಪಿ, ಆಜಾದ್ ಸಮಾಜ ಪಾರ್ಟಿ, ಮೈತ್ರಿಕೂಟಗಳು ಸುಮಾರು ಶೇ.7ರಷ್ಟು ಜಾಟ್ ದಲಿತ ಮತಗಳನ್ನು ಕಾಂಗ್ರೆಸ್ ಮತಬುಟ್ಟಿಯಿಂದ ಕಸಿದವು. ಕೊನೆಯದಾಗಿ ರಾಹುಲ್ ಗಾಂಧಿ ಸಹಿತ ಕಾಂಗ್ರೆಸ್‌ನ ಹೆಚ್ಚಿನ ನಾಯಕರು ಪ್ರಚಾರದಲ್ಲಿ ಪ್ರಧಾನಿ ಮೋದಿಯವರ ವಿರುದ್ಧ ಬಳಸಿದ ಕೀಳ್ಮಟ್ಟದ ಪದ ಪ್ರಯೋಗಗಳು ಕಾಂಗ್ರೆಸ್‌ಗೆ ಸೋಲನ್ನು ಖಚಿತಪಡಿಸಿದವು. ಆದರೆ 2019ರಲ್ಲಿ ಶೇ.28.08(31 ಸ್ಥಾನ)ರಷ್ಟು ಮತ ಗಳಿಸಿದ್ದ ಕಾಂಗ್ರೆಸ್‌ಗೆ ಬರೋಬ್ಬರಿ ಶೇ.11.01ರಷ್ಟು ಮತಗಳು ಹೆಚ್ಚಿ ಶೇ.39.09 ಮತ ಪಡೆದು 37 ಸ್ಥಾನ ಗಳಿಸಿದ್ದು, ಸಮಾಧಾನ ತರುವ ವಿಷಯವಾಗಿದೆ.

ಫಲ ನೀಡಿದ ಬಿಜೆಪಿ ತಂತ್ರಗಾರಿಕೆ: ಹರ್‍ಯಾಣ ಮತದಾರರು ಪ್ರತೀ ಬಾರಿ ಸರಕಾರ ಬದಲಾಯಿಸುತ್ತಿದ್ದರು. ಆದರೆ ಬಿಜೆಪಿಯು ಕಳೆದ ಹತ್ತು ವರ್ಷಗಳಲ್ಲಿ ಹ್ಯಾಟ್ರಿಕ್ ಮೂರನೇ ಬಾರಿ ಅಧಿಕಾರಕ್ಕೇರುವ ಅದ್ಭುತ ಸಾಧನೆಗೈದಿದೆ. ಕಳೆದ ಒಂಭತ್ತೂವರೆ ವರ್ಷಗಳ ಕಾಲ ರಾಜ್ಯದ ಮುಖ್ಯಮಂತ್ರಿಯಾಗಿದ್ದ ಮನೋಹರ ಲಾಲ್ ಖಟ್ಟರ್ ಮತ್ತು ಆರು ತಿಂಗಳ ಹಿಂದೆ ಮುಖ್ಯಮಂತ್ರಿಯಾದ ನಯಾಬ್ ಸಿಂಗ್ ಸೈನಿಯವರಿಗೆ ಸಮನಾಗಿ ಈ ವಿಜಯದ ಶ್ರೇಯಸ್ಸು ಸಲ್ಲುತ್ತದೆ. ಇತ್ತೀಚಿನ ದಿನಗಳಲ್ಲಿ ರಾಜ್ಯ ಮಂತ್ರಿಗಳು, ಶಾಸಕರು, ಕಾರ್ಯಕರ್ತರು ಖಟ್ಟರ್ ಆಡಳಿತ ಶೈಲಿಯಿಂದ ತೀವ್ರ ಅಸಮಾಧಾನಗೊಂಡಿದ್ದರು. ಪಕ್ಷದಲ್ಲಿ ಭಾರೀ ಪ್ರಮಾಣದಲ್ಲಿ ಕಚ್ಚಾಟವಿತ್ತು. ರಾಜ್ಯದಲ್ಲಿ ಆಡಳಿತ ವಿರೋಧಿ ಅಲೆ ವ್ಯಾಪಕವಾಗಿತ್ತು. ಲೋಕಸಭಾ ಚುನಾವಣೆಯಲ್ಲಿ ಐದು ಸ್ಥಾನಗಳನ್ನು ಕಳಕೊಂಡ ಕಾರಣ ಪಕ್ಷದ ವರ್ಚಸ್ಸು ಕುಂದಿತ್ತು. ಕಿಸಾನ್ ಚಳವಳಿ, ಪೈಲ್ವಾನ್‌ರ ಪ್ರತಿಭಟನೆ, ಅಗ್ನಿವೀರ್ ಮೊದಲಾದ ಯೋಜನೆಗಳಿಗೆ ವಿರೋಧದಿಂದ ಬಿಜೆಪಿ ಹೈರಾಣಾಗಿತ್ತು. ಈ ಕಾರಣಗಳಿಂದ ಕಾಂಗ್ರೆಸ್ ಪ್ರಚಂಡ ಜಯಗಳಿಸುವ ವಿಶ್ವಾಸದಲ್ಲಿತ್ತು. ಇವುಗಳನ್ನು ಗಮನಿಸುತ್ತಿದ್ದ ಬಿಜೆಪಿ ಹೈಕಮಾಂಡ್ ರಾಜ್ಯ ಬಿಜೆಪಿಯನ್ನು ಸರಿಪಡಿಸಲು ಕಾರ್ಯಪ್ರವೃತ್ತವಾಯಿತು. ಕೇಂದ್ರ ಗೃಹಮಂತ್ರಿ ಅಮಿತ್ ಷಾರವರು ರಾಜ್ಯ ಬಿಜೆಪಿಯನ್ನು ಸುಧಾರಿಸಲು ಜಾಣ್ಮೆ, ಸೂಕ್ಷ್ಮತೆಯೊಂದಿಗೆ ದೃಢವಾದ ನಿರ್ಧಾರಗಳನ್ನು ಕೈಗೊಂಡರು. ಖಟ್ಟರ್‌ನ್ನು ಬದಲಾಯಿಸಿ ನಯೊಬ್‌ಸಿಂಗ್ ಸೈನಿಯನ್ನು ಮುಖ್ಯಮಂತ್ರಿಯಾಗಿ ನೇಮಿಸಿದ ಅಮಿತ್ ಷಾರ ಮೊದಲ ಮಾಸ್ಟರ್ ಸ್ಟ್ರೋಕ್ ಯಶಸ್ವಿಯಾಯಿತು. ಸಂಕ್ಷಿಪ್ತ ಅವಧಿಯಲ್ಲಿ ಸೈನಿ ತಮ್ಮ ನಾಯಕತ್ವ ಸಾಮರ್ಥ್ಯ ತೋರಿದರು. ಭಿನ್ನಮತವನ್ನು ಬಹುತೇಕ ಶಮನಗೊಳಿಸಿ ಆಡಳಿತಕ್ಕೆ ಚುರುಕು ಮುಟ್ಟಿಸಿದರು. ಕ್ಷಿಪ್ರ ಪರಿಣಾಮ ಬೀರುವ ಕೆಲವು ಯೋಜನೆಗಳ ಮೂಲಕ ಜನಸಾಮಾನ್ಯರ ಒಲವನ್ನು ಮತ್ತೆ ಪಕ್ಷದತ್ತ ಸೆಳೆಯುವಲ್ಲಿ ಯಶಸ್ವಿಯಾಗಿ ಸೈನಿಯವರು ವಿಧಾನಸಭಾ ಚುನಾವಣೆಗೆ ಪಕ್ಷವನ್ನು ಸಜ್ಜುಗೊಳಿಸಿದರು.

2014ರಿಂದ ಬಿಜೆಪಿಯು ಹರ್‍ಯಾಣ ರಾಜಕೀಯದಲ್ಲಿ ಜಾಟ್ ಪ್ರಾಬಲ್ಯವನ್ನು ಮುರಿಯಲು ಯತ್ನಿಸಿ ಅಂತೂ ಸಫಲತೆ ಗಳಿಸಿತು. ರಾಜ್ಯದಲ್ಲಿ ಶೇ.44ರಷ್ಟಿರುವ ಜಾತೇತರ ಓಬಿಸಿ ಸಮುದಾಯಗಳ ಮತಗಳನ್ನು ಕ್ರೋಢೀಕರಿಸಲಾಯಿತು. ಖಟ್ಟರ್ ಹಾಗೂ ಸೈನಿಯವರು ಜಾತೇತರ ಓಬಿಸಿಯ ಪಾಲ್ಸ್, ಕಶ್ಯಪ್, ಕಾಂಬೋಜ ಮತ್ತು ದಲಿತ ಸಮಾಜದ ಜೋಗಿ ರವಿದಾಸಿ, ಬಾಝಿಗರ್ ಮೊದಲಾದ ಸಮಾಜಗಳ ಮುಖಂಡರೊಂದಿಗೆ ಸರಳ ಸಭೆಗಳನ್ನು ನಡೆಸಿ ಅವರನ್ನು ಒಲಿಸುವಲ್ಲಿ ಯಶಸ್ವಿಯಾದರು. ಸತೀಶ ಪುನಿಯಾ ಹಾಗೂ ತ್ರಿಪುರ ಮಾಜಿ ಮುಖ್ಯಮಂತ್ರಿ ಬಿಪ್ಲವ್‌ನೇವರು ಹರ್‍ಯಾಣದಲ್ಲಿ ಐತಿಹಾಸಿಕ ಹ್ಯಾಟ್ರಿಕ್ ವಿಜಯಕ್ಕೆ ವೇದಿಕೆ ರಚಿಸಿದರು. ಎಲ್ಲ ಜಾತಿ ಸಮುದಾಯಗಳನ್ನು ಸೆಳೆಯುವ ಚಾಣಾಕ್ಷ ಕಾರ್ಯತಂತ್ರ ರೂಪಿಸಿದರು.

ಜಾಟ್‌ರನ್ನು ಓಲೈಸಲು ಕೃಷಿ ಕಾನೂನು ಹಿಂದೆಗೆಯಲಾಯಿತು. ಜಾಟ್ ನಾಯಕ್ ಮಾಜಿ ಪ್ರಧಾನಿ ಚರಣ್ ಸಿಂಗ್‌ರಿಗೆ ಭಾರತ ರತ್ನ ಪ್ರಧಾನಿಸಲಾಯಿತು. ಬನ್ಸಿಲಾಲ್ ಪುತ್ರಿ ಕಿರಣ್ ಚೌಧುರಿಯವರಿಗೆ ರಾಜ್ಯಸಭಾ ಸದಸ್ಯತ್ವ, ಇವರ ಪುತ್ರಿ ಶ್ರುತಿ ಚೌಧುರಿಯವರಿಗೆ ತೋಷಂ ಕ್ಷೇತ್ರದಿಂದ ಸ್ಪರ್ಧಿಸಲು ಟಿಕೆಟ್ ನೀಡಿಕೆ, ರಾಜ್ಯದ 36 ಜಾಟ್ ಪ್ರಾಬಲ್ಯದ ಕ್ಷೇತ್ರಗಳಲ್ಲಿ ಸ್ವಸಾಮರ್ಥ್ಯದಲ್ಲಿ ಗೆಲ್ಲಬಲ್ಲ ಪ್ರಬಲ ಜಾಟ್‌ರನ್ನು ಕಣಕ್ಕಿಳಿಸಿದ್ದರಿಂದ 19ರಲ್ಲಿ ಗೆಲುವು. 33 ಬಂಡುಕೋರರೊಂದಿಗೆ ಸೈನಿ, ಖಟ್ಟರ್ ಮಾತುಕತೆ ನಡೆಸಿ ಹೆಚ್ಚಿನವರನ್ನು ಸ್ಪರ್ಧೆಯಿಂದ ಹಿಂದೆಗೆಯುವಲ್ಲಿ ಯಶಸ್ವಿಯಾದರು. ದಿಲ್ಲಿ ಆದೇಶದಂತೆ ಮುಖ್ಯಮಂತ್ರಿ ಸ್ಥಾನ ತ್ಯಜಿಸಿದ ಖಟ್ಟರ್ ಮುನಿಸಿಕೊಳ್ಳದೇ ಚುನಾವಣಾ ಪ್ರಚಾರದಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಸೈನಿ ಗ್ರಾಮೀಣ ಪ್ರದೇಶದಲ್ಲಿ ಪ್ರಚಾರ ಕಾರ್ಯ ನಡೆಸಿದರೆ, ಖಟ್ಟರ್ ನಗರ ಪ್ರದೇಶಗಳ ಹೊಣೆಗಾರಿಕೆ ವಹಿಸಿದರು. ಪಕ್ಷಕ್ಕೆ ಒಳ ಏಟು ನೀಡುವ ನಾಯಕರು ಖಟ್ಟರ್‌ರವರಿಂದ ಕಲಿತುಕೊಳ್ಳಬೇಕಾಗಿದೆ. ಈ ರೀತಿ ಖಟ್ಟರ್, ಸೈನಿ ಸಮನ್ವಯದಿಂದ ಹರ್‍ಯಾಣದಲ್ಲಿ ಪಕ್ಷಕ್ಕೆ ಐತಿಹಾಸಿಕ ವಿಜಯ ತಂದಿತ್ತರು.

ಜಾಟ್‌ರನ್ನು ಕಡೆಗಣಿಸದೇ ಜಾತೇತರ ಸಾಮಾನ್ಯವರ್ಗ, ದಲಿತರಿಗೆ ಸಮಾನ ಆದ್ಯತೆ ನೀಡಿದ ಸಾಮಾಜಿಕ ಸಮೀಕರಣ, ಗೊಂದಲವಿಲ್ಲದೇ ಟಿಕೆಟ್ ಹಂಚಿಕೆ, ದಲಿತರ ಮೀಸಲಾತಿಯಲ್ಲಿ ಹೆಚ್ಚಳ ಭಿನ್ನಮತ ನಿವಾರಣೆ, ಬಂಡಾಯ ಶಮನ, ಪ್ರಧಾನಿ ಬದಲು ಸ್ಥಳೀಯ ನಾಯಕತ್ವಕ್ಕೆ ಪ್ರಾಮುಖ್ಯತೆ, 2019ರಲ್ಲಿ ಹದಿನೆಂಟು ರ್‍ಯಾಲಿಗಳಲ್ಲಿ ಭಾಗವಹಿಸಿದ್ದ ಪ್ರಧಾನಿ ಮೋದಿಯವರಿಗೆ ಈ ಬಾರಿ ಕೇವಲ ನಾಲ್ಕು ರ್‍ಯಾಲಿಗಳಲ್ಲಿ ಭಾಗವಹಿಸಿದ್ದರು. ಕೇಂದ್ರ, ರಾಜ್ಯ ನಾಯಕರುಗಳಿಗೆ ಅತ್ಯುತ್ತಮ ಹೊಂದಾಣಿಕೆಯಿಂದ ಅದ್ಭುತ ಯಶಸ್ಸು ದೊರೆಯಿತು. ಬಿಜೆಪಿಗೆ ಓಟು ಹಾಗೂ ಸೀಟು ಗಳಿಕೆಯಲ್ಲೂ ವೃದ್ಧಿಯಾಗಿತ್ತು. ಹತ್ತು ವರ್ಷಗಳ ಸತತ ಆಡಳಿತದ ನಂತರವೂ ಈ ಬಾರಿ ಆಡಳಿತ ವಿರೋಧಿ ಬದಲು ಬಿಜೆಪಿಗೆ ಆಡಳಿತ ಪರ ಅಲೆಯಿಂದ (PRO-INCUMBENCY) ಮತಗಳು ಲಭಿಸಿದ್ದವು. 2019ರಲ್ಲಿ ಶೇ.36.49 ಮತ ಗಳಿಕೆಯಿಂದ, 40 ಸ್ಥಾನ ಗಳಿಸಿದ್ದ ಬಿಜೆಪಿಗೆ ಈ ಬಾರಿ ಶೇ.39.94 ಮತ ಗಳಿಕೆಯಿಂದ 48 ಸ್ಥಾನಗಳು ಲಭಿಸಿದವು.

ಚುನಾವಣಾ ತಜ್ಞರ ಅಭಿಪ್ರಾಯಗಳು: ಸಿ–ವೋಟರ್ ನಿರ್ದೇಶಕ ಯಶವಂತ ದೇಶಮುಖ್‌ರು BJP Micro-Managed and Congress Mismanaged the Election ಎಂದರು. ಹಿರಿಯ ಪತ್ರಕರ್ತ ಸತ್ಯೇಂದ್ರ ಸಿಂಗ್‌ರು ದಲಿತರು ಕಾಂಗ್ರೆಸ್‌ಗೆ ಮತ ನೀಡಿದರು. ಆದರೆ ಒಬಿಸಿಗಳು ಹೆಚ್ಚು ಸಂಘಟಿತರಾಗಿ ಬಿಜೆಪಿಗೆ ಮತ ನೀಡಿದರು. ಇನ್ನೋರ್ವ ಪತ್ರಕರ್ತ ಆದೇಶ್ ರಾವಲ್‌ರು ಗಮನಾರ್ಹ ಪ್ರಮಾಣದಲ್ಲಿ ದಲಿತರು ಜಾಟೇತರರೊಂದಿಗೆ ಸೇರಿ ಬಿಜೆಪಿಗೆ ಮತ ನೀಡಿದರು ಎನ್ನುತ್ತಾರೆ.

ಆರ್‌ಎಸ್‌ಎಸ್ ಪಾತ್ರ ಮತ್ತು ಯೋಗಿ ಚಮತ್ಕಾರ: ಈ ಬಾರಿಯ ಚುನಾವಣೆಯಲ್ಲಿ ಆರ್‌ಎಸ್‌ಎಸ್ ಕಾರ್ಯಕರ್ತರು ಸಕ್ರಿಯವಾಗಿ ಭಾಗವಹಿಸಿದರು. ಸಂಘದ ಸಂಘಟನಾತ್ಮಕ ಶಕ್ತಿ ಮತದಾರರನ್ನು ಮುಟ್ಟುವಲ್ಲಿ ಸಹಕಾರಿಯಾಯಿತು. ಸಂಘದ ಕಾರ್ಯಕರ್ತರು ಬಿಜೆಪಿಯೊಂದಿಗೆ ಸಮನ್ವಯ ಸಾಧಿಸಿ ಸಂಪರ್ಕ ಸೇತುಬಂಧ ಹೆಸರಿನಲ್ಲಿ ಸಂಪರ್ಕ ಅಭಿಯಾನ ನಡೆಸಿದರು. ಕಾಂಗ್ರೆಸ್ ಅಬ್ಬರದ ಪ್ರಚಾರಕ್ಕೆ ಪ್ರತಿಯಾಗಿ ಸದ್ದಿಲ್ಲದೆ ಮನೆ–ಮನೆ ಸಂಪರ್ಕಗಳ ಮೂಲಕ ಮತದಾರರನ್ನು ಒಲಿಸಿದರು. ಕಾಂಗ್ರೆಸ್ ಹಾಗೂ ವಿರೋಧ ಪಕ್ಷಗಳ ತುಷ್ಟೀಕರಣದ ರಾಜಕೀಯ, ಡೋಂಗಿ ಜಾತ್ಯಾತೀತತೆ, ಆರ್ಥಿಕ ಸೌಲಭ್ಯ ನೀಡುವ ನೆಪದಲ್ಲಿ ಜಾತಿ ಆಧಾರಿತ ಜನಗಣತಿ, ದ್ವಾರಾ ಹಿಂದೂ ಸಮಾಜದ ಜಾತಿಗಳ ನಡುವೆ ದ್ವೇಷ ಬಿತ್ತುವ ಹುನ್ನಾರ ಈ ಎಲ್ಲಾ ಸಂಗತಿಗಳನ್ನು ಮನೆ–ಮನೆ ಭೇಟಿ ಹಾಗೂ ಗ್ರಾಮೀಣ ಭಾಗಗಳಲ್ಲಿ ಸಾವಿರಾರು ಮಿನಿ ಸಭೆಗಳನ್ನು ಸಂಘಟಿಸಿ ಮತದಾರರಿಗೆ ಮನವರಿಕೆ ಮಾಡುವಲ್ಲಿ ಯಶಸ್ವಿಯಾದರು. ಕೊನೆ ಹಂತದಲ್ಲಿ ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥರು ರ್‍ಯಾಲಿಗಳಲ್ಲಿ ಹೇಳಿದ ಎರಡು ಶಬ್ದಗಳು ಬಿಜೆಪಿಗೆ ಅದ್ಭುತ ಜಯ ನೀಡಿತು. ಕಾಂಗ್ರೆಸ್‌ನ ಜಾತಿ ಆಧಾರಿತ ಜನಗಣತಿ ಕೇವಲ ಒಂದು ಸಮಾಜದ ಜಾತಿ ನಡುವೆ ಬಿರುಕು ತರುವ ಉದ್ದೇಶ ಹೊಂದಿದೆ. ಕಾಂಗ್ರೆಸ್‌ನ ಬಯಕೆಯಂತೆ ಹಿಂದೂ ಸಮಾಜದಲ್ಲಿನ ಜಾತಿಗಳು ಪರಸ್ಪರ ಕಚ್ಚಾಡಿದರೆ ಬಂಗ್ಲಾದೇಶದಲ್ಲಿನ ಹಿಂದೂಗಳ ಪರಿಸ್ಥಿತಿ ನಿಮಗೂ ಬರಬಹುದು. 'ಬಟೋಗೆ ತೊ ಕಟೋಗೆ' ಪರಸ್ಪರ ಕಚ್ಚಾಡಿದರೆ ನಾಶವಾಗುವಿರಿ ಎಂದು ಹರ್‍ಯಾಣದ ಜನತೆಗೆ ಎಚ್ಚರಿಸಿದರು. ಸ್ವಾತಂತ್ರ್ಯ ಹೋರಾಟದಲ್ಲಿ 'ವಂದೇ ಮಾತರಂ' ಮಾಡಿದ ಚಮತ್ಕಾರದಂತೆ ಯೋಗಿಯವರ ಈ ಎರಡು ಶಬ್ದಗಳು ಚಮತ್ಕಾರ ಮಾಡಿದವು.

ಮೈಸೂರಲ್ಲಿ ವಾಯುಮಾಲಿನ್ಯ ಆತಂಕ: ಸಾರ್ವಜನಿಕ ಸಾರಿಗೆ ಬಳಸುವುದೇ ಇದಕ್ಕೆ ಪರಿಹಾರ

● ಪರಿಸರವಾದಿ ಪ್ರೊ.ಯು.ಎನ್.ರವಿಕುಮಾರ್ ಕಿವಿಮಾತು ● ಇದಕ್ಕೆ ಜನಸಾಮಾನ್ಯರು ಎಚ್ಚರಿಕೆ ವಹಿಸಬೇಕಿದೆ

ಮೈಸೂರು,ಅ.24(ಎಂಟಿವೈ)– ಮೈಸೂರು ಜಿಲ್ಲೆಯಲ್ಲಿ ವಾಯುಮಾಲಿನ್ಯ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಮುಂದಿನ ಪೀಳಿಗೆಯ ಹಿತದೃಷ್ಟಿಯಿಂದ ಖಾಸಗಿ ವಾಹನ ತ್ಯಜಿಸಿ, ಸಾರ್ವಜನಿಕ ವಾಹನ ಬಳಕೆಗೆ ಮುಂದಾಗಬೇಕು ಎಂದು ಪರಿಸರವಾದಿ ಪ್ರೊ.ಯು.ಎನ್.ರವಿಕುಮಾರ್ ಸಲಹೆ ನೀಡಿದ್ದಾರೆ.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಗ್ರಾಮೀಣ ಶಿಕ್ಷಣ ಮತ್ತು ಆರೋಗ್ಯ ಸಂಸ್ಥೆ(ಆರ್‌ಎಲ್‌ಹೆಚ್‌ಪಿ) ಹಾಗೂ ಕರ್ನಾಟಕ ಸ್ಟೇಟ್ ಯೂತ್ ನೆಟ್ವರ್ಕ್ ಸಂಸ್ಥೆ ವತಿಯಿಂದ ಆಯೋಜಿಸಿದ್ದ 'ಮೈಸೂರು ಜಿಲ್ಲೆಯ ಪರಿಸರ ಸಂರಕ್ಷಣೆಯಲ್ಲಿ ಸರ್ಕಾರ ಹಾಗೂ ಸಾರ್ವಜನಿಕರ ಪಾಲ್ಗೊಳ್ಳುವಿಕೆ ಕುರಿತ ಸಮಾಲೋಚನಾ ಸಭೆ' ಉದ್ಘಾಟಿಸಿ ಮಾತನಾಡಿದ ಅವರು, ಈ ಹಿಂದೆ ಉತ್ತಮ ಪರಿಸರವಿತ್ತು. ನೂರಾರು ಕೆರೆ–ಕಟ್ಟೆಗಳಿಂದ ಕೂಡಿದ್ದ ಮೈಸೂರು ಸುಂದರ ನಗರವಾಗಿತ್ತು. ಕಾಲ ಕ್ರಮೇಣ ನಗರ ಬೆಳೆಯುತ್ತಾ ಕೆರೆ–ಕಟ್ಟೆಗಳ ಸಂಖ್ಯೆ ಕ್ಷೀಣಿಸಿದೆ. ಇದಲ್ಲದೆ, 2 ತಿಂಗಳ ಹಿಂದಷ್ಟೇ ಮೈಸೂರಲ್ಲಿ ವಾಯುಮಾಲಿನ್ಯ ಹೆಚ್ಚಾಗುತ್ತಿರುವ ಎಚ್ಚರಿಕೆ ಗಂಟೆ ಬಾರಿಸಿದ್ದು, ಇದನ್ನು ಜನ ಗಂಭೀರವಾಗಿ ಪರಿಗಣಿಸಬೇಕಾಗಿದೆ ಎಂದರು.



ಮೈಸೂರು ಜಿಲ್ಲೆಯ ಪರಿಸರ ಸಂರಕ್ಷಣೆಯಲ್ಲಿ ಸರ್ಕಾರ ಹಾಗೂ ಸಾರ್ವಜನಿಕರ ಪಾಲ್ಗೊಳ್ಳುವಿಕೆ ಕುರಿತ ಸಮಾಲೋಚನಾ ಸಭೆಯಲ್ಲಿ ಗುರುವಾರ ಪರಿಸರವಾದಿ ಪ್ರೊ.ಯು.ಎನ್. ರವಿಕುಮಾರ್ ಮಾತನಾಡಿದರು.

ಈಗಾಗಲೇ ದೆಹಲಿಯಲ್ಲಿ ವಾಯುಮಾಲಿನ್ಯ ಪೀಡಿಸುತ್ತಿದೆ. ಅಲ್ಲಿ ಜನ ಅನಾರೋಗ್ಯಕೀಡಾಗುವ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಹಿನ್ನೆಲೆಯಲ್ಲಿ ಮೈಸೂರಲ್ಲಿ ವಾಯುಮಾಲಿನ್ಯ ತಡೆಗಟ್ಟಲು ಜನ ಮುಂದಾಗಬೇಕು. ಸರ್ಕಾರದ ವಿವಿಧ ಇಲಾಖೆಗಳು ವಾಯುಮಾಲಿನ್ಯ ತಡೆಗೆ ಕೈಗೊಳ್ಳುವ ಕ್ರಮಕ್ಕೆ ಸಾರ್ವಜನಿಕರ ಸಹಕಾರ ಅನಿವಾರ್ಯ ಎಂದು ಅಭಿಪ್ರಾಯಪಟ್ಟರು.

ಇತ್ತೀಚೆಗೆ ಮೈಸೂರಲ್ಲಿ ವಾಹನಗಳ ಸಂಖ್ಯೆ ಹೆಚ್ಚಾಗುತ್ತಿದೆ. ಒಂದೊಂದು ಮನೆಯಲ್ಲಿ 2–3 ವಾಹನಗಳು ಇರುತ್ತವೆ. ಮಿತಿಮೀರಿದ ಸಂಖ್ಯೆಯಲ್ಲಿ ವಾಹನ ಸಂಚರಿಸುತ್ತಿವೆ. ಜನ ತಮ್ಮ ಖಾಸಗಿ ವಾಹನ ತ್ಯಜಿಸಿ, ಸಾರ್ವಜನಿಕ ಸಾರಿಗೆ ವ್ಯವಸ್ಥೆಯ ಬಳಸಬೇಕು. ಆಗ ಪರಿಸರಕ್ಕೆ ಸೇರುವ ಕಾರ್ಬನ್ ಡೈಆಕ್ಸೈಡ್ ಪ್ರಮಾಣ ಕಡಿಮೆಯಾಗುತ್ತದೆ. ಇದರಿಂದ ವಾಯುಮಾಲಿನ್ಯ ತಡೆಗಟ್ಟಬಹುದಾಗಿದೆ. ಈ ನಿಟ್ಟಿನಲ್ಲಿ ಸರ್ಕಾರ ವಾಹನಗಳನ್ನು ರಾಷ್ಟ್ರೀಕರಣ ಮಾಡಿದರೆ, ವಾಯುಮಾಲಿನ್ಯ ತಡೆಗೆ ಕಟ್ಟುನಿಟ್ಟಿನ ಕ್ರಮ ಕೈಗೊಂಡಂತಾಗುತ್ತದೆ ಎಂದರು.

ಜನ ಹೆಚ್ಚಾಗಿ ಸೈಕಲ್ ಬಳಕೆ ಮಾಡಬೇಕು. ಇದನ್ನು ಉತ್ತೇಜಿಸಲು ಮೈಸೂರಲ್ಲಿ ಮಹಾನಗರಪಾಲಿಕೆ ಸೈಕಲ್ ಟ್ರ್ಯಾಕ್ ನಿರ್ಮಿಸಿದೆ. ಆದರೆ, ಆ ಟ್ರ್ಯಾಕ್‌ಗಳು ಬಳಕೆಯಾಗುತ್ತಿಲ್ಲ. ಜನರೂ ಸೈಕಲ್ ಬಳಸುತ್ತಿಲ್ಲ. ಇನ್ನು ಮುಂದೆಯಾದರೂ ತಮ್ಮ ಮಕ್ಕಳಿಗೆ ಸೈಕಲ್ ಬಳಸಲು ಪ್ರೇರೇಪಿಸಬೇಕು. ಇದರಿಂದ ಆರೋಗ್ಯ ಕಾಪಾಡಿ ಕೊಳ್ಳುವುದರೊಂದಿಗೆ ವಾಯುಮಾಲಿನ್ಯ ತಡೆಗಟ್ಟಬಹುದು. ಪರಿಸರ ಸಂರಕ್ಷಣೆ ದೃಷ್ಟಿಯಿಂದ ಹೊರ ದೇಶಗಳಲ್ಲಿ ಸೈಕಲ್ ಬಳಕೆ ಮಾಡಲಾಗುತ್ತಿದೆ. ನಾವು ಇದನ್ನು ಮನವರಿಕೆ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಗ್ರಾಮೀಣ ಶಿಕ್ಷಣ ಮತ್ತು ಆರೋಗ್ಯ ಸಂಸ್ಥೆಯ ನಿರ್ದೇಶಕಿ ಸರಸ್ವತಿ ಮಾತನಾಡಿ, ಪರಿಸರ ಸಂರಕ್ಷಣೆ ದೃಷ್ಟಿಯಿಂದ ರಾಜ್ಯದಾದ್ಯಂತ ಯುವ ಸಮೂಹವನ್ನು ಸಂಘಟಿಸಿ ಪರಿಸರದ ಬಗೆಗಿನ ಜಾಗೃತಿ, ಜೀವನೋಪಾಯ ಜವಾಬ್ದಾರಿಗಳು, ಸಮಸ್ಯೆಗಳು, ಪರಿಹಾರ, ಕ್ರಿಯೆಗಳ ಕುರಿತು ಮನವರಿಕೆ ಮಾಡಲಾಗುತ್ತಿದೆ. ಕೃಷಿ ಅವಲಂಬಿತ ದೇಶದಲ್ಲಿ ಪ್ರಸ್ತುತ ದಿನಮಾನಗಳಲ್ಲಿ ಶೇ.40ರಷ್ಟು ಮಂದಿ ಕೃಷಿ ವಿಮುಖರಾಗಿದ್ದಾರೆ. ಯುವಕರಂತೂ ವ್ಯವಸಾಯದಿಂದ ದೂರವಾಗುತ್ತಿದ್ದಾರೆ. ಸರ್ಕಾರದಿಂದ ಅನುಷ್ಠಾನವಾಗುವ ಕೆಲವು ಯೋಜನೆಗಳು ಪರಿಸರಕ್ಕೆ ಮಾರಕವಾಗುತ್ತಿವೆ ಎಂದು ಆತಂಕ ವ್ಯಕ್ತಪಡಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಗತಿಪರ ಚಿಂತಕ ಡಾ.ಕೆ.ಕಾಳಚನ್ನೇಗೌಡ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕ ವಿ.ಎಂ.ಪ್ರಭುಸ್ವಾಮಿ, ಆರ್‌ಎಲ್‌ಎಚ್‌ಪಿ ಕಾರ್ಯದರ್ಶಿ ಪ್ರೊ.ವಿ.ಕೆ.ಜೋಸ್, ಕೃಷಿ ಇಲಾಖೆ ಜಂಟಿ ನಿರ್ದೇಶಕ ಕೆ.ಹೆಚ್.ರವಿ, ಪಾಲಿಕೆ ವೈದ್ಯಾಧಿಕಾರಿ ಡಾ.ವೆಂಕಟೇಶ್, ಯೂತ್ ನೆಟ್‌ವರ್ಕ್ ಸದಸ್ಯ ಮಹೇಶ್, ಆರ್‌ಎಫ್‌ಓ ಡಿ.ಸಿ.ರಾಧಾ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಭಕ್ತರಿಗೆ 9 ದಿನ ಹಾಸನಾಂಬೆ ದರ್ಶನ ಭಾಗ್ಯ

ಸಾಂಪ್ರದಾಯಿಕ ವಿಧಿ-ವಿಧಾನದನ್ವಯ ದೇವಸ್ಥಾನದ ಗರ್ಭಗುಡಿ ಬಾಗಿಲು ಮುಕ್ತ



ಹಾಸನ, ಅ.24– ವರ್ಷಕ್ಕೊಮ್ಮೆ ದರ್ಶನ ನೀಡುವಂತಹ ಹಾಸನದ ಅಧಿದೇವತೆ ಹಾಸನಾಂಬೆ ದೇವಸ್ಥಾನದ ಗರ್ಭಗುಡಿ ಬಾಗಿಲನ್ನು ಗುರುವಾರ ತೆರೆಯಲಾಗಿದೆ. ಜಿಲ್ಲಾಡಳಿತದ ಸಮ್ಮುಖದಲ್ಲಿ ಸಿದ್ಧಗಂಗಾ ಮಠದ ಶಿವಲಿಂಗ ಮಹಾಸ್ವಾಮಿಗಳು ಹಾಗೂ ಆದಿಚುಂಚನಗಿರಿಯ ನಿರ್ಮಲಾನಂದನಾಥ ಸ್ವಾಮಿಗಳ ಸಮ್ಮುಖದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎನ್. ರಾಜಣ್ಣ ನೇತೃತ್ವದಲ್ಲಿ ವಿಧ್ಯುಕ್ತವಾಗಿ ಬಾಗಿಲನ್ನು ತೆರೆಯಲಾಯಿತು. ಅಶ್ವಯುಜಮಾಸದ ನಂತರ ಬರುವ ಮೊದಲ ಗುರುವಾರದಂದು ಈ ದೇವಸ್ಥಾನದ ಬಾಗಿಲನ್ನು ತೆರೆಯಲಾಗುತ್ತದೆ. ಬಾಗಿಲನ್ನು ತೆರೆಯುವ ಮುನ್ನ ಮೈಸೂರಿನ ಅರಸು ಮನೆತನದ ವಂಶಸ್ಥ ನಂಜರಾಜ ಅರಸ್, ಗರ್ಭಗುಡಿಯ ಭಾಗದಲ್ಲಿ ಬಾಳೆ ಕಂದನ್ನು ಕಡಿಯುವ ಮೂಲಕ ದೇವಿ ದರ್ಶನಕ್ಕೆ ಅನುವು ಮಾಡಿಕೊಟ್ಟರು.

ಹಾಸನಾಂಬ ದೇಗುಲ ಇಂದಿನಿಂದ ನವೆಂಬರ್ 3ರವರೆಗೆ ತೆರೆದಿರಲಿದ್ದು, ಜಾತ್ರಾ ಮಹೋತ್ಸವ ನಡೆಯಲಿದೆ. ನಾಳೆಯಿಂದ ನವೆಂಬರ್ 2ರ ವರೆಗೆ ಸಾರ್ವಜನಿಕ ಭಕ್ತರ ದರ್ಶನಕ್ಕೆ ಅವಕಾಶ ಇದೆ. ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ, ತುಮಕೂರು ಸಿದ್ಧಗಂಗಾ ಮಠದ ಸ್ವಾಮೀಜಿ, ಶಾಸಕ ಸ್ವರೂಪ್ ಪ್ರಕಾಶ್, ಸಂಸದ ಶ್ರೇಯಸ್ ಪಟೇಲ್, ಜಿಲ್ಲಾಧಿಕಾರಿ ಸತ್ಯಭಾಮ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಹಮದ್ ಸುಜೀತ್ ದೇವಿಯ ಪವಾಡಕ್ಕೆ ಸಾಕ್ಷಿಯಾದರು.

ಹಾಸನಾಂಬ ದೇವಾಲಯದಲ್ಲಿ ಗರ್ಭಗುಡಿ ಬಾಗಿಲು ವರ್ಷದಲ್ಲಿ ಒಂದು ಬಾರಿ ಮಾತ್ರ ತೆರೆಯುವುದು ವಿಶಿಷ್ಟ ಸಂಪ್ರದಾಯವಾಗಿದೆ. ಪ್ರತೀ ವರ್ಷ ಅಶ್ವಯುಜ ಮಾಸದ ಅಷ್ಟಮಿಯ ದಿನ ಬಾಗಿಲು ತೆರೆಯಲಾಗುತ್ತದೆ. ಸಾಮಾನ್ಯವಾಗಿ ಇದು ದೀಪಾವಳಿ ಹಬ್ಬದ ಸಮಯದಲ್ಲಿ ಬರುತ್ತದೆ.

ಈ ಸಮಯದಲ್ಲಿ ದೇವಿಯ ದರ್ಶನ ಪಡೆಯುವುದರಿಂದ ಬಾಳಿನಲ್ಲಿ ಸಮೃದ್ಧಿ ಮತ್ತು ಸಂತೋಷ ಉಂಟಾಗುತ್ತದೆ ಎಂಬುದು ಭಕ್ತರ ನಂಬಿಕೆಯಾಗಿದೆ. ವರ್ಷದ ಉಳಿದ ಸಮಯದಲ್ಲಿ ದೇವಾಲಯವು ಮುಚ್ಚಿರುತ್ತದೆ. ಗರ್ಭಗುಡಿ ಬಾಗಿಲು ಮುಚ್ಚುವ ಮುನ್ನ ಬೆಳಗಿದ ದೀಪ, ಹೂವುಗಳನ್ನು ಒಳಗೆ ಇಡಲಾಗುತ್ತದೆ. ಅಚ್ಚರಿ ಎಂಬಂತೆ, ಅವುಗಳು ಮುಂದಿನ ವರ್ಷ ದೇವಾಲಯವನ್ನು ಮತ್ತೆ ತೆರೆಯುವಾಗ ತಾಜಾತನದಿಂದಲೇ ಕೂಡಿರುತ್ತವೆ ಮತ್ತು ದೀಪವು ಉರಿಯುತ್ತಲೇ ಇರುತ್ತದೆ. ಇದು ಭಕ್ತರ ನಂಬಿಕೆಯನ್ನು ಮತ್ತಷ್ಟು ಬಲಪಡಿಸಿದೆ.

ಹಾಸನಾಂಬ ದರ್ಶನ ಸಮಯ: ಸಾಮಾನ್ಯವಾಗಿ ಹಾಸನಾಂಬ ದೇಗುಲದಲ್ಲಿ ಮುಂಜಾನೆ 6ರಿಂದ ಸಂಜೆ 6 ಗಂಟೆವರೆಗೆ ಸಾರ್ವಜನಿಕರಿಗೆ ದರ್ಶನಕ್ಕೆ ಅವಕಾಶ ನೀಡಲಾಗುತ್ತಿದೆ. ಈ ಬಾರಿ ಮುಂಜಾನೆ 6ರಿಂದ ಸಂಜೆ 6 ಗಂಟೆವರೆಗೆ ಮಾತ್ರವಲ್ಲದೆ, ನೈವೇದ್ಯದ ಸಮಯ ಹೊರತುಪಡಿಸಿ ಉಳಿದಂತೆ ಎಲ್ಲಾ ಅವಧಿಯಲ್ಲೂ ದರ್ಶನಕ್ಕೆ ಅವಕಾಶವಿದೆ.

ಹಾಸನಾಂಬದೇವಿ ದರ್ಶನ ಇಂದು ಕೆಲವರಿಗೆ ಮಾತ್ರ ಲಭಿಸಿದ್ದು, ಶುಕ್ರವಾರದಿಂದ ಸಾರ್ವಜನಿಕರಿಗೆ ಮುಕ್ತವಾಗಲಿದೆ. 9 ದಿನಗಳ ಕಾಲ ದೇವಿ ದರ್ಶನ ಪಡೆಯಲು ಜಿಲ್ಲೆಯಿಂದಷ್ಟೇ ಅಲ್ಲದೇ ಹೊರರಾಜ್ಯ, ದೇಶಗಳಿಂದಲೂ ಭಾರಿ ಜನ ಆಗಮಿಸಲಿದ್ದಾರೆ.

'ಕನೆಕ್ಟ್ 2024' ಶೀರ್ಷಿಕೆಯ ಟ್ರಾವೆಲ್, ಟೂರಿಸಂ, ಹಾಸ್ಪಿಟಾಲಿಟಿ ಪಾಲುದಾರರ ಜೊತೆ ಸಂವಾದ ಕಾರ್ಯಕ್ರಮ

ತೆರೆಮರೆಗೆ ಸರಿದಿರುವ ರಾಜ್ಯದ ಅತ್ಯುತ್ತಮ ಪ್ರವಾಸಿ ತಾಣಗಳ ಅನಾವರಣ ಅವಶ್ಯ

ಕಾರ್ಯಕ್ರಮ ಉದ್ಘಾಟಿಸಿದ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಅಭಿಮತ



ಮೈಸೂರಿನ ಸದರನ್ ಸ್ಟಾರ್ ಹೋಟೆಲ್ ಸಭಾಂಗಣದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಕನೆಕ್ಟ್ 2024 ಸಂವಾದದಲ್ಲಿ ಎಫ್‌ಹೆಚ್‌ಆರ್‌ಎಐಗೆ ನೂತನವಾಗಿ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಕೆ.ಶ್ಯಾಮರಾಜು ಅವರನ್ನು ಮೈಸೂರು ಹೋಟೆಲ್ ಮಾಲೀಕರ ಸಂಘದಿಂದ ಸನ್ಮಾನಿಸಲಾಯಿತು.

ಮೈಸೂರು,ಅ.24(ಪಿಎಂ)– ಪ್ರೇಕ್ಷಣೀಯ ಅಂಶಗಳಿದ್ದೂ ತೆರೆಮರೆಯಲ್ಲಿ ಉಳಿದಿರುವ ರಾಜ್ಯದಲ್ಲಿನ ಪ್ರವಾಸಿ ತಾಣಗಳ ಮಾಹಿತಿ ಅನಾವರಣಗೊಳಿಸಿ ಕರ್ನಾಟಕ ಪ್ರವಾಸೋದ್ಯಮ ಬೆಳವಣಿಗೆಗೆ ಪೂರಕ ವಾತಾವರಣ ಕಲ್ಪಿಸಲು ಕಾರ್ಯಪ್ರವೃತ್ತರಾಗಬೇಕಿದೆ ಎಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ಅಭಿಪ್ರಾಯಪಟ್ಟರು.

ಮೈಸೂರಿನ ವಿನೋಬಾ ರಸ್ತೆಯ ಸದರನ್ ಸ್ಟಾರ್ ಹೋಟೆಲ್ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಇಲಾಖೆ ಮತ್ತು ಕರ್ನಾಟಕ ಟೂರಿಸಂ ಸೊಸೈಟಿ ಜಂಟಿ ಆಶ್ರಯದಲ್ಲಿ 'ಕನೆಕ್ಟ್ 2024' ಶೀರ್ಷಿಕೆಯಡಿ ಗುರುವಾರ ಹಮ್ಮಿಕೊಂಡಿದ್ದ ಟ್ರಾವೆಲ್, ಟೂರಿಸಂ ಮತ್ತು ಹಾಸ್ಪಿಟಾಲಿಟಿ ಪಾಲುದಾರರೊಂದಿಗಿನ ಸಂವಾದ ಕಾರ್ಯಕ್ರಮ (ಕರ್ನಾಟಕ ಪ್ರವಾಸೋದ್ಯಮ ಅಭಿವೃದ್ಧಿಗಾಗಿ) ಉದ್ಘಾಟಿಸಿ ಅವರು ಮಾತನಾಡಿದರು.

ನಮ್ಮ ರಾಜ್ಯದಲ್ಲಿ ಹೆಚ್ಚಿನ ಸಂಖ್ಯೆಯ ಪ್ರವಾಸಿ ತಾಣಗಳಿವೆ. ಈ ಪೈಕಿ ಸಾಕಷ್ಟು ಸ್ಥಳಗಳು ಪ್ರವಾಸಿಗರಿಗೆ ತಿಳಿದಿಲ್ಲ. ಹೀಗೆ ತೆರೆಮರೆಯಲ್ಲಿರುವ ತಾಣಗಳ ಬಗ್ಗೆ ಸಾರ್ವಜನಿಕರು ಮತ್ತು ಪ್ರವಾಸಿಗರಿಗೆ ತಿಳಿಸಿಕೊಡುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಬೇಕು. ಹಲವು ರಾಜ್ಯಗಳು ಕರ್ನಾಟಕಕ್ಕಿಂತ ಪ್ರವಾಸೋದ್ಯಮದಲ್ಲಿ ಬೆಳವಣಿಗೆ ಕಂಡಿವೆ. ಪ್ರವಾಸೋದ್ಯಮ ಅಭಿವೃದ್ಧಿಗೆ ನಮ್ಮ ಪ್ರವಾಸಿ ತಾಣಗಳಲ್ಲಿ ಪೂರಕ ಅಂಶಗಳಿವೆ. ಆದರೂ ಕೇರಳ, ರಾಜಸ್ಥಾನ ಮೊದಲಾದ ರಾಜ್ಯಗಳಿಗೆ ಹೋಲಿಸಿದರೆ ನಮ್ಮ ರಾಜ್ಯ ಹಿಂದುಳಿದಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಸರ್ಕಾರ ಹಾಗೂ ಆಯಾಯ ಕ್ಷೇತ್ರದ ಪಾಲುದಾರರು ಕೈಜೋಡಿಸಿ ಸಮನ್ವಯತೆಯಿಂದ ಕೆಲಸ ಮಾಡಿದರೆ ಯಶಸ್ಸು ಸಾಧ್ಯ. ಕರ್ನಾಟಕ ಟೂರಿಸಂ ಸೊಸೈಟಿ (ಕೆಟಿಎಸ್) ಇದಕ್ಕೆ ಸೂಕ್ತ ನಿದರ್ಶನವಾಗಿದೆ. ಪ್ರವಾಸೋದ್ಯಮ ಬೆಳವಣಿಗೆಯಾದರೆ ಕೇವಲ ಸರ್ಕಾರಕ್ಕೆ ಮಾತ್ರ ಅನುಕೂಲವಲ್ಲ, ಜೊತೆಗೆ ವಿವಿಧ ಕ್ಷೇತ್ರಗಳ ಪಾಲುದಾರರಿಗೂ ವಹಿವಾಟಿನಲ್ಲಿ ಅನುಕೂಲವಾಗಲಿದೆ. ಹೋಟೆಲ್, ಟ್ರಾವೆಲ್ ಉದ್ಯಮ ಮಾತ್ರವಲ್ಲದೆ, ಬೀದಿಬದಿ ವ್ಯಾಪಾರಿಗಳಿಗೂ ಪ್ರಯೋಜನವಾಗಲಿದೆ ಎಂದು ವಿಶ್ಲೇಷಿಸಿದರು.

ಫೆಡರೇಷನ್ ಆಫ್ ಹೋಟೆಲ್ ಅಂಡ್ ರೆಸ್ಟೋರೆಂಟ್ ಅಸೋಸಿಯೇಷನ್ಸ್ ಆಫ್ ಇಂಡಿಯಾ (ಎಫ್‌ಹೆಚ್‌ಆರ್‌ಎಐ) ಅಧ್ಯಕ್ಷರೂ ಆದ ಕರ್ನಾಟಕ ಟೂರಿಸಂ ಸೊಸೈಟಿ ಅಧ್ಯಕ್ಷ ಕೆ.ಶ್ಯಾಮರಾಜು ಮಾತನಾಡಿ, ಕೈಟ್ (ಕರ್ನಾಟಕ ಇಂಟರ್‌ನ್ಯಾಷನಲ್ ಟ್ರಾವೆಲ್ ಎಕ್ಸ್‌ಪೋ) ಆಯೋಜನೆ ಸಂಬಂಧ ಇದೀಗ ಪ್ರಸ್ತಾಪಿಸಲಾಯಿತು. ಕೇರಳದಲ್ಲಿ ನಡೆದ ಕೈಟ್ ಕಾರ್ಯಕ್ರಮವೊಂದಕ್ಕೆ ನಾವು ಭೇಟಿ ನೀಡಿದ್ದವು. ಇದರಲ್ಲಿ 3 ಸಾವಿರ ಮಂದಿ ಪಾಲ್ಗೊಂಡಿದ್ದರು. ಅಲ್ಲಿ ಹೋಟೆಲ್‌ಗಳ ಮಾಲೀಕರು ಶೇ.30ರಷ್ಟು ರೂಮ್‌ಗಳನ್ನು ಕೈಟ್‌ನಲ್ಲಿ ಭಾಗವಹಿಸಿದ್ದವರಿಗೆ ಉಚಿತವಾಗಿ ನೀಡಿದ್ದರು. ಆದರೆ ನಮ್ಮಲ್ಲಿ ಬೆಂಗಳೂರು ಅಥವಾ ಮೈಸೂರು ಆಗಲಿ, ರಿಯಾಯಿತಿ ಕೊಟ್ಟರೂ ಉಚಿತ ಕೊಡಲು ಸಾಧ್ಯವಿಲ್ಲ ಎನ್ನುತ್ತಾರೆ. ಹಾಗಾಗಿ ನಮ್ಮಲ್ಲಿ ಈ ಬಾರಿ ಆಯೋಜನೆಗೊಳ್ಳುವ ಕೈಟ್‌ನಲ್ಲಿ ನಮ್ಮ ಹೋಟೆಲ್ ಮಾಲೀಕರಲ್ಲಿಯೂ ಅದೇ ಮಾದರಿಯಲ್ಲಿ ಉತ್ತೇಜಿಸಲಾಗುವುದು ಎಂದು ತಿಳಿಸಿದರು.

ಕೇರಳ ಮಾದರಿಯಲ್ಲಿ ಉಚಿತವಾಗಿ ರೂಮ್‌ಗಳನ್ನು ನೀಡುವಂತೆ ಮನವರಿಕೆ ಮಾಡಿಕೊಡಲಾಗುವುದು. ಆ ಮೂಲಕ ಇದರಿಂದ ನಿಮಗೆ ಅನುಕೂಲ ಎಂಬುದನ್ನು ತಿಳಿಸಿಕೊಡಲಾಗುವುದು. ಕೈಟ್ ಆಯೋಜನೆಗೆ ಸರ್ಕಾರ ಪೂರ್ಣ ಪ್ರಮಾಣದಲ್ಲಿ ಸಹಕಾರ ನೀಡುತ್ತಿದೆ. ಕೇರಳ ರಾಜ್ಯಕ್ಕಿಂತಲೂ ಉತ್ತಮ ರೀತಿಯಲ್ಲಿ ಆಯೋಜನೆ ಮಾಡಿದರೆ ರಾಜ್ಯದ ಪ್ರವಾಸೋದ್ಯಮ ಬೆಳವಣಿಗೆಗೆ ಪೂರಕ ವಾತಾವರಣ ನಿರ್ಮಾಣವಾಗಲಿದೆ. ನಮ್ಮಲ್ಲಿ ಇದೀಗ 2ನೇ ಬಾರಿಯ ಕೈಟ್ ಆಯೋಜನೆಗೆ ಸಿದ್ಧವಾಗುತ್ತಿದ್ದೇವೆ. ಆದರೆ ಕೇರಳದವರು 12ನೇ ಆವೃತ್ತಿ ಮಾಡುತ್ತಿದ್ದು, ಅವರು ಶುರು ಮಾಡಿ 24 ವರ್ಷಗಳಾಗಿವೆ. ಆದರೆ ನಮ್ಮದು ಕೇವಲ ನಾಲ್ಕು ವರ್ಷ ಮಾತ್ರ ಆಗಿದೆ ಎಂದರು. ನಮ್ಮಲ್ಲಿನ ಜ್ವಲಂತ ಸಮಸ್ಯೆ ಎಂದರೆ ಅದು ಜಿಎಸ್‌ಟಿ ಆಗಿದ್ದು, ಜಿಎಸ್‌ಟಿ ಮಿತಿಗೊಳಿಸುವ ಸಂಬಂಧ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಶೀಘ್ರದಲ್ಲಿ ಭೇಟಿ ಮಾಡಿ ಮನವಿ ಸಲ್ಲಿಸಲಾಗುವುದು. ಕೋವಿಡ್ ಅವಧಿಯಲ್ಲಿ ಸರ್ಕಾರ ಪೂರ್ಣ ಸಹಕಾರ ನೀಡಿ, ಲಿಕ್ಕರ್ ವಹಿವಾಟಿಗೆ ಅನುಮತಿ ನೀಡಿತು. ಮಹಾರಾಷ್ಟ್ರದಲ್ಲಿ ಎಲ್ಲಾ ವಿಧದ ಹೋಟೆಲ್‌ಗಳಿಗೆ ಉದ್ಯಮ ಸ್ಥಾನಮಾನ ನೀಡಲಾಗಿದೆ. ಅದೇ ರೀತಿಯಲ್ಲಿ ರಾಜ್ಯದಲ್ಲೂ ಕ್ರಮ ವಹಿಸಲು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಅವರಿಗೆ ಮನವಿ ಕೊಟ್ಟಿದ್ದೇವೆ. ಅವರು ಭರವಸೆ ನೀಡಿದ್ದು, ಇದು ಈಡೇರಿದರೆ ಹೋಟೆಲ್ ಮಾಲೀಕರಿಗೆ ಅನುಕೂಲವಾಗಲಿದೆ. ಕನ್ನಡಿಗನಾಗಿ ನಾನು 2ನೇ ಬಾರಿಗೆ ಎಫ್‌ಹೆಚ್‌ಆರ್‌ಎಐ ಅಧ್ಯಕ್ಷನಾಗಿದ್ದೇನೆ. ಇದುವರೆಗೆ ಬೇರೆ ಯಾರೂ ಕನ್ನಡಿಗರು ಅಧ್ಯಕ್ಷರು ಆಗಿಲ್ಲ. ನನಗೆ 2ನೇ ಅವಧಿಗೆ ಮತ್ತೆ ಅವಕಾಶ ದೊರಕಿದೆ ಎಂದು ತಿಳಿದರು. ಇದಕ್ಕೂ ಮುನ್ನ ಎಫ್‌ಹೆಚ್ ಆರ್‌ಎಐಗೆ ನೂತನವಾಗಿ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಹಿನ್ನೆಲೆಯಲ್ಲಿ ಕೆ.ಶ್ಯಾಮರಾಜು ಅವರನ್ನು ಮೈಸೂರು ಹೋಟೆಲ್ ಮಾಲೀಕರ ಸಂಘದಿಂದ ಸನ್ಮಾನಿಸಲಾಯಿತು. ಬಳಿಕ ಪಾಲುದಾರರೊಂದಿಗೆ ಸಂವಾದ ಕಾರ್ಯಕ್ರಮ ನಡೆಯಿತು. ಬೆಂಗಳೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಪಿ.ಸಿ.ರಾವ್, ಕೆಟಿಎಸ್ ಕಾರ್ಯದರ್ಶಿ ಎಸ್.ಮಹಲಿಂಗಯ್ಯ, ಖಜಾಂಚಿ ಜಿ.ಕೆ.ಶೆಟ್ಟಿ, ಮೈಸೂರು ಟ್ರಾವೆಲ್ ಅಸೋಸಿಯೇಷನ್ ಅಧ್ಯಕ್ಷ ಬಿ.ಎಸ್.ಪ್ರಶಾಂತ್, ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಎಂಸಿಸಿಐ ಅಧ್ಯಕ್ಷ ಕೆ.ಬಿ.ಲಿಂಗರಾಜು ಮತ್ತಿತರರು ಹಾಜರಿದ್ದರು.

2ನೇ ಟೆಸ್ಟ್: ನ್ಯೂಜಿಲೆಂಡ್ 259ಕ್ಕೆ ಆಲೌಟ್



ಪುಣೆ, ಅ.24– ಯುವ ಆಲ್‌ರೌಂಡರ್ ವಾಷಿಂಗ್ಟನ್ ಸುಂದರ್, ಆರ್.ಅಶ್ವಿನ್ ಅವರ ಸ್ಪಿನ್ ಮೋಡಿಗೆ ತತ್ತರಿಸಿದ ನ್ಯೂಜಿಲೆಂಡ್ ಭಾರತ ವಿರುದ್ಧದ 2ನೇ ಟೆಸ್ಟ್‌ನ ಮೊದಲ ಇನ್ನಿಂಗ್ಸ್‌ನಲ್ಲಿ 79.1 ಓವರ್‌ಗಳಲ್ಲಿ 259 ರನ್‌ಗಳಿಗೆ ಆಲೌಟಾಗಿದೆ.

ಇಲ್ಲಿನ ಎಂಸಿಎ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ನ್ಯೂಜಿಲೆಂಡ್ ಪರ ಇನ್ನಿಂಗ್ಸ್ ಆರಂಭಿಸಿದ ನಾಯಕ ಟಾಮ್ ಲೇಥಮ್ 15ರನ್ ಗಳಿಸಿ ಅಶ್ವಿನ್‌ಗೆ ವಿಕೆಟ್ ಒಪ್ಪಿಸಿದರು. ನಂತರ ಬಂದ ವಿಲ್ ಯಂಗ್ ಕೂಡ 18 ರನ್ ಗಳಿಸಿ ಅಶ್ವಿಗೆ ವಿಕೆಟ್ ಒಪ್ಪಿಸಿದರು. ನಂತರ ಜೊತೆಯಾದ ಡೆವೊನ್ ಕಾನ್ವೇ ಹಾಗೂ ರಚಿನ್ ರವೀಂದ್ರ ಮೂರನೇ ವಿಕೆಟ್‌ಗೆ 62 ರನ್‌ಗಳ ಜೊತೆಯಾಟವಾಡುವ ಮೂಲಕ ತಂಡಕ್ಕೆ ಚೇತರಿಕೆ ನೀಡಿದರು. ಈ ವೇಳೆ 76 ರನ್ ಸಿಡಿಸಿ ಉತ್ತಮವಾಗಿ ಆಡುತ್ತಿದ್ದ ಕಾನ್ವೆ ಅವರಿಗೆ ಅಶ್ವಿನ್ ಪೆವಿಲಿಯನ್ ಹಾದಿ ತೋರಿದರು. ಆ ಮೂಲಕ ಅಗ್ರ ಕ್ರಮಾಂಕದ ಮೂವರು ಬ್ಯಾಟರ್‌ಗಳನ್ನು ಬಲಿ ಪಡೆಯುವಲ್ಲಿ ಅಶ್ವಿನ್ ಯಶಸ್ವಿಯಾದರು.

ಮೋಡಿ ವಾಷಿಂಗ್ಟನ್ ಸುಂದರ್ ಮೋಡಿ: ದೇಸಿ ಕ್ರಿಕೆಟ್‌ನಲ್ಲಿ ಅದ್ಭುತ ಪ್ರದರ್ಶನದ ಮೂಲಕ ಮಿಂಚಿ ಆಯ್ಕೆಗಾರರ ಗಮನ ಸೆಳೆದಿದ್ದ ವಾಷಿಂಗ್ಟನ್ ಸುಂದರ್, ಇದೀಗ ಕಮ್‌ಬ್ಯಾಕ್ ಪಂದ್ಯದಲ್ಲೇ 7 ವಿಕೆಟ್ ಕಬಳಿಸುವ ಮೂಲಕ ಮಿಂಚಿದ್ದಾರೆ. ಕಿವೀಸ್ ಪರ ಮಧ್ಯಮ ಕ್ರಮಾಂಕದಲ್ಲಿ ದಿಟ್ಟ ಹೋರಾಟ ನಡೆಸಿದ ರಚಿನ್ ರವೀಂದ್ರ ಸೇರಿದಂತೆ 7 ಆಟಗಾರರನ್ನು ಬಲಿ ಪಡೆಯುವ ಮೂಲಕ ಸುಂದರ್, ತಮ್ಮ ಆಯ್ಕೆಯನ್ನು ಸಮರ್ಥಿಸಿಕೊಳ್ಳುವಲ್ಲಿ ಯಶಸ್ವಿಯಾದರು. ವಾಷಿಂಗ್ಟನ್ ಸುಂದರ್, ಟೆಸ್ಟ್ ಕ್ರಿಕೆಟ್‌ನಲ್ಲಿ ಇದೇ ಮೊದಲ ಬಾರಿಗೆ 5+ ವಿಕೆಟ್ ಕಬಳಿಸುವಲ್ಲಿ ಯಶಸ್ವಿಯಾದರು. ಉಳಿದಂತೆ ರಚಿನ್ ರವೀಂದ್ರ 65, ಡ್ಯಾರಿಯಲ್ ಮಿಚೆಲ್ 18, ಮಿಚೆಲ್ ಸ್ಯಾಂಟ್ನರ್ 33 ರನ್ ಗಳಿಸಿದರು. ಭಾರತದ ಪರ ವಾಷಿಂಗ್ಟನ್ ಸುಂದರ್ 7, ಅಶ್ವಿನ್ 3 ವಿಕೆಟ್ ಪಡೆದರು.

ನಂತರ ಮೊದಲ ಇನ್ನಿಂಗ್ಸ್ ಆರಂಭಿಸಿದ ಭಾರತ ಮೊದಲ ದಿನದ ಅಂತ್ಯಕ್ಕೆ 11 ಓವರ್‌ಗಳಲ್ಲಿ 1 ವಿಕೆಟ್ ನಷ್ಟಕ್ಕೆ 16 ರನ್ ಗಳಿಸಿದೆ. ಯಶಸ್ವಿ ಜೈಸ್ವಾಲ್ 6, ಶುಭ್‌ಮನ್ ಗಿಲ್ 10 ರನ್ ಗಳಿಸಿ 2ನೇ ದಿನಕ್ಕೆ ಬ್ಯಾಟಿಂಗ್ ಕಾಯ್ದುಕೊಂಡಿದ್ದಾರೆ.

Central Sericultural Research & Training Institute
(Central Silk Board-Min of Textiles - Govt. Of India)
Manandavadi Road, Srirampura, Mysore-570008

No.CSB/RTI/ES/SSW-RCMT/2023-2024 Dated: 23-10-2024

WALK-IN-INTERVIEW FOR THE POST OF SEMI SKILLED WORKER

A Walk-in-Interview will be held on **14.11.2024** at Central Sericultural Research and Training Institute, Srirampura, Mysuru-570008 as shown below:

'A' 02 (two) **Semi Skilled Worker (SSW)** purely on contract basis under CSB approved project **"Final Yield evaluation of mulberry genotypes for leaf yield under optimal and sub-optimal input conditions", (Project code: PIE 01036SI)"** purely on contract basis for a period up to December 2028 or completion of project whichever is earlier under CSB approved project.
Qualifications for Semi Skilled Worker (SSW): SSLC/10th Pass
Desirable Candidate: Experience in mulberry cultivation and garden maintenance

Walk-in-Interview will be held on **14/11/2024, time 10:30 AM** (candidates should reach the venue by **9:30 AM** for verification of documents, other recruitment procedures).
Interested can also visit our website **www.cstrimys.res.in** for details.

Director, CSR&TI, Mysuru

CHANGE OF NAME
I, Shankara, S/o late Bettegowda, residing at Door No. 837, 9th Cross, Yaraganahalli Hosa Badavane, Siddartha Nagar Post, Mysuru-570 011, have changed my name from Shankar to Shankara on my own free will, sworn in before Notary C. Mangala, Mysore, vide affidavit dated 23-10-2024.
Sd/- Shankara

ಸಾರ್ವಜನಿಕ ಪ್ರಕಟಣೆ

ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕು, ಹನಗೋಡು ಹೋಬಳಿ, ನೆಲ್ಲೂರು ಪಾಲ ಅಂಚೆ, 1ನೇ ಪಕ್ಷಿರಾಜಪುರ ಗ್ರಾಮದಲ್ಲಿ ವಾಸವಾಗಿರುವ ಜೀವನ್ ರವರ ಧರ್ಮಪತ್ನಿಯಾದ ಶ್ರೀಮತಿ ಕಾಜಲ್ ಜೀವನ್, ಮೊಬೈಲ್ ನಂ. 9008411170 ರವರು ನಮ್ಮ ಕಕ್ಷಿದಾರರಾಗಿದ್ದು, ಅವರು ದಿನಾಂಕ: 18–09–2024 ರಂದು ಮೈಸೂರು ಜಿಲ್ಲೆ, ಹುಣಸೂರು ಟೌನ್, ವಾರ್ಡ್ ನಂ.11, "ಬಿ.ಎಮ್. ಬೈಪಾಸ್ ರಸ್ತೆ" ಸ್ವತ್ತಿನ ಹೊಸ ಸಂಖ್ಯೆ:–1–6–114, ಸ್ವತ್ತಿನ ಹಳೇ ಸಂಖ್ಯೆ:–3616/4 ಸ್ವತ್ತಿನ ನಿರ್ಧಾರಣಾ ಸಂಖ್ಯೆ:–1405/3616/4 ರ ಷೆಡ್ಯೂಲ್ ಸ್ವತ್ತನ್ನು, "ಶುದ್ಧ ಕ್ರಯಕ್ಕೆ ತೆಗೆದುಕೊಳ್ಳಲು" ಅದರ ಮಾಲೀಕರಾದ ಮೈಸೂರು ಜಿಲ್ಲೆ, ಹುಣಸೂರು ಟೌನ್, ಎನ್.ಇ.ಎಸ್. ಕಾಲೋನಿ, ಮನೆ. ನಂ. 1582/3582 ಇಲ್ಲಿ ವಾಸವಾಗಿರುವ ಲೇಟ್.ಬೋಲರಾಮ್ ಸಿರ್ವಿ ರವರ ಮಗನಾದ ಶ್ರೀ.ಮದನ್ ಲಾಲ್ ಸಿರ್ವಿ ರವರಿಂದ ಷೆಡ್ಯೂಲ್ ಸ್ವತ್ತಿಗೆ "ಶುದ್ಧ ಕ್ರಯದ ಒಪ್ಪಂದದ ಅಗ್ರಿಮೆಂಟ್ ಯಾ ಕರಾರು" ಪತ್ರವನ್ನು ಮಾಡಿಸಿ ಕೊಂಡಿರುತ್ತಾರೆ. ಸದರಿ ಸ್ವತ್ತು ಮೇಲ್ಕಂಡ ಮದನ್ ಲಾಲ್ ಸಿರ್ವಿ ರವರಿಗೆ ಹುಣಸೂರು ಉಪನೋಂದಣಾಧಿಕಾರಿಗಳ ಕಛೇರಿಯ 1ನೇ ಪುಸ್ತಕದ ಹೆಚ್.ಯು.ಎನ್. 1–09196–2018–19 ಆಗಿ ಸಿ.ಡಿ. ನಂಬರ್ ಹೆಚ್.ಯು.ಎನ್.ಡಿ. 237 ನೇದ್ದರಲ್ಲಿ ದಿನಾಂಕ: 20–12–2018 ರಂದು ರಿಜಿಸ್ಟರ್ ಆಗಿರುವ ಕ್ರಯಪತ್ರದ ಮುಖಾಂತರ ಬಂದಂತಹ ಸ್ವತ್ತಾಗಿದ್ದು, ಅವರ ಸಂಪೂರ್ಣ ಹಕ್ಕು, ಅಧಿಕಾರ, ಹಿತಾಸಕ್ತಿ ಹಾಗೂ ಸ್ವಾಧೀನಾನುಭವವನ್ನು ಹೊಂದಿರುತ್ತಾರೆ. ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಯಾರಾದರೂ ಯಾವುದೇ ರೀತಿಯಾದ ಕ್ರಯ, ಭೋಗ್ಯ, ಆಧಾರ, ನ್ಯಾಯಾಲಯದ ಪ್ರಕರಣಗಳು ಇದ್ದರೆ ಅದಕ್ಕೆ ಸಂಬಂಧಪಟ್ಟಂತೆ ತಕರಾರು ಸಲ್ಲಿಸುವುದಿದ್ದರೆ 7 ದಿನಗಳ ಒಳಗಾಗಿ ನಮ್ಮ ಕಕ್ಷಿದಾರರ ವಿಳಾಸಕ್ಕೆ ಅಥವಾ ನಮ್ಮ ವಿಳಾಸಕ್ಕೆ ಬರವಣಿಗೆ ಮೂಲಕ ಆಕ್ಷೇಪಣೆಯನ್ನು ಸಲ್ಲಿಸಲು ಅವಕಾಶ ನೀಡಲಾಗಿರುತ್ತದೆ.

–ಷೆಡ್ಯೂಲ್ ಸ್ವತ್ತಿನ ವಿವರ:–

ಮೈಸೂರು ಜಿಲ್ಲೆ, ಹುಣಸೂರು ಟೌನ್, ವಾರ್ಡ್ ನಂ. 11, "ಬಿ.ಎಮ್.ಬೈಪಾಸ್ ರಸ್ತೆ" ಗೆ ಸೇರಿದ ಸ್ವತ್ತು ಈ ಶುದ್ಧ ಕ್ರಯ ಒಪ್ಪಂದದ ಅಗ್ರಿಮೆಂಟ್ ಯಾ ಕರಾರು ಪತ್ರದ ಸ್ವತ್ತಿಗೆ ಚಕ್ಕುಬಂಧಿ:–
> ಪೂರ್ವಕ್ಕೆ:– ಸಹದೇವ ರವರ ಸ್ವತ್ತು,
> ಪಶ್ಚಿಮಕ್ಕೆ:– ಭೋಟೇಜಾನ್ ಸಾಹೇಬರ ಮನೆ ಮತ್ತು ರಸ್ತೆ,
> ಉತ್ತರಕ್ಕೆ:– ಬಿ.ಎಂ.ಬೈಪಾಸ್ ರಸ್ತೆ,
> ದಕ್ಷಿಣಕ್ಕೆ:– ನಾರಾಯಣ ಬಿನ್ ಲೇಟ್.ದಾಸಪ್ಪ ರವರ ಮನೆ,

ಈ ಮಧ್ಯೆ ಇರುವ ನಗರಸಭಾ ಸ್ವತ್ತಿನ ಹೊಸ ಸಂಖ್ಯೆ: 1–6–114, ಸ್ವತ್ತಿನ ಹಳೇ ಸಂಖ್ಯೆ–3616/4 ಸ್ವತ್ತಿನ ನಿರ್ಧಾರಣಾ ಸಂಖ್ಯೆ:–1405/3616/4 ಉಳ್ಳದರ ವಿಸ್ತೀರ್ಣ ಪೂರ್ವ ಪಶ್ಚಿಮವಾಗಿ ಎಂಟು ಪಾಯಿಂಟ್ ಎಂಟು ನಾಲ್ಕು ಪ್ಲಸ್ ಆರು ಪಾಯಿಂಟ್ ಸೊನ್ನೆ ಒಂಭತ್ತು ಓವರ್ ಎರಡು ಮೀಟರ್, ದಕ್ಷಿಣೋತ್ತರವಾಗಿ ಹದಿನೆಂಟು ಪಾಯಿಂಟ್ ಎರಡು ಎಂಟು ಎಂಟು ಸೊನ್ನೆ ಮೂರು ಏಳು ಮೀಟರ್ (884+6.09/2X18.288037)=13656741 ಚದರ ಮೀಟರ್‌ವುಳ್ಳ ಖಾಲಿ ನಿವೇಶನ ಮತ್ತು ಈ ನಿವೇಶನದೊಳಗಿರುವ 122.817766 ಚದರ ಮೀಟರ್ ಉಳ್ಳ ರೆಡ್ ಆಕ್ಸೈಡ್ ನೆಲಹಾಸು ವುಳ್ಳ ನೆಲಮಹಡಿ ವಾಣಿಜ್ಯ ನೆಲ ಮಾಳಿಗೆ ಕಟ್ಟಡ ಒಂದು ಮತ್ತು 122.817766 ಚದರ ಮೀಟರ್ ಉಳ್ಳ ರೆಡ್ ಆಕ್ಸೈಡ್ ನೆಲಹಾಸುವುಳ್ಳ ನೆಲಮಹಡಿ ವಾಣಿಜ್ಯ ನೆಲ ಮಹಡಿ ಕಟ್ಟಡ ಮಹಡಿ ಒಂದು ಮತ್ತು 122.817766 ಚದರ ಮೀಟರ್ ಕಟ್ಟಡ ಒಂದು ಮತ್ತು 122.817766 ಚದರ ಮೀಟರ್ ಉಳ್ಳ ರೆಡ್ ಆಕ್ಸೈಡ್ ನೆಲಹಾಸು ವುಳ್ಳ ಮೊದಲ ಮಹಡಿ ವಾಸಯೋಗ್ಯ ಕಟ್ಟಡ ಮಹಡಿ ಒಂದು ಮತ್ತು 122.817766 ಚದರ ಮೀಟರ್ ಕಟ್ಟಡ ಒಂದು ಮತ್ತು 122.817766 ಚದರ ಮೀಟರ್ ಉಳ್ಳ ರೆಡ್ ಆಕ್ಸೈಡ್ ನೆಲಹಾಸುವುಳ್ಳ ಎರಡನೇ ಮಹಡಿ ವಾಸಯೋಗ್ಯ ಕಟ್ಟಡ ಮಹಡಿಯೂ.

Sd/- Avinash. A, - M.A., LL.B.,
Advocate, Off. No. 17, J.P. Trust Building, 1st Floor, Gokula Road, Hunsur. Mob: 8050846315
Date: 24-10-2024

ಕಳೆದಿದೆ

ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ಪೊಲೀಸ್ ಠಾಣಾ ವ್ಯಾಪ್ತಿಯ ಹಸುವಿನ ಕಾವಲು ಗ್ರಾಮದ ವಿ ಟಿ.ದಿನೇಶ್ ಕುಮಾರ್ ಅವರಿಗೆ ಸೇರಿದ ಗ್ರಾಮದ ಸರ್ವೆ ನಂಬರ್ 26, 3 ಎಕರೆ 31 ಗುಂಟೆ ಜಮೀನಿನ ಕ್ರಯಪತ್ರ ಕಳೆದು ಹೋಗಿದ್ದು, ಗ್ರಾಮದ ಸೇತು ರಾಮ್ ಅವರಿಂದ ವಿ.ಟಿ .ಭುವನೇಶ್ವರ್ ಅವರಿಗೆ ನೋಂದಣಿ ಕ್ರಯ ಪತ್ರವಾಗಿದ್ದು, 1ನೇ ಪುಸ್ತಕದ ಐ.ಟಿ.ಪಿ.1–03012–2017–18 ಸಾಲಿನ ಸಿ.ಡಿ. ನಂಬರ್ ಐ.ಟಿ.ಪಿ.ಡಿ 19ನೇ ದಿನಾಂಕ 11–12–2017 ರಂದು ಹಸುವಿನ ಕಾವಲು ಗ್ರಾಮದ ಸರ್ವೆ ನಂಬರ್ 415 ರಲ್ಲಿ 0.00 ಎಕರೆ ಜಮೀನನ್ನು ಜವರೇಗೌಡರಿಂದ ಶಿವರುದ್ರಪ್ಪ ಅವರಿಗೆ ಕ್ರಯ ಪತ್ರವಾಗಿರುವ ಮೂಲ ನೋಂದಣಿ ಕ್ರಯ ಪತ್ರಗಳು ಮನೆಯನ್ನು ಸ್ವಚ್ಛ ಮಾಡುವ ವೇಳೆ ಕಾಣೆಯಾಗಿದ್ದು, ಪತ್ತೆ ಮಾಡಿಕೊಡುವಂತೆ ಪೊಲೀಸ್ ಠಾಣೆಗೆ ದೂರು ನೀಡಲಾಗಿದೆ. ಕ್ರಯ ಪತ್ರ ಸಿಕ್ಕಿದವರು ಬೆಟ್ಟದಪುರ ಪೊಲೀಸ್ ಠಾಣೆ 0822327500 ದೂರವಾಣಿ ಸಂಖ್ಯೆಗೆ ತಿಳಿಸಬೇಕೆಂದು ಕೋರಲಾಗಿದೆ.

ಹಾಸನ ನಗರಾಭಿವೃದ್ಧಿ ಪ್ರಾಧಿಕಾರ ಬಿ.ಎಂ.ರಸ್ತೆ, ಹಾಸನ. ದೂರವಾಣಿ: 08172–268876, 266719
Website:Hassan.uda.gov.in Email: hudahassas125@gmail.com
ನಂ:ಹಾ.ನ.ಪ್ರಾ/ಸ.ಕಾ.ಅ/ಟೆಂಡರ್–06/24–25 ದಿನಾಂಕ: 22–10–2024

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಈ ಮೂಲಕ ಪ್ರಚುರಪಡಿಸುವುದೇನೆಂದರೆ, ಹಾಸನ ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಈ ಕೆಳಕಂಡ ಕನ್ಸಲ್ಟೆನ್ಸಿ ಸರ್ವಿಸ್‌ಗಾಗಿ ಅರ್ಹ ಸಂಸ್ಥೆಗಳಿಂದ ಆನ್‌ಲೈನ್ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಆಸಕ್ತ ಗುತ್ತಿಗೆದಾರರು ತಮ್ಮ ದರ ನಮೂದಿಸಿದ ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ (Visit:https://kppp.karnataka.gov.in/) ಪೋರ್ಟಲ್ ಮೂಲಕ ಈ ಕೆಳಗೆ ನಿಗದಿಪಡಿಸಿದ ದಿನಾಂಕಗಳಂದು ಆನ್ ಲೈನ್‌ನಲ್ಲಿ ಸಲ್ಲಿಸತಕ್ಕದ್ದು. ವೆಬ್ ಸೈಟ್ www.hassan.uda.gov.in ನಲ್ಲಿಯು ವೀಕ್ಷಿಸಬಹುದು. 1)ಟೆಂಡರ್ ಸಲ್ಲಿಸಲು ಕೊನೆ ದಿನಾಂಕ: 22-10-2024 to 06-11-2024 up to 17.30 hrs 2)ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 08-11-2024 at 11.00 hrs 3)ಆರ್ಥಿಕ ಬಿಡ್ ತೆರೆಯುವ ದಿನಾಂಕ: 11-11-2024 at 11.00 hrs 4)ಕಾಮಗಾರಿಗಳ ಕಾಲಾವಧಿ: 06 ತಿಂಗಳುಗಳು ಕ್ರ.ಸಂ.1) ಕಾಮಗಾರಿಯ ಹೆಸರು: PROVIDING CONSULTANCY SERVICES FOR PREPARATION OF GIS BASED MASTER PLAN FOR HASSAN EXTENDED LOCAL PLANNING AREA (HSNUD/2024-25/SE0005) ಟೆಂಡರ್‌ಗಿಟ್ಟ ಮೊತ್ತ (ರೂ ಲಕ್ಷಗಳಲ್ಲಿ): 24.00 ಇ.ಎಂ.ಡಿ ಮೊತ್ತ: 50,000/-

ಸಹಿ/–(ಶ್ರೀ ಕೆ.ಎಂ. ರಮೇಶ) ಆಯುಕ್ತರು ನಗರಾಭಿವೃದ್ಧಿ ಪ್ರಾಧಿಕಾರ ಹಾಸನ,
ವಾಸಾಸಂಇ/ಹಿಸನಿ/ಹಾಸನ/593/ಕೆಎಸ್‌ಎಂಸಿಎ/2024–25

ಕರ್ನಾಟಕ ಸರ್ಕಾರ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ತಾಂತ್ರಿಕ ಸಹಾಯಕರು, ಮೈಸೂರು ಉಪ ವಿಭಾಗ,
ಅರಣ್ಯ ಭವನ, ಅಶೋಕಪುರಂ ಮೈಸೂರು–570008
ಸಂಖ್ಯೆ:ಸಅಸಂ/ಮೈಉವಿ/ಬಿ1/ಬಿಯುಡಿ/ಟೆಂಡರ್/ಸಿಆರ್–20/2024–25
ದಿನಾಂಕ: 15.10.2024

ಸವಿವರ ಟೆಂಡರ್ ಪ್ರಕಟಣೆ (ಇ–ಪ್ರಕ್ಯೂರ್‌ಮೆಂಟ್ ವೇದಿಕೆ)

ಕರ್ನಾಟಕ ರಾಜ್ಯದ ಮೈಸೂರು ಜಿಲ್ಲೆಯ ಮೈಸೂರು ಅರಣ್ಯ ವಿಭಾಗದ ಸರಗೂರು ವಲಯದಲ್ಲಿ 2024–25ನೇ ಸಾಲಿನಲ್ಲಿ ಆನೆ ನಿರೋಧಕ ಕಂದಕದ ಉತ್ಪಾದನ (ಡಾಟಾಶೀಟ್ ಪ್ರಕಾರ) ಮತ್ತು ನಂಜನಗೂಡು ವಲಯದಲ್ಲಿ ಅಸ್ತಿತ್ವದಲ್ಲಿರುವ ಕಾಂಪೌಂಡ್ ಗೋಡೆಗೆ ಮುಳ್ಳುತಂತಿ ಬೇಲಿ ಹಾಕಲು ಕಾಮಗಾರಿಯನ್ನು ಗುತ್ತಿಗೆದಾರರ ಮುಖಾಂತರ ಅನುಷ್ಠಾನಗೊಳಿಸಲು ಇ–ಪ್ರಕ್ಯೂರ್‌ಮೆಂಟ್ ವೇದಿಕೆಯಲ್ಲಿ ಟೆಂಡರ್ ಆಹ್ವಾನಿಸಿದ್ದು, ವಿವರ ಈ ಕೆಳಕಂಡಂತಿರುತ್ತದೆ.
1) ಗುತ್ತಿಗೆದಾರರು https://kppp.karnataka.gov.in ಅಂತರ್ಜಾಲದ ಮೂಲಕ ಟೆಂಡರಿನಲ್ಲಿ ಭಾಗವಹಿಸಬಹುದು. **2)** ಒಟ್ಟು ಟೆಂಡರ್‌ಗಿಟ್ಟಿರುವ ಕಾಮಗಾರಿಗಳ ಸಂಖ್ಯೆ–03 **3)** ಕಾಮಗಾರಿಗೆ ಗರಿಷ್ಠ ಮೊತ್ತ ರೂ.31.811, ಕನಿಷ್ಠ ರೂ.9.000, **4)** ಕಾಮಗಾರಿಯ ಇ.ಎಂ.ಡಿ ಮೊತ್ತ ಕ್ರಮವಾಗಿ ಗರಿಷ್ಠ ಮೊತ್ತ ರೂ.0.320, ಕನಿಷ್ಠ ರೂ.0.113 **5)** ಟೆಂಡರ್ ಷರತ್ತುಗಳ ಕುರಿತಾದ ಸ್ಪಷ್ಟೀಕರಣ ಕೇಳಲು ಕೊನೆಯ ದಿ: 22.10.2024 ಅಪರಾಹ್ನ 4.00 ಘಂಟೆವರೆಗೆ. **6)** ಗುತ್ತಿಗೆದಾರರು ಅಂತರ್ಜಾಲದ ಮೂಲಕ ಇ–ಪ್ರಕ್ಯೂರ್‌ಮೆಂಟ್ ವೇದಿಕೆಯಲ್ಲಿ ತಾಂತ್ರಿಕ ಮತ್ತು ಆರ್ಥಿಕ ಬಿಡ್ಡುಗಳನ್ನು ಸಲ್ಲಿಸಲು ಕೊನೆಯ ದಿ: 23.10.2024 ಸಂಜೆ 4.00 ಘಂಟೆವರೆಗೆ. **7)** ತಾಂತ್ರಿಕ ಬಿಡ್ಡುಗಳನ್ನು ತೆರೆಯುವ ದಿ: 24.10.2024 ಸಂಜೆ 4.00 ಘಂಟೆ ನಂತರ. **8)** ಆರ್ಥಿಕ ಬಿಡ್ಡುಗಳನ್ನು ತೆರೆಯುವ ದಿ: 25.10.2024 ಮಧ್ಯಾಹ್ನ 4.00 ಘಂಟೆ. **9)** ಮೇಲ್ಕಂಡ ದಿನಾಂಕಗಳಂದು ಟೆಂಡರ್ ಬಾರದ ಕಾಮಗಾರಿಗಳಿಗೆ ಸದರಿ ಟೆಂಡರ್ ಪ್ರಕಟಣೆ ಷರತ್ತುಗಳಿಗೆ ಒಳಪಟ್ಟು **10)** ಮರುಟೆಂಡರ್ ಸಲ್ಲಿಸಲು ಕೊನೆಯ ದಿ: 30.10.2024 ಸಂಜೆ 4.00 ಘಂಟೆವರೆಗೆ. **11)** ತಾಂತ್ರಿಕ ಬಿಡ್ಡುಗಳನ್ನು ತೆರೆಯುವ ದಿ: 04.11.2024 ಸಂಜೆ 4.00 ಘಂಟೆ ನಂತರ. **12)** ಆರ್ಥಿಕ ಬಿಡ್ಡುಗಳನ್ನು ತೆರೆಯುವ ದಿ: 05.11.2024 ಸಂಜೆ 4.00 ಘಂಟೆ. **13)** ಹೆಚ್ಚಿನ ವಿವರಗಳಿಗಾಗಿ https://kppp.karnataka.gov.in ಅಂತರ್ಜಾಲ ಅಥವಾ ಈ ಕಛೇರಿಯ ದೂರವಾಣಿ ಸಂಖ್ಯೆ: 0821–2483853 ನ್ನು ಕೆಲಸದ ದಿನಗಳಲ್ಲಿ ಸಂಪರ್ಕಿಸುವುದು. **14)** ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ, ಮಾರ್ಪಾಡು ಅಥವಾ ಇತರ ಬದಲಾವಣೆಗಳಿದ್ದಲ್ಲಿ https://kppp.karnataka.gov.in ವೆಬ್‌ಸೈಟ್‌ನಲ್ಲಿ ಪ್ರಚಾರಪಡಿಸಲಾಗುವುದು.

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ತಾಂತ್ರಿಕ ಸಹಾಯಕರು, ಮೈಸೂರು ಉಪ ವಿಭಾಗ, ಮೈಸೂರು
DIPR/DDMYS-708/KSMCA-481/2024-25

ಭಾರತೀನಗರ ಬಳಿ ಹಾಡಹಗಲೇ ದರೋಡೆ

ಮನೆಗೆ ನುಗ್ಗಿ ಗೃಹಿಣಿಯ ಕೈ-ಕಾಲು ಕಟ್ಟಿ ಹಾಕಿ ನಗನಾಣ್ಯ ದೋಚಿ ಪರಾರಿ



ದರೋಡೆಕೋರರು ಇಡೀ ಮನೆಯನ್ನು ಜಾಲಾಡಿ ನಗನಾಣ್ಯ ದೋಚಿರುವುದು.


ಭಾರತೀನಗರ.ಅ.24–ಮನೆಯಲ್ಲಿ ಒಂಟಿ ಮಹಿಳೆ ಇರುವುದನ್ನು ತಿಳಿದ ದರೋಡೆಕೋರರು ಹಾಡಹಗಲೇ ಮನೆಗೆ ನುಗ್ಗಿ ಮಹಿಳೆಯ ಕೈಕಾಲು ಕಟ್ಟಿಹಾಕಿ ಚಿನ್ನಾಭರಣ ಮತ್ತು ನಗದನ್ನು ದೋಚಿ ಪರಾರಿಯಾಗಿರುವ ಘಟನೆ ಸಮೀಪದ ಮೆಳ್ಳಹಳ್ಳಿಯಲ್ಲಿ ಜರುಗಿದೆ.

ಮೆಳ್ಳಹಳ್ಳಿ ಗ್ರಾಮದ ಹೊನ್ನೇಗೌಡರ ಮಗ ವೆಂಕಟೇಶ್ ಎಂಬುವರ ಮನೆಯಲ್ಲಿ ಈ ಕಳ್ಳತನ ನಡೆದಿದೆ. ವೆಂಕಟೇಶ್ ಅವರ ಪತ್ನಿ ಹರ್ಷಿತ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಿ ಮನೆಯಲ್ಲಿ ಒಬ್ಬರೇ ಇದ್ದರು. ವೆಂಕಟೇಶ್ ಮತ್ತು ಅವರ ತಾಯಿಯು ಸಹ ತಮ್ಮ ಗದ್ದೆ ಕೆಲಸಕ್ಕಾಗಿ ಹೋಗಿದ್ದರು. ಇದನ್ನು ಅರಿತ ದರೋಡೆಕೋರರು ಗುರುವಾರ ಬೆಳಿಗ್ಗೆ ಮನೆಗೆ ನುಗ್ಗಿ ಮುಂದಿನ ಬಾಗಿಲು ಮತ್ತು ಹಿಂದಿನ ಬಾಗಿಲುಗಳನ್ನು ಹಾಕಿಕೊಂಡು ಹರ್ಷಿತಾ ಅವರ ಕೈ-ಕಾಲುಗಳನ್ನು ಕಟ್ಟಿ ಬಾಯಿಗೆ ಬಟ್ಟೆ ತುರುಕಿ ಬೀರುವಿನಲ್ಲಿದ್ದ 1.5 ಲಕ್ಷ ನಗದು, 25 ಗ್ರಾಂ ಚಿನ್ನಾಭರಣಗಳನ್ನು ದೋಚಿ ಮನೆಯ ಹಿಂಬಾಗಿಲಿನಿಂದ ಪರಾರಿಯಾಗಿದ್ದಾರೆ.

ನಂತರ ಮನೆಗೆ ಬಂದ ಕುಟುಂಬದವರು ಹರ್ಷಿತ ಅವರ ಕೈ-ಕಾಲುಗಳಿಗೆ ಕಟ್ಟಿದ್ದ ಹಗ್ಗವನ್ನು ಬಿಚ್ಚಿ, ಬಾಯಿಯಿಂದ ಬಟ್ಟೆಯನ್ನು ತೆಗೆದಿದ್ದಾರೆ. ಈ ಬಗ್ಗೆ ವೆಂಕಟೇಶ್ ಅವರ ಪತ್ನಿ ಹರ್ಷಿತಾ ಅವರು ಕೆ.ಎಂ.ದೊಡ್ಡಿ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ದೂರಿನ ಮೇರೆಗೆ ಪೊಲೀಸರು ಮತ್ತು ಶ್ವಾನದಳ ಸ್ಥಳಕ್ಕೆ ಆಗಮಿಸಿ ಪರಿಶೀಲನೆ ನಡೆಸಿದ್ದಾರೆ. ಈ ಸಂಬಂಧ ಕೆ.ಎಂ ದೊಡ್ಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಈ ಹಿಂದೆಯೂ ಸಹ ವೆಂಕಟೇಶ್ ಅವರ ಪಕ್ಕದ ಕರಿಯಪ್ಪ ಎಂಬುವವರ ಮನೆಯಲ್ಲೂ ಕಳ್ಳತನವಾಗಿತ್ತು ಈ ಘಟನೆಯಿಂದ ಜನರಲ್ಲಿ ಭಯದ ವಾತಾವರಣ ನಿರ್ಮಾಣವಾಗಿದ್ದು ಮೆಳ್ಳಹಳ್ಳಿಗೆ ಬೀಟ್ ಪೊಲೀಸರನ್ನು ಹೆಚ್ಚು ನಿಯೋಜಿಸಬೇಕೆಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಕಿಕ್ಕೇರಿಯಲ್ಲಿ ನಾಯಿಗಳ ಕಾಟ



ಕಿಕ್ಕೇರಿ: ಪಟ್ಟಣದಲ್ಲಿ ಬೀದಿನಾಯಿಗಳ ಕಾಟ ಹೆಚ್ಚಾಗಿದ್ದು ಹಲವರ ಮೇಲೆ ದಾಳಿ ಮಾಡಿ ಕಚ್ಚಿರುವ ಪ್ರಕರಣ ಜರುಗಿದೆ. ಇದು ಹುಚ್ಚುನಾಯಿ ಇರಬಹುದು ಎಂದು ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ. ಗುರುವಾರ ಬೆಳ್ಳಂಬೆಳಗ್ಗೆ ಕಿಕ್ಕೇರಿಯಿಂದ ಬೂವಿನಹಳ್ಳಿ ಕಡೆಗೆ ಎಂದಿನಂತೆ ವಾಯುವಿಹಾರಕ್ಕೆ ತೆರಳುತ್ತಿದ್ದ ನಾಗರಿಕರ ಮೇಲೆ ನಾಯಿ ದಾಳಿ ಮಾಡಿದೆ. ಟೀ ಅಂಗಡಿ ಮುಂದೆ ಕಾಫಿ ಕುಡಿಯುತ್ತಿದ್ದ ಹಲವರ ಮೇಲೆ ಎಗರಿದೆ. ಬಾಗಿಲು ತೆಗೆದಿರುವ ಮನೆಗೆ ನುಗ್ಗಿದೆ. ನಾಯಿ ವರ್ತನೆ ಕಂಡು ಸ್ಥಳದಲ್ಲಿದ್ದ ಹಲವು ನಾಗರಿಕರು ನಾಯಿ ಓಡಿಸಿಕೊಂಡು ಹೋಗಿದ್ದಾರೆ. ಯಾರಿಗೂ ಸಿಗದೆ ನಾಯಿ ಹೊರವಲಯದಲ್ಲಿರುವ ತೆಂಗಿನ ತೋಟಕ್ಕೆ ಓಡಿ ಹೋಗಿದೆ.

ಸಾವಿನಲ್ಲೂ ಸಾರ್ಥಕತೆ ಮೆರೆದ ಪೋಷಕರು

ರಸ್ತೆ ಅಪಘಾತದಲ್ಲಿ ಸಾವನ್ನಪ್ಪಿದ ಸ್ಯಾಕ್ಸೋಫೋನ್ ಕಲಾವಿದ ಮಗನ ಅಂಗಾಂಗ ದಾನ ಮಾಡಿ ಹಲವರ ಜೀವ ಉಳಿಸಿದ ಕುಟುಂಬ



ನಾಗಮಂಗಲ, ಅ.24–ರಸ್ತೆ ಅಪಘಾತದಲ್ಲಿ ಸಾವನ್ನಪ್ಪಿದ ಮಗನ ದೇಹದ ಅಂಗಾಂಗಗಳನ್ನು ಬಿಜಿಎಸ್ ಆಸ್ಪತ್ರೆಗೆ ದಾನ ಮಾಡಿ ಹಲವರ ಜೀವ ಉಳಿಸುವ ಮೂಲಕ ಪೋಷಕರು ಸಾವಿನಲ್ಲೂ ಮಾನವೀಯತೆ ಮೆರೆದಿದ್ದಾರೆ.

ಬೆಳ್ಳೂರು ನಿವಾಸಿ ರಾಜಣ್ಣ ಎಂಬುವರ ಮಗ ನಟರಾಜ್(30) ಸ್ಯಾಕ್ಸೋಫೋನ್ ಕಲಾವಿದ. ಅ.22 ರ ಮಂಗಳವಾರ ರಾತ್ರಿ ಬೆಳ್ಳೂರು ಸಮೀಪ ಮಾರುತಿಪುರ ಗ್ರಾಮದ ಬಳಿ ಎರಡು ಬೈಕುಗಳ ನಡುವೆ ಡಿಕ್ಕಿ ಸಂಭವಿಸಿ ಮೆದುಳು ನಿಷ್ಕ್ರಿಯಗೊಂಡಿದ್ದ ಯುವಕ ನಟರಾಜ್ ಅಂಗಾಂಗವನ್ನು ದಾನ ಮಾಡುವ ಮೂಲಕ ಅತನ ತಂದೆ ತಾಯಿ ನೋವಿನಲ್ಲೂ ಸಾರ್ಥಕತೆ ಮೆರೆದಿದ್ದಾರೆ.

ಮೃತ ನಟರಾಜ್ ತನ್ನ ಭಾಮೈದ ಮಾಧವನ ಜೊತೆ ಬೈಕಿನಲ್ಲಿ ಬರುತ್ತಿದ್ದಾಗ ಎದುರಿಗೆ ಬಂದ ಅಪರಿಚಿತ ಬೈಕ್ ಸವಾರ ಡಿಕ್ಕಿ ಹೊಡೆದು ಪರಾರಿಯಾಗಿದ್ದಾನೆ. ಡಿಕ್ಕಿ ಹೊಡೆದ ರಭಸಕ್ಕೆ ನೆಲಕ್ಕುರುಳಿದ ನಟರಾಜ್ ತಲೆಗೆ ಗಂಭೀರ ಗಾಯಗಳಾಗಿದ್ದು, ಭಾಮೈದ ಮಾಧವನಿಗೆ ಸಣ್ಣಪುಟ್ಟ ಗಾಯಗಳಾಗಿತ್ತು.

ಹತ್ತಿರದ ಬಿ.ಜಿ.ನಗರದ ಆದಿಚುಂಚನಗಿರಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗಿತ್ತು. ಆದರೆ ಚಿಕಿತ್ಸೆ ಫಲಿಸದೆ ಬುಧವಾರ ಬೆಳಗ್ಗೆ ಆಸ್ಪತ್ರೆಯಲ್ಲಿ ನಟರಾಜ್ ಕೊನೆಯುಸಿರೆಳೆದರು.

ಕುಟುಂಬಕ್ಕೆ ಆಧಾರವಾಗಿದ್ದ ಒಬ್ಬನೇ ಮಗನನ್ನು ಕಳೆದುಕೊಂಡ ಮೃತ ನಟರಾಜ್ ಪೋಷಕರು ತಮ್ಮ ಮಗನ ಸಾವಿನ ದುಃಖದ ನಡುವೆಯೂ ಆತನ ಕಣ್ಣು, ಕಿಡ್ನಿ ಸೇರಿದಂತೆ ಇತರ ದೇಹದ ಅಂಗಾಂಗಗಳನ್ನು ಆಸ್ಪತ್ರೆಗೆ ದಾನ ಮಾಡುವ ಮೂಲಕ ಮಾನವೀಯತೆ ಮೆರೆದಿದ್ದಾರೆ. ಇದರಿಂದ ಹಲವರ ಜೀವ ಉಳಿದಿದೆ.

ಆದಿಚುಂಚನಗಿರಿ ಆಸ್ಪತ್ರೆಯ ನುರಿತ ತಜ್ಞ ವೈದ್ಯರು ಯಶಸ್ವಿಯಾಗಿ ಶಸ್ತ್ರ ಚಿಕಿತ್ಸೆ ನಡೆಸಿ ಕಿಡ್ನಿ, ಕಣ್ಣು ಮತ್ತು ಲಿವರ್ ಸೇರಿದಂತೆ ಇತರ ಅಂಗಾಂಗಗಳನ್ನು ಬೆಂಗಳೂರಿನ ಪ್ರತಿಷ್ಠಿತ ಆಸ್ಟರ್ ಆಸ್ಪತ್ರೆಗೆ ರವಾನಿಸಿದ್ದಾರೆ. ಆಸ್ಪತ್ರೆಯ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ನಟರಾಜ್ ಮೃತದೇಹವನ್ನು ಹಸ್ತಾಂತರಿಸಲಾಯಿತು. ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟುವಂತಿತ್ತು.

ಕಿಕ್ಕೇರಿಯಲ್ಲಿ ಭಾರಿ ಮಳೆ: ಕುಸಿದ ಮನೆಗಳು, ನಿರಾಶ್ರಿತರಾದ ರೈತರು



ಜನಾರ್ಧನ ಬೀದಿಯ ಜಯಮ್ಮ ಪುಟ್ಟಸ್ವಾಮಿ ಅವರ ಮನೆ ಮಳೆಗೆ ಕುಸಿದಿರುವುದು.



ಜಯಮ್ಮ ಪುಟ್ಟಶೆಟ್ಟಿ ಅವರ ಮನೆ ಮಳೆಗೆ ಕುಸಿದಿರುವುದು.

ಕಿಕ್ಕೇರಿ: ವಾರದಿಂದ ಸುರಿದ ಭಾರಿ ಮಳೆಗೆ ಹೋಬಳಿಯಾದ್ಯಂತ ಸಾಕಷ್ಟು ಮನೆಗಳು ಕುಸಿದು, ರೈತಾಪಿ ಸಮುದಾಯ ಆತಂಕದಲ್ಲಿ ಬದುಕು ಸಾಗಿಸುವಂತಾಗಿದೆ.

ಪಟ್ಟಣ ಹಾಗೂ ಹೋಬಳಿಯಾದ್ಯಂತ ಮಂಗಳವಾರ ಸುರಿದ ಮಳೆಗೆ ಸಾಕಷ್ಟು ಮನೆಗಳು ಕುಸಿದು ರೈತರು ನಿರಾಶ್ರಿತರಾಗಿದ್ದಾರೆ. ಇಡೀ ರಾತ್ರಿ ಸುರಿದ ಮಳೆಯಿಂದ ಇಲ್ಲಿನ ಡಿಸಿಸಿ ಬ್ಯಾಂಕ್ ಹಿಂಭಾಗದ ಜಯಮ್ಮ ಪುಟ್ಟಶೆಟ್ಟಿ ಅವರ ಮಣ್ಣಿನ ಮನೆ ಕುಸಿದಿದೆ. ಜನಾರ್ಧನ ಬೀದಿಯ ಜಯಮ್ಮ ಪುಟ್ಟಸ್ವಾಮಿ ಅವರ ಮನೆ ಚಾವಣಿ ಸಮೇತ ಕುಸಿದಿದೆ. ಇದೇ ರೀತಿ ಲಕ್ಷ್ಮೀಪುರಕ್ಕೆ ಸಮೀಪವಿರುವ ಚಲುವಯ್ಯನ ನರಸಿಂಹ ಅವರ ಮನೆ ಸಂಪೂರ್ಣ ಬಿದ್ದು ಹೋಗಿದೆ. ಹೋಬಳಿಯ ಚಿನ್ನೇನಹಳ್ಳಿ ಗ್ರಾಮದ ಮಲ್ಲಪ್ಪನ ಮಾದಯ್ಯನ ಮನೆ ಕುಸಿದಿದೆ. ಬಿದರಹಳ್ಳಿಯ ನಾಗರಾಜು ಪತ್ನಿ ರತ್ನಮ್ಮ ಅವರ ಮನೆ ಧರೆಗೆ ಉರುಳಿದೆ. ಯಲಾದಹಳ್ಳಿ ಗ್ರಾಮದ ಮಲ್ಲಪ್ಪನ ಮಾದಯ್ಯ ಹಾಗೂ ಜವರಯ್ಯನ ಪತ್ನಿ ಕಾಳಮ್ಮ ಅವರ ಮಣ್ಣಿನ ಗೋಡೆ ಮನೆ ಹಾಳಾಗಿದೆ.

ಎಲ್ಲಾ ಮನೆಗಳು ತಡರಾತ್ರಿಯಲ್ಲಿ ಕುಸಿದಿದ್ದು, ಅದೃಷ್ಟವಶಾತ್ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ. ಮಳೆಯ ಆರ್ಭಟದಿಂದ ಮನೆಯಲ್ಲಿದ್ದ ದವಸಧಾನ್ಯ, ಬಟ್ಟೆ, ಅಡುಗೆ ಪಾತ್ರೆ, ಪ್ಲಾಸ್ಟಿಕ್ ಚೇರು, ಮಂಚ ಸಂಪೂರ್ಣ ಹಾಳಾಗಿದೆ. ಮನೆ ರಿಪೇರಿ ಮಾಡಲಾರದಷ್ಟು ಚಾವಣಿ, ನಾಡ ಹೆಂಚುಗಳು ನುಜ್ಜುಗುಜ್ಜಾಗಿದೆ.

ಜೋರು ಮಳೆಯಿಂದ ಮನೆಯ ಒಳಗೆಲ್ಲ ನೀರು ತುಂಬಿ ರಾತ್ರಿಯಿಡೀ ಜಾಗರಣೆ ಇರುವಂತಾಗಿದೆ. ಪ್ರಾಕೃತಿಕ ವಿಕೋಪದಡಿಯಲ್ಲಿ ನಿರಾಶ್ರಿತರಿಗೆ ಸೂಕ್ತ ನೆರವು ನೀಡಲು ನಾಗರಿಕರು ಒತ್ತಾಯಿಸಿದ್ದಾರೆ. ಘಟನಾ ಸ್ಥಳಕ್ಕೆ ಕಂದಾಯ ಇಲಾಖೆ ಅಧಿಕಾರಿಗಳು ಭೇಟಿ ನೀಡಿ, ಮೇಲಧಿಕಾರಿಗಳಿಗೆ ವರದಿ ಸಲ್ಲಿಸಿ ತ್ವರಿತವಾಗಿ ಪರಿಹಾರ ಕೊಡಿಸಲು ಕ್ರಮವಹಿಸುವುದಾಗಿ ತಿಳಿಸಿದರು.

ಸಾಲ ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನ

ಮಂಡ್ಯ,ಅ.24– ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಿಂದ ವಿವಿಧ ಯೋಜನೆಗಳಾದ ಸ್ವಯಂ ಉದ್ಯೋಗ ನೇರಸಾಲ ಯೋಜನೆ, ಉದ್ಯಮಶೀಲತಾ ಯೋಜನೆ, ಮೈಕ್ರೋ ಕ್ರೆಡಿಟ್ ಯೋಜನೆ, ಗಂಗಾ ಕಲ್ಯಾಣ ಯೋಜನೆಯಡಿ ಸಾಲಸೌಲಭ್ಯ ಕಲ್ಪಿಸಲು ಅರ್ಹ ಫಲಾಪೇಕ್ಷಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಮಂಡ್ಯ ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತದ ಜಿಲ್ಲಾ ವ್ಯವಸ್ಥಾಪಕರನ್ನು ಖುದ್ದಾಗಿ ಅಥವಾ ದೂ. ಸಂ: 08232–221157 ಹಾಗೂ ಎಸ್‌ಸಿ/ಎಸ್‌ಟಿ ಸಹಾಯವಾಣಿ 9482300400 ಮುಖಾಂತರ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಇಂದು ಆದಿಚುಂಚನಗಿರಿಗೆ ಉಪರಾಷ್ಟ್ರಪತಿ ಜಗದೀಪ್ ಧನಕರ್



ಮಂಡ್ಯ,ಅ.24–ಉಪರಾಷ್ಟ್ರಪತಿ ಜಗದೀಪ್ ಧನಕರ್ ಶುಕ್ರವಾರ ಮಂಡ್ಯ ಜಿಲ್ಲೆಯ ಶ್ರೀ ಕ್ಷೇತ್ರ ಆದಿಚುಂಚನಗಿರಿಯ ಬಿಜಿಎಸ್ ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡುತ್ತಿದ್ದು, ಅಲ್ಲಿನ ವೈದ್ಯಕೀಯ ವಿದ್ಯಾರ್ಥಿಗಳೊಂದಿಗೆ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

ಮಧ್ಯಾಹ್ನ 3ಗಂಟೆಗೆ ವಿವಿಯ ಬಿಜಿಎಸ್ ಆಡಿಟೋರಿಯಂನಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಉಪರಾಷ್ಟ್ರಪತಿ ಜಗದೀಪ್ ಧನಕರ್ ನೂರಾರು ವಿದ್ಯಾರ್ಥಿಗಳೊಂದಿಗೆ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದು, ಇವರೊಂದಿಗೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಸೇರಿದಂತೆ ಮಠದ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಹಾಗೂ ವಿವಿಯ ಕುಲಪತಿ ಮತ್ತು ಪ್ರಾಧ್ಯಾಪಕ ಸಿಬ್ಬಂದಿ ಉಪಸ್ಥಿತರಿರಲಿದ್ದಾರೆ. ಈ ಹಿನ್ನೆಲೆಯಲ್ಲಿ ಇಂದು ಜಿಲ್ಲಾಧಿಕಾರಿ ಡಾ.ಕುಮಾರ, ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಜಿ.ಪಂ. ಸಿಇಓ ಶೇಕ್ ತನ್ವೀರ್ ಆಸೀಫ್, ಉಪರಾಷ್ಟ್ರಪತಿಗಳು ಆಗಮಿಸುವ ಹೆಲಿಪ್ಯಾಡ್ ಹಾಗೂ ವೇದಿಕೆಯನ್ನು ಪರಿಶೀಲಿಸಿ, ಭದ್ರತೆ ಹಿನ್ನೆಲೆಯಲ್ಲಿ ಪೊಲೀಸರೊಂದಿಗೆ ಸಭೆ ನಡೆಸಿದರು.

ಬೆಳ್ಳೂರು ಪಪಂಗೆ ಅಧ್ಯಕ್ಷೆ, ಉಪಾಧ್ಯಕ್ಷರ ಆಯ್ಕೆ



ಬೆಳ್ಳೂರು ಪಟ್ಟಣ ಪಂಚಾಯ್ತಿ ಅಧ್ಯಕ್ಷೆಯಾಗಿ ಲಕ್ಷ್ಮಿ ಮಹೇಶ್ ಮತ್ತು ಉಪಾಧ್ಯಕ್ಷರಾಗಿ ಮಹಮದ್ ಯಾಸಿನ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಈ ವೇಳೆ ಸದಸ್ಯರು ಮತ್ತು ಗ್ರಾಮಸ್ಥರು ಅವರನ್ನು ಅಭಿನಂದಿಸಿದರು.

ಅರ್ಜಿ ಆಹ್ವಾನ

ಮಂಡ್ಯ,ಅ.24– ಶ್ರೀರಂಗಪಟ್ಟಣ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಆಗಸ್ಟ್ 2024 ನೇ ಸಾಲಿಗೆ ಪ್ರವೇಶಕ್ಕಾಗಿ ಬಾಕಿ ಉಳಿದಿರುವ ಸ್ಥಾನಗಳನ್ನು ಪಟ್ಟಿ ಮಾಡಲಾಗಿದ್ದು, ಖಾಲಿ ಉಳಿದಿರುವ 26 ಸ್ಥಾನಗಳಿಗೆ ಎಸ್‌ಎಸ್‌ಎಲ್‌ಸಿ ಉತ್ತೀರ್ಣರಾದ ಅಭ್ಯರ್ಥಿಗಳು ಪ್ರವೇಶಕ್ಕಾಗಿ ಆಫ್‌ಲೈನ್ ಮುಖಾಂತರ ಅರ್ಜಿಗಳನ್ನು ಅ.31 ರವರೆಗೆ ಸಲ್ಲಿಸಬಹುದಾಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ದೂ. ಸಂ: 08236–295224ನ್ನು ಸಂಪರ್ಕಿಸಬಹುದು ಎಂದು ಶ್ರೀರಂಗಪಟ್ಟಣ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಟೇಲ್ ಜಯಶಂಕರ್ ನಿಧನ



ಕೆ.ಆರ್.ಪೇಟೆ: ತಾಲೂಕಿನ ಕಸಬಾ ಹೋಬಳಿಯ ವಡ್ಡರಹಳ್ಳಿ ಗ್ರಾಮದ ಹಿರಿಯ ಮುಖಂಡ ಪಟೇಲ್ ಜಯಶಂಕರ್(84) ಗುರುವಾರ ನಿಧನರಾದರು.

ಮೃತರು ಪತ್ನಿ ರಾಜಮ್ಮಣ್ಣಿ, ಐವರು ಪುತ್ರರು, ಒಬ್ಬರು ಪುತ್ರಿ, ಅಳಿಯ, ಸೊಸೆಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ.

ಮೃತರ ಅಂತ್ಯಕ್ರಿಯೆಯು ವಡ್ಡರಹಳ್ಳಿ ಗ್ರಾಮದಲ್ಲಿ ಗುರುವಾರ ಮಧ್ಯಾಹ್ನ ನಡೆಯಿತು.

ಮೂರನೇ ಪುಟದಿಂದ

ನಿಖಿಲ್ ಕುಮಾರಸ್ವಾಮಿ ಎನ್‌ಡಿಎ ಅಭ್ಯರ್ಥಿ

ಯಡಿಯೂರಪ್ಪ ಮನೆಯಲ್ಲಿ ಇಂದು ಮಧ್ಯಾಹ್ನ ಎನ್‌ಡಿಎ ಮುಖಂಡರು ಸಭೆ ನಡೆಸಿದ ನಂತರ ನಿಖಿಲ್ ಕುಮಾರಸ್ವಾಮಿ ಮೈತ್ರಿ ಅಭ್ಯರ್ಥಿ ಎಂದು ಘೋಷಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಯಡಿಯೂರಪ್ಪ, ದೋಸ್ತಿ ಅಭ್ಯರ್ಥಿಗೆ ಪ್ರಧಾನಿ ನರೇಂದ್ರ ಮೋದಿ ಹಾಗೂ ಅವರ ಪಕ್ಷದ ಆಶೀರ್ವಾದವಿದೆ, ನಾವೆಲ್ಲಾ ಮುಖಂಡರು ಒಗ್ಗಟ್ಟಾಗಿ ಉಪಚುನಾವಣೆಯಲ್ಲಿ ಹೋರಾಟ ಮಾಡಿ ಎನ್‌ಡಿಎ ಅಭ್ಯರ್ಥಿಗಳನ್ನು ಗೆಲ್ಲಿಸುತ್ತೇವೆ ಎಂದರು.

ಸಿ.ಪಿ.ಯೋಗೇಶ್ವರ್ ಬಗ್ಗೆ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿ, ಅದರ ಕುರಿತು ಈಗ ಪ್ರಸ್ತಾಪ ಅಪ್ರಸ್ತುತ ಫಲಿತಾಂಶದ ನಂತರ ನಾನೇ ಮಾತನಾಡುತ್ತೇನೆ ಎಂದರು.

ಇದಕ್ಕೂ ಮುನ್ನ ನಡೆದ ಬೆಳವಣಿಗೆಯಲ್ಲಿ, ಚುನಾವಣಾ ಹೊಸ್ತಿಲಲ್ಲಿ ವಿಧಾನ ಪರಿಷತ್ ಸದಸ್ಯತ್ವಕ್ಕೆ ರಾಜೀನಾಮೆ ನೀಡಿ ಕಾಂಗ್ರೆಸ್ ಸೇರಿ ಅಭ್ಯರ್ಥಿಯಾಗಿರುವ ಸಿ.ಪಿ.ಯೋಗೇಶ್ವರ್ ಅವರನ್ನು ಸೋಲಿಸಲು ಜೆಡಿಎಸ್‌ನ ಸಾಮಾನ್ಯ ಕಾರ್ಯಕರ್ತರಿಂದ ಸಾಧ್ಯವಿಲ್ಲ, ನಿಖಿಲ್ ಅವರನ್ನೇ ಕಣಕ್ಕಿಳಿಸುವಂತೆ ಯಡಿಯೂರಪ್ಪ ಹಾಗೂ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಪಟ್ಟುಹಿಡಿದರು.

ಇದೇ ವೇಳೆ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಹಾಗೂ ಕೇಂದ್ರ ಸಚಿವ ಜೆ.ಪಿ.ನಡ್ಡ, ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ದೇವೇಗೌಡ ಹಾಗೂ ಕುಮಾರಸ್ವಾಮಿ ಅವರನ್ನು ಸಂಪರ್ಕಿಸಿ, ತಮ್ಮ ಕುಟುಂಬದವರನ್ನೇ ಕಣಕ್ಕಿಳಿಸಿ ಎಂದು ಸಲಹೆ ಮಾಡಿದರು.

ಬಿಜೆಪಿ ನಾಯಕರ ಒತ್ತಡಕ್ಕೆ ಮಣಿದ ಕುಮಾರಸ್ವಾಮಿ ನಿನ್ನೆ ತಡರಾತ್ರಿವರೆಗೂ ಪಕ್ಷದ ಮುಖಂಡರೊಂದಿಗೆ ಸಭೆ ನಡೆಸಿ ಇಂದು ಬೆಳಗ್ಗೆ ಪಕ್ಷದ ಕಚೇರಿಯಲ್ಲಿ ಚನ್ನಪಟ್ಟಣ ಕ್ಷೇತ್ರದ ಮುಖಂಡರು ಹಾಗೂ ಕಾರ್ಯಕರ್ತರೊಂದಿಗೆ ಸುದೀರ್ಘ ಸಮಾಲೋಚನೆ ಮಾಡಿದರು.

ತದನಂತರ ಯಡಿಯೂರಪ್ಪ ಅವರೇ ಎನ್‌ಡಿಎ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ, ಅವರು ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದಿಂದ ಕಣಕ್ಕಿಳಿಯಲಿದ್ದಾರೆಂದು ಘೋಷಿಸಿದರು. ಕುಮಾರಸ್ವಾಮಿಗಿಂತ ಯಡಿಯೂರಪ್ಪ ಕುಟುಂಬ ಚನ್ನಪಟ್ಟಣ ಕ್ಷೇತ್ರವನ್ನು ಪ್ರತಿಷ್ಠೆಯಾಗಿ ತೆಗೆದುಕೊಂಡಿದೆ. ಯೋಗೇಶ್ವರ್ ಪಕ್ಷ ಬಿಡುವುದಕ್ಕೂ ಮುನ್ನ ಬಿಜೆಪಿ ನಾಯಕರಲ್ಲೇ ಗೊಂದಲ ಉಂಟು ಮಾಡಿ ಕಾಂಗ್ರೆಸ್‌ಗೆ ಅನುಕೂಲವಾಗುವ ಪರಿಸ್ಥಿತಿ ನಿರ್ಮಿಸಿದ್ದರು. ತಾವು ಅಧಿಕಾರದಿಂದ ಕೆಳಗಿಳಿಯಲು ತೆರೆಮರೆಯಲ್ಲಿ ಯೋಗೇಶ್ವರ್ ಮಾಡಿದ್ದ ಯತ್ನವನ್ನು ಯಡಿಯೂರಪ್ಪ ಇನ್ನೂ ಮರೆತಿಲ್ಲ.

ಈ ಪಕ್ಷಾಂತರಿ ಕಲಾವಿದನಿಗೆ ಚುನಾವಣೆಯಲ್ಲಿ ಬುದ್ಧಿ ಕಲಿಸಲೇಬೇಕು, ನಾನೇ ಇದರ ನಾಯಕತ್ವ ವಹಿಸಿಕೊಳ್ಳುತ್ತೇನೆ. ನೀವು ಮುನ್ನಡೆಯಿರಿ ಎಂದು ಕುಮಾರಸ್ವಾಮಿ ಹಾಗೂ ನಿಖಿಲ್ ಅವರಿಗೆ ಯಡಿಯೂರಪ್ಪ ಸ್ಪಷ್ಟ ಮಾತುಗಳಲ್ಲಿ ತಿಳಿಸಿದ್ದಾರೆ.

ಮೊಮ್ಮಗನ ಗೆಲುವಿಗೆ ದೇವೇಗೌಡರ ಪಣ ಕ್ಷೇತ್ರದಲ್ಲಿ ಬಿಡಾರ ಹೂಡುವ ಶಪಥ



ಬೆಂಗಳೂರು, ಅ.24(ಕೆಎಂಶಿ)– ಮೊಮ್ಮಗ ನಿಖಿಲ್ ಕುಮಾರಸ್ವಾಮಿ ಗೆಲುವಿಗಾಗಿ ಚುನಾವಣೆ ಮುಗಿಯುವವರೆಗೂ ಚನ್ನಪಟ್ಟಣದಲ್ಲಿ ವಾಸ್ತವ್ಯ ಹೂಡುವುದಾಗಿ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಇಂದಿಲ್ಲಿ ಘೋಷಿಸಿದ್ದಾರೆ.

ಉಪಚುನಾವಣಾ ಅಭ್ಯರ್ಥಿ ಆಯ್ಕೆ ಕುರಿತಂತೆ ಪಕ್ಷದ ಕಚೇರಿಯಲ್ಲಿ ಚನ್ನಪಟ್ಟಣ ಕ್ಷೇತ್ರದ ಕಾರ್ಯಕರ್ತರು ಹಾಗೂ ಮುಖಂಡರೊಂದಿಗೆ ಚರ್ಚೆ ನಡೆಸಿ, ನಿಖಿಲ್ ಅಭ್ಯರ್ಥಿ ಎಂದು ತೀರ್ಮಾನ ಕೈಗೊಂಡ ನಂತರ ಪಕ್ಷದ ಅಭ್ಯರ್ಥಿ ಗೆಲುವಿಗಾಗಿ ಕ್ಷೇತ್ರದಲ್ಲಿಯೇ ಬಿಡಾರ ಹೂಡುವುದಾಗಿ ತಿಳಿಸಿದರು.

ಪ್ರಚಾರಕ್ಕಷ್ಟೇ ಒಂದೆರಡು ದಿನ ಹೋಗುವುದಲ್ಲ, ಉಪಚುನಾವಣೆಯನ್ನು ಗಂಭೀರವಾಗಿ ತೆಗೆದುಕೊಂಡಿದ್ದೇನೆ. ನಮ್ಮ ಅಭ್ಯರ್ಥಿ ಗೆಲುವಿಗಾಗಿ ಪ್ರತಿ ಮತದಾರರನ್ನು ಮುಟ್ಟುತ್ತೇನೆ.

ಕಾರ್ಯಕರ್ತರು ಮತ್ತು ಮತದಾರರು ಸದಾಕಾಲ ನಮ್ಮ ಪಕ್ಷದ ಕೈಹಿಡಿದಿದ್ದಾರೆ, ಈ ಬಾರಿಯೂ ಅವರು ನಮ್ಮನ್ನು ಕೈಬಿಡುವುದಿಲ್ಲ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಬಿ.ಎನ್.ಬಚ್ಚೇಗೌಡರ ವಿಚಾರಣೆ

ನಂಬರ್ 464 ರ 3.16 ಎಕರೆ ಭೂಮಿಗೆ ಸಂಬಂಧಿಸಿದಂತೆ ಡಿ ನೋಟಿಫೈ ಮಾಡಿದ್ದ 26 ವರ್ಷಗಳ ಹಿಂದಿನ ಪ್ರಕರಣಕ್ಕೆ ಲೋಕಾಯುಕ್ತರು ಮರು ಜೀವ ನೀಡಿದ್ದಾರೆ. ಈ ಮೂಲಕ ಸಿದ್ದರಾಮಯ್ಯ ವಿರುದ್ಧದ ಮುಡಾ ಹಗರಣ ದಿನಕ್ಕೊಂದು ತಿರುವು ಪಡೆಯುತ್ತಿದೆ. ಮುಡಾ ಹಗರಣ ಈಗ ಮಾಜಿ ನಗರಾಭಿವೃದ್ಧಿ ಸಚಿವ ಬಿ.ಎನ್. ಬಚ್ಚೇಗೌಡ ಅವರ ಕೊರಳಿಗೂ ಸುತ್ತಿಕೊಂಡಿದೆ. ಪಾರ್ವತಿ ದಾನವಾಗಿ ಪಡೆಯುವುದಕ್ಕಿಂತ ಮುಂಚೆ ಆ ಭೂಮಿಯನ್ನು ಡಿ ನೋಟಿಫೈ ಮಾಡಿದ್ದ ಅಂದಿನ ನಗರಾಭಿವೃದ್ಧಿ ಸಚಿವ ಬಿ.ಎನ್. ಬಚ್ಚೇಗೌಡ ಅವರನ್ನು ಲೋಕಾಯುಕ್ತರು ನಿನ್ನೆ ತನಿಖೆಗೊಳಪಡಿಸಿದ್ದಾರೆ.

ಮೈಸೂರಿನ ಕೆಸರೆ ಸರ್ವೆ ನಂಬರ್ 464 ರ 3.16 ಎಕರೆ ಭೂಮಿಯನ್ನು ಮುಡಾ ಭೂಸ್ವಾಧೀನ ಮಾಡಿಕೊಳ್ಳಬಾರದು, ಇದನ್ನು ಡಿ ನೋಟಿಫೈ (ಭೂಸ್ವಾಧೀನ ಪ್ರಕ್ರಿಯೆಯಿಂದ ಕೈ ಬಿಡಬೇಕು) ಮಾಡಬೇಕೆಂದು ದೇವರಾಜು ಅಂದಿನ ನಗರಾಭಿವೃದ್ಧಿ ಸಚಿವ ಬಿ.ಎನ್.ಬಚ್ಚೇಗೌಡರಿಗೆ ಲಿಖಿತ ಮನವಿ ಸಲ್ಲಿಸಿದ್ದರು. ನನ್ನ ಜೀವನೋಪಾಯಕ್ಕೆ ಬೇರೆ ಯಾವುದೇ ಭೂಮಿ ಇಲ್ಲದ ಕಾರಣ ನನ್ನ ಭೂಮಿಯನ್ನು ಮುಡಾ ಸ್ವಾಧೀನ ಮಾಡಿಕೊಳ್ಳದೆ ಡಿ ನೋಟಿಫೈ ಮಾಡಬೇಕು ಎಂದು ಕೋರಿದ್ದರು.

ಇದಕ್ಕೆ ಸಂಬಂಧಿಸಿದಂತೆ ಬಚ್ಚೇಗೌಡರು ಪರಿಶೀಲನೆ ಮಾಡಿ ವರದಿ ನೀಡುವಂತೆ ಅಧಿಕಾರಿಗಳಿಗೆ ಟಿಪ್ಪಣಿ ನೀಡಿದ್ದರು. ತರುವಾಯ ಸರ್ಕಾರದ ಮಟ್ಟದಲ್ಲಿ ಹಲವು ಪ್ರಕ್ರಿಯೆಗಳು ನಡೆದು 1998 ರಲ್ಲಿ ಈ ಭೂಮಿಯನ್ನು ಸರ್ಕಾರ ಡಿ ನೋಟಿಫೈ ಮಾಡಿತ್ತು ನಂತರ 2004 ರಲ್ಲಿ ದೇವರಾಜು ಅವರಿಂದ ಸಿದ್ದರಾಮಯ್ಯ ಬಾವಮೈದ ಮಲ್ಲಿಕಾರ್ಜುನ ಸ್ವಾಮಿ 3.16 ಎಕರೆಯನ್ನು ಖರೀದಿ ಮಾಡಿದ್ದರು. ಸಿದ್ದರಾಮಯ್ಯ ವಿರುದ್ಧದ ಮುಡಾ ಹಗರಣದಲ್ಲಿ ಮಲ್ಲಿಕಾರ್ಜುನ ಸ್ವಾಮಿ ಎ3, ದೇವರಾಜು ಎ4 ಆರೋಪಿಯಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಅಂದು ದೇವರಾಜುಗೆ ಸೇರಿದ ಈ ಭೂಮಿಯನ್ನು ಡಿ ನೋಟಿಫೈಗೆ ಸಹಕರಿಸಿದ್ದ ಹಿಂದಿನ ನಗರಾಭಿವೃದ್ಧಿ ಸಚಿವ ಬಚ್ಚೇಗೌಡರನ್ನು ಲೋಕಾಯುಕ್ತರು ವಿಚಾರಣೆ ಮಾಡಿದ್ದಾರೆ. ಬಚ್ಚೇಗೌಡರಿಗೆ ಅನಾರೋಗ್ಯದ ಕಾರಣ ಲೋಕಾಯುಕ್ತ ಎಸ್ಪಿ ಟಿ.ಜೆ.ಉದೇಶ್ ನೇತೃತ್ವದ ತಂಡ ಅವರ ಬೆಂಗಳೂರಿನ ಮನೆಗೆ ಹೋಗಿ ವಿಚಾರಣೆ ಮಾಡಿದ್ದು, ಸುಮಾರು ಎರಡು ಗಂಟೆಗಳ ಕಾಲ ತನಿಖೆಗೊಳಪಡಿಸಿದೆ.

ಬಚ್ಚೇಗೌಡರ ಪುತ್ರ, ಹೊಸಕೋಟೆ ಶಾಸಕ ಶರತ್ ಬಚ್ಚೇಗೌಡ ಈ ವಿಚಾರವನ್ನು 'ಮೈಸೂರು ಮಿತ್ರ'ನಿಗೆ ಖಚಿತಪಡಿಸಿದ್ದಾರೆ. 1996 ರಲ್ಲಿ ದೇವರಾಜು ಡಿ ನೋಟಿಫೈಗೆ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಇವರಂತೆ ಕೆಸರೆಯ ನೂರಾರು ರೈತರು ಕೂಡ ಮುಡಾ ಭೂಸ್ವಾಧೀನ ಪ್ರಕ್ರಿಯೆಯಿಂದ ತಮ್ಮ ಭೂಮಿ ಕೈ ಬಿಡುವಂತೆ ಕೋರಿದ್ದರು. ಶಿಕ್ಷಣ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದ ದೇವರಾಜು ತಾನು ಸರ್ಕಾರಿ ನೌಕರ ಎಂಬುದನ್ನು ಮರೆ ಮಾಚಿ, ತನ್ನ ಜೀವನೋಪಾಯಕ್ಕೆ ಬೇರೆ ಭೂಮಿ ಇಲ್ಲದ ಕಾರಣ ನನ್ನ ಭೂಮಿಯನ್ನು ಮುಡಾ ಸ್ವಾಧೀನ ಪ್ರಕ್ರಿಯೆಯಿಂದ ಕೈ ಬಿಡುವಂತೆ ಕೋರಿದರು. ಇಂತಹ ಸಂದರ್ಭದಲ್ಲಿ ಕೆಸರೆಯ ನೂರಾರು ರೈತರ ಭೂಮಿಯನ್ನು ಸ್ವಾಧೀನ ಮಾಡಿಕೊಂಡ ಸರ್ಕಾರ ದೇವರಾಜು ಭೂಮಿಯನ್ನು ಮಾತ್ರ ಡಿ ನೋಟಿಫೈ ಮಾಡಿದ್ದರ ಹಿನ್ನೆಲೆ ಏನು ಎಂದು ದೂರುದಾರ ಸ್ನೇಹಮಯಿ ಕೃಷ್ಣ ಪ್ರಶ್ನಿಸಿದ್ದರು. ಈ ವಿಚಾರವನ್ನು ಮುಂದಿಟ್ಟುಕೊಂಡು ಲೋಕಾಯುಕ್ತರ ತಂಡ, ಅಂದು ಬಹಳಷ್ಟು ರೈತರು ತಮ್ಮ ಭೂಮಿ ಡಿ ನೋಟಿಫೈ ಮಾಡುವಂತೆ ಕೋರಿದ್ದರೂ ದೇವರಾಜು ಅವರ ಭೂಮಿಯನ್ನು ಮಾತ್ರ ಏಕೆ ಡಿನೋಟಿಫೈ ಮಾಡಿದ್ದೀರಾ, ಇದಕ್ಕೆ ನೈಜ ಕಾರಣವೇನು ಎಂದು ಪ್ರಶ್ನೆ ಮಾಡಿದ್ದಾರೆ. ಆದರೆ ಇದಕ್ಕೆ ಬಚ್ಚೇಗೌಡರು ಏನು ಉತ್ತರ ನೀಡಿದ್ದಾರೆ ಎಂಬುದು ಖಚಿತವಾಗಿ ತಿಳಿದು ಬಂದಿಲ್ಲ.

ನಟೇಶ್, ದಿನೇಶ್‌ಗೆ ಶೀಘ್ರವೇ ಸಮನ್ಸ್ ಸಾಧ್ಯತೆ

ಮುಡಾ ಹಗರಣದಲ್ಲಿ ಪ್ರಮುಖವಾಗಿ ಹಿಂದಿನ ಆಯುಕ್ತರಾದ ಡಾ. ನಟೇಶ್ ಹಾಗೂ ದಿನೇಶ್ ಕುಮಾರ್ ಅವರಿಗೆ ಲೋಕಾಯುಕ್ತರು ಶೀಘ್ರದಲ್ಲೇ ಸಮನ್ಸ್ ನೀಡುವ ಸಾಧ್ಯತೆ ಇದೆ.

ಸಿದ್ದರಾಮಯ್ಯ ಪತ್ನಿ ಪಾರ್ವತಿ ಅವರಿಗೆ ಶೇ.50:50 ಅನುಪಾತದ ನಿವೇಶನ ಮಂಜೂರಾತಿಯ ಹಲವು ಪ್ರಕ್ರಿಯೆಯಲ್ಲಿ ಇವರೇ ಸಹಿ ಹಾಕಿದ್ದಾರೆ ಎನ್ನಲಾಗಿದೆ. ಈ ಹಿನ್ನೆಲೆಯಲ್ಲಿ ಇವರನ್ನು ವಿಚಾರಣೆ ಮಾಡುವಂತೆ ದೂರುದಾರ ಸ್ನೇಹಮಯಿ ಕೃಷ್ಣ ಮನವಿ ಮಾಡಿದ್ದರು. ಈ ಕಾರಣದಿಂದ ಡಾ.ನಟೇಶ್ ಹಾಗೂ ದಿನೇಶ್ ಕುಮಾರ್ ಅವರಿಗೆ ಸಮನ್ಸ್ ನೀಡಿ ವಿಚಾರಣೆ ಮಾಡುವ ಸಾಧ್ಯತೆ ಇದೆ ಎಂದು ತಿಳಿದು ಬಂದಿದೆ.

ಯೋಗೇಶ್ವರ್ ನಾಮಪತ್ರ ಸಲ್ಲಿಕೆ

ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ.ಯೋಗೇಶ್ವರ್ ಜಯಗಳಿಸಬೇಕು. ಕೆರೆಗಳಿಗೆ ಜೀವದಾನ ಮಾಡಿದ ಯೋಗೇಶ್ವರ್ ಅಭಿವೃದ್ಧಿ ಪರವಾಗಿ ಇರುವುದರಿಂದಲೇ ಐದು ಬಾರಿ ಶಾಸಕರಾಗಿದ್ದಾರೆ. ಜೊತೆಗೆ ಕಾಂಗ್ರೆಸ್ಸಿಗೆ ಮರಳಿದ್ದಾರೆ. ಇವರನ್ನು ನಾವೆಲ್ಲಾ ಸ್ವಾಗತಿಸಿದ್ದೇವೆ. ಯೋಗೇಶ್ವರ್ ಗೆಲ್ಲುವ ಮೂಲಕ ಚನ್ನಪಟ್ಟಣದಲ್ಲಿ ನಿಂತು ಹೋಗಿರುವ ಅಭಿವೃದ್ಧಿಗೆ ಮರು ಚಾಲನೆ ನೀಡಬೇಕಿದೆ ಎಂದು ಕರೆ ನೀಡಿದರು.

ಕುಮಾರಸ್ವಾಮಿಗೆ ಚನ್ನಪಟ್ಟಣ ಮರೆತು ಹೋಗಿದ್ದು, ಅವರ ಕಾರ್ಯಕ್ಷೇತ್ರ ಮಂಡ್ಯಕ್ಕೆ ಸೀಮಿತವಾಗಿದೆ. ಬಿಜೆಪಿ ಒಕ್ಕೂಟದಿಂದ ಕುಮಾರಸ್ವಾಮಿಯೇ ನಿಲ್ಲಲಿ, ನಿಖಿಲ್ ಕುಮಾರಸ್ವಾಮಿಯೇ ನಿಲ್ಲಲಿ, ಇಲ್ಲವೇ ಅನಿತಾ ಕುಮಾರಸ್ವಾಮಿಯವರಾದರೂ ನಿಲ್ಲಲಿ ಇಲ್ಲಿ ಕಾಂಗ್ರೆಸ್ ಪಕ್ಷದ ಯೋಗೇಶ್ವರ್ ಅವರು ಭರ್ಜರಿ ಜಯಗಳಿಸೋದು ಖಚಿತ ಎಂದು ಭವಿಷ್ಯ ನುಡಿದರು.

ನಮ್ಮದು ಜನಕಲ್ಯಾಣದ ಸರ್ಕಾರವಾಗಿದೆ. ಈ ಸರ್ಕಾರದಲ್ಲಿ ಯೋಗೇಶ್ವರ್ ಅವರು ಇರಬೇಕು. ಹೆಚ್.ಡಿ.ಕುಮಾರಸ್ವಾಮಿಯವರು ಶಾಸಕರಾಗಿ, ಮುಖ್ಯಮಂತ್ರಿ ಆಗಿದ್ದಾಗಲೂ ಮಾಡದ ಚನ್ನಪಟ್ಟಣದ ಅಭಿವೃದ್ಧಿ ಕೆಲಸಗಳು ಮುಂದಿನ ತಿಂಗಳಿನಿಂದ ಶಾಸಕರಾಗಿ ಯೋಗೇಶ್ವರ್ ಅವರು ಮುಂದುವರೆಸುತ್ತಾರೆ. ಇವತ್ತು ನಾಮಪತ್ರ ಸಲ್ಲಿಕೆ ಬಳಿಕ ನಾನು ಮತ್ತೆ ಚನ್ನಪಟ್ಟಣಕ್ಕೆ ಪ್ರಚಾರಕ್ಕೆ ಬರುತ್ತೇನೆ ಎಂದರು. ಚನ್ನಪಟ್ಟಣ ಜನರು ಸಿ.ಪಿ.ಯೋಗೇಶ್ವರ್ ಅವರನ್ನು ಆಶೀರ್ವದಿಸಿ ಬೆಂಬಲಿಸುವ ನಂಬಿಕೆಯಿದೆ. ಕಾಂಗ್ರೆಸ್ ಅಭ್ಯರ್ಥಿ ದೊಡ್ಡ ಅಂತರದಲ್ಲಿ ಗೆಲ್ಲುವ ವಿಶ್ವಾಸವಿದ್ದು, ಚನ್ನಪಟ್ಟಣದ ಉಪಚುನಾವಣೆಯಲ್ಲಿ ಜೆಡಿಎಸ್‌ನವರು ಯಾರನ್ನು ಅಭ್ಯರ್ಥಿಯನ್ನಾಗಿ ಮಾಡುತ್ತಾರೆಂಬುದು ಮುಖ್ಯವಲ್ಲ. ಸಿ.ಪಿ.ಯೋಗೇಶ್ವರ್ ಅವರು ಕಾಂಗ್ರೆಸ್ ಪಕ್ಷದಲ್ಲಿದ್ದು, ಎರಡು ಬಾರಿ ಶಾಸಕರಾಗಿದ್ದರು. ಬಿಜೆಪಿ ಹಾಗೂ ಎನ್‌ಡಿಎಯಿಂದ ಅವರಿಗೆ ಅನ್ಯಾಯವಾದ ಕಾರಣ ಅವರು ಮತ್ತೆ ಕಾಂಗ್ರೆಸ್ ಪಕ್ಷಕ್ಕೆ ಮರಳಿದ್ದಾರೆ. ಕಾಂಗ್ರೆಸ್ ಪಕ್ಷದ ಸಿದ್ಧಾಂತವನ್ನೊಪ್ಪಿ ಮರಳಿ ಬಂದಿರುವ ಯೋಗೇಶ್ವರ್‌ರನ್ನು ಇಡೀ ಕಾಂಗ್ರೆಸ್ ಪಕ್ಷ ಸ್ವಾಗತಿಸಿದ್ದು, ಇಲ್ಲಿ ಅವರು ಗೆದ್ದೇ ಗೆಲ್ಲುತ್ತಾರೆಂಬುದೇ ನಮ್ಮಗೆ ಮುಖ್ಯ ಮತ್ತು ವಿಶ್ವಾಸ ಎಂದು ತಿಳಿಸಿದರು.

ಇಬ್ಬರು ರೈತರ ಸಾವು

ನಡೆದ ಸ್ಥಳದ ಸಮೀಪ ಆಲೆಮನೆಯೊಂದರಲ್ಲಿ ವಾಸ ಇದ್ದವರು ಗುರುವಾರ ಬೆಳಗ್ಗೆ ಬಂದು ನೋಡಿದಾಗ ಘಟನೆ ಬೆಳಕಿಗೆ ಬಂದಿದೆ.

ರೈತರ ಪ್ರತಿಭಟನೆ: ಈ ಇಬ್ಬರು ರೈತರ ಸಾವಿಗೆ ಸೆಸ್ಕ್ ಅಧಿಕಾರಿಗಳು ಹಾಗೂ ಸಿಬ್ಬಂದಿ ನಿರ್ಲಕ್ಷ್ಯವೇ ಕಾರಣ ಎಂದು ರೈತ ಸಂಘ, ಹಸಿರು ಸೇನೆ, ಕಬ್ಬು ಬೆಳೆಗಾರರ ಸಂಘದ ಕಾರ್ಯಕರ್ತರು ಹಾಗೂ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು.

ಮೃತಪಟ್ಟ ರೈತರ ಕುಟುಂಬಗಳಿಗೆ ತಲಾ 50 ಲಕ್ಷ ರೂ. ಪರಿಹಾರ ನೀಡಬೇಕು. ಕುಟುಂಬದ ಸದಸ್ಯರಿಗೆ ಅನುಕಂಪ ಆಧಾರದಡಿ ಸರ್ಕಾರಿ ನೌಕರಿ ನೀಡಬೇಕು ಎಂದು ಒತ್ತಾಯಿಸಿದ ಪ್ರತಿಭಟನಾಕಾರರು, ಬೇಡಿಕೆ ಈಡೇರಿಸುವವರೆಗೂ ಶವಗಳನ್ನು ತೆಗೆಯುವುದಿಲ್ಲ ಎಂದು ಪಟ್ಟುಹಿಡಿದರು.

ಈ ವೇಳೆ ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಟಿ.ಕವಿತಾ, ಉಪವಿಭಾಗಾಧಿಕಾರಿ ಮಹೇಶ್, ಸೆಸ್ಕ್ ಸೂಪರಿಡೆಂಟ್ ಪ್ರತೀಪ್ ಕುಮಾರ್ ಅವರು ಪ್ರತಿಭಟನಾಕಾರರ ಮನವೊಲಿಸಲು ಎಷ್ಟೇ ಪ್ರಯತ್ನಿಸಿದರು ಗ್ರಾಮಸ್ಥರು ಹಾಗೂ ರೈತ ಮುಖಂಡರು ಒಪ್ಪಲಿಲ್ಲ. ಸ್ಥಳಕ್ಕೆ ಜಿಲ್ಲಾಧಿಕಾರಿ ಬರಲೇಬೇಕು ಎಂದು ಪಟ್ಟುಹಿಡಿದರು. ನಂತರ ಸ್ಥಳಕ್ಕೆ ಜಿಲ್ಲಾಧಿಕಾರಿ ಶಿಲ್ಪನಾಗ್ ಭೇಟಿ ನೀಡಿ, ಮೃತ ರೈತರ ಕುಟುಂಬ ಗಳಿಗೆ ಸೂಕ್ತ ಪರಿಹಾರ ಹಾಗೂ ಕುಟುಂಬದ ಒಬ್ಬರಿಗೆ ಸರ್ಕಾರಿ ಉದ್ಯೋಗ ನೀಡುವ ಬಗ್ಗೆ ಸರ್ಕಾರದೊಂದಿಗೆ ಚರ್ಚಿಸುವುದಾಗಿ ಭರವಸೆ ನೀಡಿದರು. ಬಳಿಕ ಪ್ರತಿಭಟನೆ ಕೈ ಬಿಟ್ಟು, ಮೃತದೇಹಗಳ ಮರಣೋತ್ತರ ಪರೀಕ್ಷೆಗೆ ಸಿಮ್ಸ್‌ಗೆ ರವಾನಿಸಲಾಯಿತು.

5 ಲಕ್ಷ ಚೆಕ್ ವಿತರಣೆ: ಸೆಸ್ಕ್‌ನಿಂದ ಮೃತ ರೈತರ ಕುಟುಂಬಗಳಿಗೆ ತಲಾ 5 ಲಕ್ಷ ರೂ. ಪರಿಹಾರವನ್ನು ಸ್ಥಳದಲ್ಲೇ ನೀಡಲಾಯಿತು.

ಸಿಬ್ಬಂದಿಗೆ ಇಡಿ ನೋಟಿಸ್

ಇಡಿ, ವಿಚಾರಣೆಗೆ ಹಾಜರಾಗುವಂತೆ ಸೂಚಿಸಿದೆ. ಮುಡಾ ಕಚೇರಿ ಮೇಲೆ ದಾಳಿ ನಡೆಸಿ 41 ಗಂಟೆ ಕಾಲ ಶೋಧ ನಡೆಸಿದ ವೇಳೆ ಕೆಸರೆ ಭೂಮಿ ಸಂಬಂಧ ಆರ್. ಶ್ರೀನಿವಾಸ ಮತ್ತು ರಾಜಶೇಖರ್‌ರನ್ನು ವಿಚಾರಣೆಗೊಳಪಡಿಸಿದ್ದ ಇಡಿ ಅಧಿಕಾರಿಗಳು ಅವರ ಹೇಳಿಕೆ ಪಡೆದಿದ್ದರಾದರೂ, ಅವರ ದೂರವಾಣಿ ಸಂಖ್ಯೆ, ಆಧಾರ್ ಕಾರ್ಡ್ ಪಡೆದು ಅಗತ್ಯ ಬಿದ್ದರೆ ಹೆಚ್ಚುವರಿ ವಿಚಾರಣೆಗೆ ಹಾಜರಾಗಬೇಕೆಂದು ತಾಕೀತು ಮಾಡಿದ್ದರು.

ಅಲ್ಲದೇ, ಭೂ ಸ್ವಾಧೀನ, ಪರಿಹಾರ ಮಂಜೂರು ಸಂಬಂಧ ಮಾಹಿತಿಗಾಗಿ ಶೃತಿ, ನಿವೇಶನಗಳ ಕ್ರಯ ಪತ್ರ, ಖಾತೆ ಸಂಬಂಧ ರಾಜಶೇಖರ್, ಕಡತಗಳ ದಾಖಲಾತಿ ಸಂಬಂಧ ರವಿ, ಕಮಿಷ್ನರ್ ಆಪ್ತ ಸಹಾಯಕ ಪ್ರಶಾಂತ್ ಮತ್ತು ಕಮಿಷ್ನರ್ ಹೇಳಿದಂತೆ ನೋಟ್ ಸಿದ್ಧಪಡಿಸುತ್ತಿದ್ದ ಚಂದ್ರುಗೂ ವಿಚಾರಣೆ ಸುಳಿವು ನೀಡಿದ್ದರು.

ಸುಪ್ರೀಂ ಕೋರ್ಟ್ ಮುಂದಿನ ಮುಖ್ಯ ನ್ಯಾಯಮೂರ್ತಿಯಾಗಿ ಸಂಜೀವ್ ಖನ್ನಾ ನೇಮಕ



ನವದೆಹಲಿ: ಸುಪ್ರೀಂ ಕೋರ್ಟ್‌ನ ಮುಂದಿನ ಮುಖ್ಯ ನ್ಯಾಯಮೂರ್ತಿಯಾಗಿ ಸಂಜೀವ್ ಖನ್ನಾ ಅವರನ್ನು ನೇಮಕ ಮಾಡಲಾಗಿದೆ. ಹಾಲಿ ಸಿಜೆಐ ಡಿ.ವೈ.ಚಂದ್ರಚೂಡ್ ಅವರು ನಿವೃತ್ತಿಯಾಗುತ್ತಿರುವ ಹಿನ್ನೆಲೆಯಲ್ಲಿ ನ್ಯಾಯಮೂರ್ತಿ ಸಂಜೀವ್ ಖನ್ನಾ ಅವರನ್ನು ನೂತನ ಸಿಜೆಐ ಆಗಿ ನೇಮಕ ಮಾಡಿ ಕೇಂದ್ರ ಸರ್ಕಾರ ಇಂದು (ಅ.24) ಅಧಿಸೂಚನೆ ಹೊರಡಿಸಿದೆ. ಇನ್ನು ಸಂಜೀವ್ ಖನ್ನಾ ಅವರು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ ನವೆಂಬರ್ 11ರಂದು ಪ್ರಮಾಣ ವಚನ ಸ್ವೀಕರಿಸಲಿದ್ದಾರೆ.

ಹಾಲಿ ಸಿಜೆಐ ಚಂದ್ರಚೂಡ್ ಅವರು ನವೆಂಬರ್ 10ರಂದು ನಿವೃತ್ತರಾಗಲಿದ್ದಾರೆ. ಹೀಗಾಗಿ ಡಿ ವೈ ಚಂದ್ರಚೂಡ್ ಅವರು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಹುದ್ದೆಗೆ ಸಂಜೀವ್ ಖನ್ನಾ ಅವರ ಹೆಸರನ್ನು ಶಿಫಾರಸು ಮಾಡಿದ್ದರು.

ನ್ಯಾಯಮೂರ್ತಿ ಸಂಜೀವ್ ಖನ್ನಾ ಅವರು 2025, ಮೇ 13ರಂದು ನಿವೃತ್ತರಾಗಲಿದ್ದು, ಆರು ತಿಂಗಳಿಗಿಂತಲೂ ಕಡಿಮೆ ಅವಧಿಗೆ ಸಿಜೆಐ ಹುದ್ದೆ ಅಲಂಕರಿಸಲಿದ್ದಾರೆ. ಇನ್ನು ವಕೀಲರಾಗಿ 1983ರಲ್ಲಿ ತೊಡಗಿಕೊಂಡ ಅವರು ತೆರಿಗೆ, ಮಧ್ಯಸ್ಥಿಕೆ, ವಾಣಿಜ್ಯ ಮತ್ತು ಪರಿಸರ ಇತ್ಯಾದಿ ಕ್ಷೇತ್ರಗಳಲ್ಲಿ ಪ್ರಾಕ್ಟೀಸ್ ಮಾಡಿದ್ದಾರೆ.

ಬಿಜೆಪಿಯ 8 ಶಾಸಕರು ಕಾಂಗ್ರೆಸ್‌ಗೆ ಹೋಗ್ತಾರೆ



ಬೆಂಗಳೂರು, ಅ.24– ಚನ್ನಪಟ್ಟಣ ಉಪಚುನಾವಣೆಗೆ ಮೈತ್ರಿ ಅಭ್ಯರ್ಥಿಯಾಗಿ ನಿಖಿಲ್ ಕುಮಾರಸ್ವಾಮಿ ಹೆಸರು ಘೋಷಣೆಯಾಗಿದೆ. ಇದರ ಬೆನ್ನಲ್ಲೇ ಇದೀಗ ಯಶವಂತಪುರದ ಬಿಜೆಪಿ ಶಾಸಕ ಎಸ್.ಟಿ.ಸೋಮಶೇಖರ್ ಹೊಸ ಬಾಂಬ್ ಸಿಡಿಸಿದ್ದಾರೆ.

ಮಾಜಿ ಸಚಿವ ಸಿ.ಪಿ.ಯೋಗೇಶ್ವರ್ ಚನ್ನಪಟ್ಟಣ ಟಿಕೆಟ್ ವಿಚಾರವಾಗಿ ಬಿಜೆಪಿ ತೊರೆದು ಕಾಂಗ್ರೆಸ್ ಸೇರಿದ್ದಾರೆ. ಸಿಪಿ ಯೋಗೇಶ್ವರ್ ಅವರಿಂದ ಚೆನ್ನಾಗಿ ದುಡಿಸಿಕೊಂಡು ಇದೀಗ ಅವರನ್ನು ಕೈಬಿಟ್ಟಿದ್ದಾರೆ. ವಿಪಕ್ಷ ನಾಯಕ ಆರ್.ಅಶೋಕ್ ಅವರ ಮಾತು ಕೇಳಬಾರದು. ನನ್ನ ಮೇಲೆ ಯಾವುದೇ ಶಿಸ್ತು ಕ್ರಮ ಜರುಗಿಸಿದರೂ ನನಗೆ ಭಯವಿಲ್ಲ. ನೋಡ್ತಾ ಇರಿ ಮುಂದೆ ಬೆಂಗಳೂರಿನ ಇಬ್ಬರು ಶಾಸಕರು ಸೇರಿದಂತೆ ಒಟ್ಟು ಎಂಟು ಬಿಜೆಪಿ ಶಾಸಕರು ಕಾಂಗ್ರೆಸ್‌ಗೆ ಹೋಗ್ತಾರೆ ಎಂದು ಹೇಳಿದ್ದಾರೆ.

ಉದಯಗಿರಿ ಪೂರ್ವ, ಪಶ್ಚಿಮ ಠಾಣೆಗೆ ಪ್ರಸ್ತಾವನೆ

ಮೈಸೂರು,ಅ.24(ಆರ್‌ಕೆ)–ಮೈಸೂರಿನ ಉದಯಗಿರಿ ಪೂರ್ವ ಮತ್ತು ಪಶ್ಚಿಮ ಠಾಣೆಗಳೆಂದು ಸೃಜಿಸುವ ಸಂಬಂಧ ಪ್ರಸ್ತಾವನೆ ಸಲ್ಲಿಸುವಂತೆ ನಗರ ಪೊಲೀಸ್ ಕಮಿಷ್ನರ್ ಸೀಮಾ ಲಾಟ್ಕರ್ ಅವರು ದೇವರಾಜ ಉಪ ವಿಭಾಗದ ಎಸಿಪಿ ಶಾಂತಮಲ್ಲಪ್ಪ ಅವರಿಗೆ ಸೂಚಿಸಿದ್ದಾರೆ.

ಈ ಕುರಿತು ಅ.21ರಂದು ಜ್ಞಾಪನ ಹೊರಡಿಸಿರುವ ಅವರು, ಎನ್.ಆರ್. ಕ್ಷೇತ್ರದ ಶಾಸಕ ತನ್ವೀರ್ ಸೇಠ್ ಅವರು, ಉದಯಗಿರಿ ಠಾಣೆಯನ್ನು ವಿಭಜಿಸಿ ಪೂರ್ವ ಮತ್ತು ಪಶ್ಚಿಮ ಠಾಣೆಯನ್ನು ಕಾನೂನು–ಸುವ್ಯವಸ್ಥೆ ದೃಷ್ಟಿಯಿಂದ ಸೃಜಿಸಬೇಕೆಂದು ಗೃಹ ಇಲಾಖೆಗೆ ಪತ್ರ ಮುಖೇನ ಕೋರಿದ್ದರ ಹಿನ್ನೆಲೆಯಲ್ಲಿ ಪ್ರಧಾನ ಕಚೇರಿ ಸುತ್ತೋಲೆಯಂತೆ ವಾರದೊಳಗೆ ಪ್ರಸ್ತಾವನೆ ಸಲ್ಲಿಸುವಂತೆ ಸೂಚಿಸಿದ್ದಾರೆ.

ಮರುಕುಂಬಿ ಗ್ರಾಮದಲ್ಲಿ ದಲಿತರ ಗುಡಿಸಲು ಸುಟ್ಟ ಪ್ರಕರಣ: 98 ಮಂದಿಗೆ ಜೀವಾವಧಿ ಶಿಕ್ಷೆ



ಕೊಪ್ಪಳ, ಅ.24– ಇಡೀ ದೇಶದ ಗಮನ ಸೆಳೆದಿದ್ದ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಮರುಕುಂಬಿ ಗ್ರಾಮದಲ್ಲಿ ದಲಿತರ ಗುಡಿಸಲುಗಳಿಗೆ ಅನ್ಯ ಸಮುದಾಯದವರು ಬೆಂಕಿ ಹಚ್ಚಿದ ಘಟನೆಯಲ್ಲಿ ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಚಂದ್ರಶೇಖರ ಸಿ ಅವರು 101 ಅಪರಾಧಿಗಳಿಗೂ ಶಿಕ್ಷೆ ವಿಧಿಸಿ ಗುರುವಾರ ತೀರ್ಪು ನೀಡಿದ್ದು, ಇವರಲ್ಲಿ 98 ಮಂದಿಗೆ ಜೀವಾವಧಿ ಶಿಕ್ಷೆ ಮತ್ತು 5 ಸಾವಿರ ರೂ. ದಂಡ, ಮೂವರಿಗೆ 5 ವರ್ಷಗಳ ಶಿಕ್ಷೆ ಹಾಗೂ ದಂಡ ವಿಧಿಸಿ ತೀರ್ಪು ನೀಡಿದ್ದಾರೆ.

ಈ ಘಟನೆ 2014ರಲ್ಲಿ ರಾಜ್ಯವನ್ನೇ ಬೆಚ್ಚಿ ಬೀಳಿಸಿತ್ತು. ಗ್ರಾಮದ ಹೋಟೆಲ್‌ಗಳು ಮತ್ತು ಕ್ಷೌರಿಕ ಅಂಗಡಿಗಳಲ್ಲಿ ದಲಿತರಿಗೆ ಪ್ರವೇಶ ನಿರಾಕರಿಸಿದ್ದಕ್ಕೆ ಸಂತ್ರಸ್ತರು ಮತ್ತು ಆರೋಪಿಗಳ ನಡುವೆ ಘರ್ಷಣೆ ನಡೆದಿತ್ತು. ಹಲವು ದಲಿತ ಮುಖಂಡರು ಕೊಪ್ಪಳ ಜಿಲ್ಲೆಯಿಂದ ಬೆಂಗಳೂರಿಗೆ ಪಾದಯಾತ್ರೆ ಕೈಗೊಂಡಿದ್ದರು. ಈ ಪ್ರಕರಣದಲ್ಲಿ ಆರಂಭದಲ್ಲಿ 117 ಮಂದಿ ವಿರುದ್ಧ ಕೇಸ್ ದಾಖಲಿಸಲಾಗಿತ್ತು. ಅವರಲ್ಲಿ ಕೆಲವರು ಸಾವನ್ನಪ್ಪಿದ್ದರೆ, 101 ಆರೋಪಿಗಳನ್ನು ಬಂಧಿಸಲಾಗಿದೆ. 101 ಮಂದಿಗೆ ಏಕಕಾಲದಲ್ಲಿ ಶಿಕ್ಷೆ ವಿಧಿಸುತ್ತಿರುವುದು ಜಿಲ್ಲೆಯ ಇತಿಹಾಸದಲ್ಲಿ ಇದೇ ಮೊದಲು ಎನ್ನಲಾಗಿದೆ.

ಈ ಘಟನೆಯ ನಂತರ ಮೂರು ತಿಂಗಳ ಕಾಲ ಮರುಕುಂಬಿ ಗ್ರಾಮದಲ್ಲಿ ಪೊಲೀಸರು ಬಿಗಿ ಬಂದೋಬಸ್ತ್ ಮಾಡಲಾಗಿತ್ತು. ದೌರ್ಜನ್ಯವನ್ನು ವಿರೋಧಿಸುವ ನಾಯಕತ್ವ ವಹಿಸಿದ್ದ ದಲಿತ ಮುಖಂಡ ವೀರೇಶ ಮರುಕುಂಬಿ 2014ರಲ್ಲಿ ಕೊಪ್ಪಳ ರೈಲು ನಿಲ್ದಾಣದ ಬಳಿ ಕೊಲೆಯಾಗಿದ್ದರು. ದಲಿತರ ಕೇರಿಗೆ ನುಗ್ಗಿದ್ದ ಗ್ರಾಮದ ನೂರಾರು ಸವರ್ಣೀಯರು, ದಲಿತರಿಗೆ ಸೇರಿದ್ದ ನಾಲ್ಕು ಗುಡಿಸಲುಗಳಿಗೆ ಬೆಂಕಿ ಹಚ್ಚಿದ್ದರು. ಅನೇಕರ ಮೇಲೆ ಸಿಕ್ಕಸಿಕ್ಕ ವಸ್ತುಗಳಿಂದ ಹಲ್ಲೆ ಮಾಡಿದ್ದರು.

ದಲಿತರ ಗುಡಿಸಲುಗಳು ಸುಟ್ಟು ಭಸ್ಮವಾಗಿದ್ದವು. ಗುಡಿಸಲುಗಳಲ್ಲಿ ಯಾರು ಇಲ್ಲದೇ ಇದ್ದಿದ್ದರಿಂದ ಅಂದು ಯಾವುದೇ ಪ್ರಾಣಾಪಾಯವಾಗಿರಲಿಲ್ಲ. ಕೇವಲ ಬೆಂಕಿ ಹಚ್ಚಿದ್ದು ಮಾತ್ರವಲ್ಲ ಅಂದು 27 ದಲಿತರ ಮೇಲೆ ಹಲ್ಲೆಯಾಗಿತ್ತು. ಈ ಬಗ್ಗೆ ಅಂದು ಘಟನೆಯಲ್ಲಿ ಗಾಯಗೊಂಡವರು ಗಂಗಾವತಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಸವರ್ಣೀಯರ ವಿರುದ್ಧ ಜಾತಿ ನಿಂದನೆ (ಅಟ್ರಾಸಿಟಿ), ಕೊಲೆಗೆ ಯತ್ನ ಸೇರಿದಂತೆ ಅನೇಕ ಸೆಕ್ಷನ್ ಅಡಿ ಪ್ರಕರಣ ದಾಖಲಿಸಿದ್ದು, ಬರೋಬ್ಬರಿ 117 ಸವರ್ಣೀಯರ ಮೇಲೆ ಎಫ್‌ಐಆರ್ ದಾಖಲಾಗಿತ್ತು.

ಕೋರ್ಟ್‌ನಲ್ಲಿ ಸುದೀರ್ಘ ವಿಚಾರಣೆ ನಡೆದು 101 ಜನರ ಮೇಲೆ ಪೂರಕ ದಾಖಲೆಗಳು ಸಾಬೀತಾದ ಹಿನ್ನೆಲೆಯಲ್ಲಿ ಕಳೆದ ಕೆಲವು ದಿನಗಳ ಹಿಂದಷ್ಟೇ ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶ ಸಿ.ಚಂದ್ರಶೇಖರ ಅವರು 101 ಆರೋಪಿಗಳು ದೋಷಿಗಳು ಎಂದು ತೀರ್ಪು ನೀಡಿದ್ದರು. ಆದರೆ ಶಿಕ್ಷೆ ಪ್ರಮಾಣ ಪ್ರಕಟಿಸಿರಲಿಲ್ಲ. 101 ಜನರು ದೋಷಿಗಳು ಎಂದು ತೀರ್ಪು ನೀಡಿದ ಬೆನ್ನಲ್ಲೆ ಗಂಗಾವತಿ ಪೊಲೀಸರು 101 ಅಪರಾಧಿಗಳನ್ನು ಬಂಧಿಸಿ ಈಗಾಗಲೇ ನ್ಯಾಯಾಂಗ ಬಂಧನಕ್ಕೆ ಕಳುಹಿಸಿದ್ದರು.

ಮೂವರು ಎಸ್‌ಸಿ, ಎಸ್‌ಟಿ ಜಾತಿಯಲ್ಲಿ ಬರುವುದರಿಂದ ಅವರಿಗೆ ಎಸ್‌ಸಿ, ಎಸ್‌ಟಿ ಕಾಯ್ದೆಯು ಅನ್ವಯವಾಗಲ್ಲ ಎಂಬ ಕಾರಣ ಈ ಮೂವರಿಗೆ 5 ವರ್ಷಗಳ ಶಿಕ್ಷೆ ಹಾಗೂ ದಂಡ ಪ್ರಮಾಣ ವಿಧಿಸಿ ಶಿಕ್ಷೆಯ ಪ್ರಮಾಣದ ತೀರ್ಪನ್ನು ಗುರುವಾರ ಪ್ರಕಟಿಸಿದ್ದಾರೆ. ಸರ್ಕಾರದ ಪರವಾಗಿ ಸರಕಾರಿ ಅಭಿಯೋಜಕಿ ಅಪರ್ಣಾ ಬಂಡಿ ಅವರು ಸುದೀರ್ಘ ವಾದ ಮಂಡಿಸಿದ್ದರು.

ಮರುಕುಂಬಿ ಗ್ರಾಮದಲ್ಲಿ ಬಂದೋಬಸ್ತ್: ಮರುಕುಂಬಿ ಅಸ್ಪೃಶ್ಯತೆ ಪ್ರಕರಣದ ತೀರ್ಪು ಪ್ರಕಟವಾದ ಬೆನ್ನಲ್ಲೇ ಗಂಗಾವತಿ ಪೊಲೀಸರು ಗ್ರಾಮದಲ್ಲಿ ಬಂದೋಬಸ್ತ್ ಏರ್ಪಡಿಸಿದ್ದಾರೆ. ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಎಚ್ಚರಿಕೆ ವಹಿಸಿದ್ದಲ್ಲದೇ, ಡಿವೈಎಸ್‌ಪಿ ಸೇರಿದಂತೆ ಇಡೀ ಪೊಲೀಸ್ ಪಡೆಯೇ ಗ್ರಾಮದಲ್ಲಿ ರಾತ್ರಿ ಠಿಕಾಣಿ ಹೂಡಿದೆ. ಗ್ರಾಮದಲ್ಲೂ ಬಿಗುವಿನ ವಾತಾವರಣ ನಿರ್ಮಾಣವಾಗಿದೆ.

ಮುಡಾ ನಿವೇಶನ ಹಂಚಿಕೆ ಹಗರಣ

ಮಾಜಿ ಎಡಿಸಿ ಪಾಲಯ್ಯಗೆ ಲೋಕಾಯುಕ್ತ ವಿಚಾರಣೆ

ಮೈಸೂರು, ಅ.24(ಬಿಎಲ್‌ಯು)– ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಮುಡಾ ಹಗರಣದಲ್ಲಿ ಮಾಜಿ ಅಪರ ಜಿಲ್ಲಾಧಿಕಾರಿ ಪಾಲಯ್ಯ ಅವರನ್ನು ಲೋಕಾಯುಕ್ತ ಪೊಲೀಸರು ಇಂದು ವಿಚಾರಣೆ ಮಾಡಿದರು.



ಸಿದ್ದರಾಮಯ್ಯ ಪತ್ನಿ ಪಾರ್ವತಿ ಅವರ ಮೈಸೂರಿನ ಕೆಸರೆ ಸರ್ವೆ ನಂಬರ್ 464 ರ 3.16 ಎಕರೆ ಭೂಮಿ ಅನ್ಯಕ್ರಾಂತ ಮಾಡಿದ ಆದೇಶಕ್ಕೆ ಅಂದಿನ ಜಿಲ್ಲಾಧಿಕಾರಿ, ಹಾಲಿ ಸಂಸದ ಕುಮಾರ್ ನಾಯಕ್ ಅವರೊಂದಿಗೆ ಆಗ ಅಪರ ಜಿಲ್ಲಾಧಿಕಾರಿಯಾಗಿದ್ದ ಪಾಲಯ್ಯ ಕೂಡ ಸಹಿ ಮಾಡಿದ್ದರು.

ಕುಮಾರ್ ನಾಯಕ್ ಲೋಕಾಯುಕ್ತರ ವಿಚಾರಣೆಯಲ್ಲಿ ಭಾಗಿಯಾಗಿದ್ದರು. ಆದರೆ ಪಾಲಯ್ಯ ಮಾತ್ರ ವಿಚಾರಣೆಯಲ್ಲಿ ಭಾಗಿಯಾಗದ ಕಾರಣ ಲೋಕಾಯುಕ್ತರು ಎರಡನೇ ಬಾರಿಗೆ ಸಮನ್ಸ್ ನೀಡಿದ್ದರು.

ಈ ಹಿನ್ನೆಲೆಯಲ್ಲಿ ಪಾಲಯ್ಯ ಇಂದು ಲೋಕಾಯುಕ್ತ ವಿಚಾರಣೆಯಲ್ಲಿ ಭಾಗಿಯಾಗಿದ್ದರು. ಬೆಳಿಗ್ಗೆ 11.15 ಗಂಟೆಗೆ ಆಗಮಿಸಿದ ಪಾಲಯ್ಯ ಅವರನ್ನು ಲೋಕಾಯುಕ್ತ ಎಸ್ಪಿ ಟಿ.ಜೆ.ಉದೇಶ್ ನೇತೃತ್ವದ ತಂಡ 12.45 ಗಂಟೆವರೆಗೂ ವಿಚಾರಣೆ ಮಾಡಿತು.

ಬಡಾವಣೆ ನಿರ್ಮಿಸಿದ್ದ ಭೂಮಿಯನ್ನು ಕೃಷಿ ಭೂಮಿಯಾಗಿ ಹೇಗೆ ಅನ್ಯಕ್ರಾಂತ ಮಾಡಿದ್ದೀರಾ ಎಂದು ಲೋಕಾಯುಕ್ತರು ಪ್ರಶ್ನೆ ಮಾಡಿದ್ದಾರೆ ಎನ್ನಲಾಗಿದೆ. ಆದರೆ ಪಾಲಯ್ಯ ಏನು ಉತ್ತರ ನೀಡಿದ್ದಾರೆ ಎಂಬುದು ತಿಳಿದು ಬಂದಿಲ್ಲ. ವಿಚಾರಣೆ ನಂತರ ಪತ್ರಕರ್ತರಿಗೆ ಪ್ರತಿಕ್ರಿಯೆ ನೀಡಿದ ಪಾಲಯ್ಯ, ಲೋಕಾಯುಕ್ತರು ನೋಟಿಸ್ ನೀಡಿದ್ದರು. ಈಗ ವಿಚಾರಣೆಯಲ್ಲಿ ಭಾಗವಹಿಸಿದ್ದೇನೆ. ಲೋಕಾಯುಕ್ತರು ಕೇಳಿದ ಪ್ರಶ್ನೆಗಳಿಗೆ ಉತ್ತರ ನೀಡಿದ್ದೇನೆ ಎಂದರು.



ಲಕ್ಷ್ಮಮ್ಮ ನಿಧನ

ನಂಜನಗೂಡು, ಅ.24– ತಾಲೂಕಿನ ನೇರಳೆ ಗ್ರಾಮದ ಲಕ್ಷ್ಮಮ್ಮ(78) ಅವರು ಬುಧವಾರ ಸಂಜೆ ನಿಧನರಾದರು.

ಇವರು ನಾಲ್ವರು ಪುತ್ರರು, ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಗ್ರಾಮದ ಅವರ ಜಮೀನಿನಲ್ಲಿ ಗುರುವಾರ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರಿನ 131ರ ಪೈಕಿ 110 ಪಾರಂಪರಿಕ ಕಟ್ಟಡಗಳ ಸಮೀಕ್ಷೆ ಪೂರ್ಣ

● ತಿಂಗಳಲ್ಲಿ ಉಳಿದ 21 ಕಟ್ಟಡಗಳ ಸಮೀಕ್ಷೆ ಮುಗಿಸಿ ವರದಿ ಸಲ್ಲಿಕೆ ● ಶಿಥಿಲಾವಸ್ಥೆಯಲ್ಲಿರುವ 11 ಕಟ್ಟಡಗಳ ಸಂರಕ್ಷಣೆಗೆ 6 ತಿಂಗಳ ಹಿಂದೆಯೇ ಲೈನ್ ಎಸ್ಟಿಮೇಟ್ ಸಲ್ಲಿಕೆ











● ಎಸ್.ಟಿ.ರವಿಕುಮಾರ್

ಮೈಸೂರು,ಅ.24– ಮೈಸೂರಿನಲ್ಲಿರುವ ಪಾರಂಪರಿಕ ಕಟ್ಟಡ ಮತ್ತು ಸ್ಮಾರಕಗಳನ್ನು ದುರಸ್ತಿಗೊಳಿಸಿ ಸಂರಕ್ಷಿಸಲು ಜಿಲ್ಲಾಡಳಿತ ಹಾಗೂ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯು ಮುಂದಾಗಿದೆ.

ನಿರಂತರ ಮಳೆಯಿಂದಾಗಿ ಶಿಥಿಲಾವಸ್ಥೆಯಲ್ಲಿರುವ ಪಾರಂಪರಿಕ ಕಟ್ಟಡಗಳ ಖುದ್ದು ಭೇಟಿ ನೀಡಿ ನೈಜ ಸ್ಥಿತಿಗತಿಗಳನ್ನು ಅಧ್ಯಯನ ಮಾಡಿ ಶಿಫಾರಸ್ಸಿನೊಂದಿಗೆ ವರದಿ ಸಲ್ಲಿಸಲು ರಚಿಸಲಾಗಿದ್ದ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಉಪನಿರ್ದೇಶಕಿ ಮಂಜುಳಾ ನೇತೃತ್ವದ ಜಿಲ್ಲಾ ಪಾರಂಪರಿಕ ಕಟ್ಟಡಗಳ ತಪಾಸಣಾ ಉಪಸಮಿತಿಯು ಕಳೆದ ಒಂದು ವರ್ಷದಿಂದ ಸಮೀಕ್ಷೆ ನಡೆಸುತ್ತಿದೆ.

ಸಮಿತಿ ಸದಸ್ಯರಾಗಿರುವ ಪಾರಂಪರಿಕೆ ವಿಷಯದಲ್ಲಿ ಪರಿಣತರಾಗಿರುವ ಪ್ರಾಚೀನ ಇತಿಹಾಸ ವಿಭಾಗದ ನಿವೃತ್ತ ಪ್ರಾಧ್ಯಾಪಕ ಪ್ರೊ.ಎನ್.ಎಸ್.ರಂಗರಾಜು, ಎಸ್‌ಜೆಸಿಇ ನಿವೃತ್ತ ಪ್ರಾಂಶುಪಾಲ ಪ್ರೊ.ಶಕೀಬ್ ಉರ್ ರಹಮಾನ್, ನಿವೃತ್ತ ಇಂಜಿನಿಯರ್ ಶರತ್‌ಚಂದ್ರ, ತಾರಕೇಶ್, ಮೈಸೂರು ಮಹಾನಗರಪಾಲಿಕೆ ಮತ್ತು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ) ನಗರ ಯೋಜನಾ ವಿಭಾಗದ ಜಂಟಿ ನಿರ್ದೇಶಕರು ಮೈಸೂರಿನ ಹಳೆಯ ಪಾರಂಪರಿಕ ಕಟ್ಟಡಗಳು ಹಾಗೂ ಸ್ಮಾರಕಗಳ ತಪಾಸಣಾ ಕಾರ್ಯ ನಡೆಸುತ್ತಿದ್ದಾರೆ.

ಶಿಥಿಲಾವಸ್ಥೆಯಲ್ಲಿರುವ ಕಟ್ಟಡಗಳು

ಮೈಸೂರು, ಅ.24(ಆರ್‌ಕೆ)– ಸಮೀಕ್ಷೆ ನಡೆಸಿದ ತಪಾಸಣಾ ಉಪಸಮಿತಿಯು ಶಿಥಿಲಾವಸ್ಥೆಯಲ್ಲಿರುವ 11 ಪಾರಂಪರಿಕ ಕಟ್ಟಡಗಳನ್ನು ಒಟ್ಟು 96,80,59,838.40ರೂ. ಅಂದಾಜು ವೆಚ್ಚದಲ್ಲಿ ಸಂರಕ್ಷಣೆ ಮಾಡಬೇಕೆಂದು ಲೈನ್ ಎಸ್ಟಿಮೇಟ್ ಮೂಲಕ ಮಧ್ಯಂತರ ವರದಿ ನೀಡಿದೆ. ವಾಣಿ ವಿಲಾಸ ಮಾರುಕಟ್ಟೆಗೆ 9,28,50,660 ರೂ., ಅಟಾರ ಕಚೇರಿ(ಹಳೇ ಡಿಸಿ ಕಚೇರಿ)ಗೆ 13,50,80,494 ರೂ., ಅಗ್ನಿಶಾಮಕ ದಳದ ಕಚೇರಿಗೆ 3,90,81,770 ರೂ, ಮಹಾರಾಣಿ ವಿಜ್ಞಾನ ಕಾಲೇಜಿಗೆ 10,65,23,025 ರೂ., ಮಹಾರಾಜ ಕಾಲೇಜಿಗೆ 18,45,03,207 ರೂ., ಯುವರಾಜ ಕಾಲೇಜಿಗೆ 17,70,19,647 ರೂ., ಯೂನಿಯನ್ ಬಿಲ್ಡಿಂಗ್‌ಗೆ 5,80,50,867 ರೂ., ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶನ ಕಲೆಗಳ ವಿಶ್ವವಿದ್ಯಾನಿಲಯ (ಲಕ್ಷ್ಮೀಪುರಂ ಬಾಲಕಿಯರ ಶಾಲೆ) ಕಟ್ಟಡಕ್ಕೆ 3,62,55,618 ರೂ., ಸರ್ಕಾರಿ ಚಿಲ್ಡ್ರನ್ಸ್ ಗರ್ಲ್ಸ್ ಹೋಂಗೆ 4,90,14,220 ರೂ., ಮಹಾರಾಜ ಸರ್ಕಾರಿ ಸಂಸ್ಕೃತ ಪಾಠಶಾಲೆಗೆ 6,13,09,701 ರೂ. ಹಾಗೂ ಸರ್ಕಾರಿ ಸರ್ಟಿಫೈಡ್ ಸ್ಕೂಲ್ ಫಾರ್ ಗರ್ಲ್ಸ್‌ಗೆ 2,83,70,622 ರೂ. ಅಗ್ಯವಿದೆ ಎಂದು ತಜ್ಞರು ವರದಿಯಲ್ಲಿ ಅಭಿಪ್ರಾಯಪಟ್ಟಿದ್ದಾರೆ. ಕೇವಲ 11 ಕಟ್ಟಡಗಳ ರಿಪೇರಿ ಮತ್ತು ಸಂರಕ್ಷಣೆಗೆ 96.80 ಕೋಟಿ ರೂ. ವೆಚ್ಚವಾಗಲಿದ್ದು, ಉಳಿದ 119 ಪಾರಂಪರಿಕ ಕಟ್ಟಡಗಳ ಮನರುಜ್ಜೀವನಗೊಳಿಸಲು ನೂರಾರು ಕೋಟಿ ರೂ. ಅನುದಾನದ ಅಗ್ಯತ್ಯವಿದೆ. ಈ ನಡುವೆ ಮೈಸೂರಿನ ಹೃದಯ ಭಾಗದಲ್ಲಿರುವ ದೇವರಾಜ ಮಾರುಕಟ್ಟೆ ಮತ್ತು ಲ್ಯಾನ್ಸ್‌ಡೌನ್ ಕಟ್ಟಡಗಳು ಶಿಥಿಲಗೊಂಡು ಕೆಲಭಾಗ ಬಿದ್ದಿದ್ದರೂ ಅವುಗಳನ್ನು ರಿಪೇರಿ ಮಾಡಿ ಸಂರಕ್ಷಿಸಬೇಕೋ ಅಥವಾ ಸಂಪೂರ್ಣವಾಗಿ ಕೆಡವಿ ಪಾರಂಪರಿಕ ಶೈಲಿಯಲ್ಲಿ ಹೊಸದಾಗಿ ನಿರ್ಮಿಸಬೇಕೋ ಎಂಬುದೇ ನಿರ್ಧಾರವಾಗದೇ ಹಾಗೆಯೇ ಉಳಿದಿದ್ದು, ಈ ಬಗ್ಗೆ ಸರ್ಕಾರ ಮೌನ ವಹಿಸಿರುವುದಕ್ಕೆ ಸಾರ್ವಜನಿಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಪರಿಶೀಲನೆ: ಜಿಲ್ಲಾಧಿಕಾರಿಗಳ ನಿರ್ದೇಶನದಂತೆ ಪಾರಂಪರಿಕ ಕಟ್ಟಡಗಳ ಬಳಿಗೆ ತೆರಳಿ ಪರಿಶೀಲನೆ ನಡೆಸಿದ ಉಪಸಮಿತಿ ಸದಸ್ಯರು, ಗೋಡೆ, ತಾರಸಿ, ಕಾಂಪೌಂಡ್‌ಗಳು ಯಾವ ರೀತಿ ಸದೃಢವಾಗಿವೆ, ಅಡಿಪಾಯಕ್ಕೆ ಅಪಾಯ ಸಂಭವಿಸುವ ಸಾಧ್ಯತೆ ಇದೆಯೇ, ಮಳೆ ನೀರು ಸರಾಗವಾಗಿ ಹರಿದು ಹೋಗುವ ಸ್ಥಳದಲ್ಲಿ ಅಡೆತಡೆಗಳಿವೆಯೇ, ಕಿಟಕಿ ಬಾಗಿಲುಗಳ ಸ್ಥಿತಿ, ಕಟ್ಟಡಗಳಿಗೆ ಬಳಸಿರುವ ಮೆಟೀರಿಯಲ್ ಸತ್ವ ಕಳೆದುಕೊಂಡಿದೆಯೇ, ಬಳಸುತ್ತಿರುವ ಹಾಗೂ ಸ್ವಾಧೀನಾನುಭವದಲ್ಲಿರುವ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ನಿರ್ವಹಣೆ ಮಾಡುತ್ತಿದ್ದಾರೆಯೇ, ಶಿಥಿಲಾವಸ್ಥೆಯಾಗಿರುವ ಕಟ್ಟಡವನ್ನು ರಿಪೇರಿ ಮಾಡಿ ಸಂರಕ್ಷಿಸಬಹುದೇ ಅಥವಾ ಕೆಡವಿ ಹೊಸದಾಗಿ ಕಟ್ಟಡ ನಿರ್ಮಿಸಬೇಕೆಂಬುದರ ಬಗ್ಗೆ ಅಧ್ಯಯನ ನಡೆಸುತ್ತಿದ್ದಾರೆ.

ಮಧ್ಯಂತರ ವರದಿ ಸಲ್ಲಿಕೆ: ಸಂಪೂರ್ಣ ಶಿಥಿಲಗೊಂಡು ನೆಲಕ್ಕುರುಳುವ ಪಾರಂಪರಿಕ ಕಟ್ಟಡಗಳನ್ನು ಗುರ್ತಿಸಿದ್ದು ತಜ್ಞರ ಸಮಿತಿ ಸದಸ್ಯರು, 11 ಕಟ್ಟಡಗಳನ್ನು ತುರ್ತಾಗಿ ದುರಸ್ತಿಗೊಳಿಸುವ ಅಗತ್ಯವಿದೆ ಎಂದು 6 ತಿಂಗಳ ಹಿಂದೆಯೇ ಲೈನ್ ಎಸ್ಟಿಮೇಟ್‌ನೊಂದಿಗೆ ಪಾರಂಪರಿಕ ಇಲಾಖೆಯ ಮೂಲಕ ಈ ಹಿಂದಿನ ಜಿಲ್ಲಾಧಿಕಾರಿಯಾಗಿದ್ದ ಡಾ.ಕೆ.ವಿ.ರಾಜೇಂದ್ರ ಅವರಿಗೆ ಮಧ್ಯಂತರ ವರದಿ ನೀಡಿದ್ದರು.

ತಿಂಗಳಲ್ಲಿ ಪೂರ್ಣ: ಈವರೆಗೆ 110 ಪಾರಂಪರಿಕ ಕಟ್ಟಡಗಳ ಸಮೀಕ್ಷೆ ಪೂರ್ಣಗೊಳಿಸಿರುವ ಸಮಿತಿಯು, ಬಾಕಿ ಇರುವ 21 ಕಟ್ಟಡಗಳ ಪರಿಶೀಲನೆ ಕಾರ್ಯವನ್ನು ತಿಂಗಳೊಳಗಾಗಿ ಮುಕ್ತಾಯಗೊಳಿಸಿ ಎಲ್ಲಾ 131 ಕಟ್ಟಡಗಳ ರಿಪೇರಿ ಪುನರುಜ್ಜೀವನಗೊಳಿಸುವ ಸಂಬಂಧ ಶಿಫಾರಸ್ಸುಗಳೊಂದಿಗೆ ಸಮಗ್ರ ವರದಿ ಸಿದ್ಧಪಡಿಸಿ ಜಿಲ್ಲಾಧಿಕಾರಿಗಳಿಗೆ ಸಲ್ಲಿಸುವರು.

ಅಗತ್ಯ ಕ್ರಮ: ಪಾರಂಪರಿಕ ತಜ್ಞರ ವರದಿ ಆಧರಿಸಿ ಜಿಲ್ಲಾ ಮಟ್ಟದ ಪಾರಂಪರಿಕ ಸಮಿತಿಯಲ್ಲಿ ಚರ್ಚಿಸಿದ ನಂತರ ಪಾರಂಪರಿಕ ಕಟ್ಟಡಗಳ ಪುನರುಜ್ಜೀವನ ಮತ್ತು ಸಂರಕ್ಷಣೆಗೆ ಕ್ರಿಯಾ ಯೋಜನೆ, ಡಿಪಿಆರ್, ಅಗತ್ಯವಿರುವ ಅನುದಾನದ ಬಗ್ಗೆ ಜಿಲ್ಲಾಧಿಕಾರಿಗಳು ಅನುಮೋದನೆಗಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಬೇಕಾಗಿದೆ.

ಬೇಲೆಕೇರಿ ಅದಿರು ನಾಪತ್ತೆ ಪ್ರಕರಣ: ಕಾರವಾರದ ಕಾಂಗ್ರೆಸ್ ಶಾಸಕ ಸತೀಶ್ ಸೈಲ್ ದೋಷಿ

ಸಿಬಿಐ ವಶದಲ್ಲಿ ಶಾಸಕ,ಇಂದು ಶಿಕ್ಷೆ ಪ್ರಮಾಣ ಪ್ರಕಟ

ಬೆಂಗಳೂರು, ಅ.24–ಬೇಲೇಕೇರಿ ಅದಿರು ನಾಪತ್ತೆ ಪ್ರಕರಣದಲ್ಲಿ ಕಾರವಾರದ ಕಾಂಗ್ರೆಸ್ ಶಾಸಕ ಸತೀಶ್ ಸೈಲ್ ದೋಷಿ ಎಂದು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ಆದೇಶ ಹೊರಡಿಸಿದೆ. ಒಂದಲ್ಲ ಎರಡಲ್ಲ ಬರೋಬ್ಬರಿ 6 ಕೇಸ್‌ಗಳಲ್ಲೂ ಶಾಸಕ ಸತೀಶ್ ಸೈಲ್ ದೋಷಿ ಎಂದು ವಿಶೇಷ ಕೋರ್ಟ್ ನ್ಯಾಯಾಧೀಶರಾದ ಸಂತೋಷ್ ಗಜಾನನ ಭಟ್ ತೀರ್ಪು ನೀಡಿದ್ದಾರೆ. ಇದೇ ಕೆಲ ಪ್ರಕರಣದಲ್ಲಿ ಶಾಸಕರ ಜೊತೆ ಇತರರೂ ದೋಷಿಗಳಾಗಿದ್ದಾರೆ.

ಎಲ್ಲಾ ಅಪರಾಧಿಗಳನ್ನು ಕೂಡಲೇ ವಶಕ್ಕೆ ಪಡೆದುಕೊಳ್ಳುವಂತೆ ಆದೇಶಿಸಿ, ಶಿಕ್ಷೆ ಪ್ರಮಾಣವನ್ನೂ ನಾಳೆಗೆ (ಅ.25) ಕಾಯ್ದಿರಿಸಲಾಗಿದ್ದು, ತಕ್ಷಣವೇ ಸಿಬಿಐ ಅಧಿಕಾರಿಗಳು ಆರೋಪಿಗಳನ್ನು ಬಂಧಿಸಿ ಬೌರಿಂಗ್ ಆಸ್ಪತ್ರೆಯಲ್ಲಿ ಆರೋಗ್ಯ ತಪಾಸಣೆ ನಡೆಸಿದ ನಂತರ ಪರಪ್ಪನ ಅಗ್ರಹಾರ ಜೈಲಿಗೆ ಬಿಟ್ಟುಬಂದಿದ್ದು, ನಾಳೆ ಮಧ್ಯಾಹ್ನ 12.30ಕ್ಕೆ ಮತ್ತೇ ನ್ಯಾಯಾಲಯಕ್ಕೆ ಹಾಜರುಪಡಿಸಲಿದ್ದಾರೆ.



ಈ ಪ್ರಕರಣದಲ್ಲಿ ಶಾಸಕ ಸತೀಶ್ ಸೈಲ್ ಮಾತ್ರವಲ್ಲದೇ, ಅರಣ್ಯಾಧಿಕಾರಿ ಆಗಿದ್ದ ಮಹೇಶ್ ಬಿಲಿಯೆ, ಸ್ವಸ್ತಿಕ್ ನಾಗರಾಜ್, ಕೆವಿಎನ್ ಗೋವಿಂದ ರಾಜು, ಕೆ.ಮಹೇಶ್ ಕುಮಾರ್, ಪ್ರೇಮ್‌ಚಂದ್ ಗರ್ಗ್, ಸುಶೀಲ್ ಕುಮಾರ್ ವಲೇಚ, ರಾಜ್‌ಕುಮಾರ್, ಚೇತನ್ ಸಾಹ, ಖಾರದಪುಡಿ ಮಹೇಶ್ ದೋಷಿಗಳಾಗಿದ್ದಾರೆ.

ಪ್ರಕರಣದ ಹಿನ್ನಲೆ: 2010ರಲ್ಲಿ ಬೇಲೇಕೇರಿ ಬಂದರಿನಲ್ಲಿ ಸೀಜ್ ಮಾಡಿ ಇಡಲಾಗಿದ್ದ 11,312 ಮೆಟ್ರಿಕ್ ಟನ್ ಅದಿರು ನಾಪತ್ತೆ ಆಗಿತ್ತು. ಈ ಅದಿರನ್ನು ವಿದೇಶಕ್ಕೆ ರಫ್ತು ಮಾಡಲಾಗಿತ್ತು. ಈ ಸ್ಕ್ಯಾಮ್ ಅನ್ನು ಅಂದು ಕರ್ನಾಟಕ ಲೋಕಾಯುಕ್ತರಾಗಿದ್ದ ಎನ್.ಸಂತೋಷ್ ಹೆಗ್ಡೆ ಬೆಳಕಿಗೆ ತಂದಿದ್ದರು. ಅವರ ವರದಿಯನ್ವಯ 7.74 ಮಿಲಿಯನ್ ಟನ್ ಕಬ್ಬಿಣದ ಅದಿರು ವಿದೇಶಕ್ಕೆ ರಫ್ತಾಗಿತ್ತು. 2006–07 ಹಾಗೂ 2010–11ರ ನಡುವೆ ಭಾರೀ ಪ್ರಮಾಣದ ಅದಿರು ವಿದೇಶಕ್ಕೆ ರಫ್ತಾಗಿತ್ತು. ಇದರಿಂದ ಸರಕಾರದ ಖಜಾನೆಗೆ ಭಾರೀ ನಷ್ಟವುಂಟಾಗಿತ್ತು.

ಮಲ್ಲಿಕಾರ್ಜುನ ಶಿಪ್ಪಿಂಗ್ ಕಾರ್ಪೋರೇಷನ್ ಮಾಲೀಕರಾಗಿದ್ದ ಸತೀಶ್ ಸೈಲ್ ಹಾಗೂ ಇತರರ ವಿರುದ್ಧ ಕ್ರಿಮಿನಲ್ ಸಂಚು, ಚೀಟಿಂಗ್, ಫೋರ್ಜರಿ, ಟ್ರೆಸ್‌ಪಾಸ್, ಭ್ರಷ್ಟಾಚಾರ ತಡೆ ಕಾಯ್ದೆಯಡಿ ಪ್ರಕರಣ ದಾಖಲಾಗಿತ್ತು. ಅಲ್ಲದೇ ಸಿಬಿಐ ತನಿಖೆ ನಡೆಸಿ ಚಾರ್ಜ್‌ಶೀಟ್ ಸಲ್ಲಿಸಿತ್ತು. ಪ್ರಕರಣ ಸಂಬಂಧಿಸಿ 2013ರ ಸೆಪ್ಟೆಂಬರ್ ತಿಂಗಳಲ್ಲಿ ಸಿಬಿಐ ಸತೀಶ್ ಸೈಲ್ ಅವರನ್ನು ಬಂಧಿಸಿತ್ತು. ಇನ್ನು ಈ ಪ್ರಕರಣದಲ್ಲಿ ಅಂದಿನ ಬಿಎಸ್‌ಆರ್ ಕಾಂಗ್ರೆಸ್ ಪಕ್ಷದ ಕಂಪ್ಲಿ ಶಾಸಕ ಸುರೇಶ್‌ಬಾಬು ಸಹ ಅರೆಸ್ಟ್ ಆಗಿದ್ದರು.

ಚುನಾವಣೆ ಹೊತ್ತಲ್ಲೇ ಕಾಂಗ್ರೆಸ್‌ಗೆ ಶಾಕ್: ರಾಜ್ಯದಲ್ಲಿ ಮೂರು ಪ್ರಮುಖ ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆ ದಿನಾಂಕ ಘೋಷಣೆಯಾಗಿದ್ದು, ಈಗಾಗಲೇ ಅಭ್ಯರ್ಥಿಗಳನ್ನು ಕೂಡ ಘೋಷಣೆ ಮಾಡಲಾಗಿದೆ. ಈಗಾಗಲೇ ಮುಡಾ ಹಗರಣ, ವಾಲ್ಮೀಕಿ ಅಭಿವೃದ್ಧಿ ನಿಗಮದ ಭ್ರಷ್ಟಾಚಾರ ಹಾಗೂ ಬೆಂಗಳೂರು ಮಳೆ ಸಮಸ್ಯೆ ವಿಪರೀತವಾಗಿದೆ. ಈ ಸಮಸ್ಯೆಗಳಿಂದ ಈಗಾಗಲೇ ರಾಜ್ಯ ಸರ್ಕಾರಕ್ಕೆ ತೀವ್ರ ಮುಜುಗರ ಉಂಟಾಗಿದೆ ಇದರ ನಡುವೆ ಕಾರವಾರ ಕಾಂಗ್ರೆಸ್ ಶಾಸಕನ ಮೇಲಿನ ಆರೋಪ ಸಾಭೀತಾಗಿದ್ದು, ಕಾಂಗ್ರೆಸ್‌ಗೆ ಇನ್ನಷ್ಟು ಮುಜುಗರ ಉಂಟು ಮಾಡಿದೆ. ಮುಂದಿನ ಉಪ ಚುನಾವಣೆಯಲ್ಲಿ ವಿರೋಧ ಪಕ್ಷಗಳು ಮುಡಾ ವಾಲ್ಮೀಕಿ ಹಗರಣದ ಜೊತೆಗೆ ಇದನ್ನೂ ಪ್ರಮುಖ ಚುನಾವಣೆ ಅಸ್ತ್ರವನ್ನಾಗಿ ಬಳಸಿಕೊಳ್ಳುವ ಸಾಧ್ಯತೆಗಳವೆ.

ಯಾಸೀರ್ ಅಹಮದ್ ಶಿಗ್ಗಾವಿ ಕಾಂಗ್ರೆಸ್ ಅಭ್ಯರ್ಥಿ

ಬೆಂಗಳೂರು, ಅ.24– ರಾಜ್ಯದ ಉಪ ಚುನಾವಣೆಯಲ್ಲಿ ಶಿಗ್ಗಾವಿಗೆ ಕಾಂಗ್ರೆಸ್‌ನಿಂದ ಟಿಕೆಟ್ ಘೋಷಣೆಯಾಗಿದ್ದು, ಸತತ 6ನೇ ಬಾರಿಗೆ ಮುಸ್ಲಿಂ ನಾಯಕ ಯಾಸೀರ್ ಅಹಮದ್ ಖಾನ್ ಪಠಾಣ್ ಅವರಿಗೆ ಟಿಕೆಟ್ ನೀಡಲಾಗಿದೆ.



ಈ ಮೂಲಕ ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ಅವರ ಪುತ್ರ ಭರತ್ ಬೊಮ್ಮಾಯಿಗೆ ಠಕ್ಕರ್ ಕೊಡಲು ಕೈ ಸಿದ್ಧತೆ ಮಾಡಿಕೊಂಡಿದೆ. ಸಿಎಂ ಸಿದ್ದರಾಮಯ್ಯ, ಸಚಿವ ಜಮೀರ್ ಅಹ್ಮದ್ ಖಾನ್ ಆಪ್ತರೂ ಆಗಿರುವ ಅಜ್ಜಂಫೀರ್ ಖಾದ್ರಿ ಶಿಗ್ಗಾವಿ ಕಾಂಗ್ರೆಸ್ ಟಿಕೆಟ್ ಪ್ರಬಲ ಆಕಾಂಕ್ಷಿಯಾಗಿದ್ದರು. ಆದರೆ, ಇದೀಗ ಟಿಕೆಟ್ ಮಿಸ್ ಆಗಿರುವ ಬೆನ್ನಲ್ಲಿಯೇ ಕಾಂಗ್ರೆಸ್ ನಾಯಕರು ಅಜ್ಜಂಫೀರ್ ಖಾದ್ರಿಗೆ ಸೂಕ್ತ ಸ್ಥಾನಮಾನದ ಭರವಸೆ ನೀಡಿದ್ದಾರೆ ಎಂದು ತಿಳಿದುಬಂದಿದೆ ಮಾಜಿ ಎಂಎಲ್‌ಸಿ ಸೋಮಣ್ಣ ಬೇವಿನಮರದ, ಸಂಜೀವ್ ನೀರಲಗಿ, ರಾಜುಕುನ್ನೂರು ಸೇರಿದಂತೆ ಹಲವು ಕೂಡ ಕಾಂಗ್ರೆಸ್ ಹೈಕಮಾಂಡ್ ನಡೆಯಿಂದ ಬೇಸರ ವ್ಯಕ್ತಪಡಿಸಿದ್ದಾರೆ.

ಮೈಸೂರು ಜಿಲ್ಲೆ, ನಗರ ಸ್ವಾತಂತ್ರ್ಯ ಹೋರಾಟಗಾರರ ಸಂಘದಿಂದ 'ಮೈಸೂರು ಚಲೋ' ಸಂಭ್ರಮಾಚರಣೆ

ಮೈಸೂರು ಚಲೋ ಚಳುವಳಿಯಲ್ಲಿ ಹುತಾತ್ಮರಾದ ರಾಮಸ್ವಾಮಿ ಸ್ಮಾರಕಕ್ಕೆ ಮಾಲಾರ್ಪಣೆ

ಮೈಸೂರು,ಅ.24–ಮೈಸೂರಿನ ನಾರಾಯಣ ಶಾಸ್ತ್ರಿ ರಸ್ತೆಯಲ್ಲಿರುವ ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನವನದಲ್ಲಿ ಮೈಸೂರು ಜಿಲ್ಲೆ ಹಾಗೂ ನಗರ ಸ್ವಾತಂತ್ರ್ಯ ಹೋರಾಟಗಾರರ ಸಂಘದ ವತಿಯಿಂದ 77ನೇ ವರ್ಷದ ಮೈಸೂರು ಚಲೋ ಸಂಭ್ರಮ ಆಚರಿಸಲಾಯಿತು.

ಸ್ವಾತಂತ್ರ್ಯ ನಂತರ ಮೈಸೂರು ಸಂಸ್ಥಾನವು ಭಾರತ ಒಕ್ಕೂಟದಲ್ಲಿ ಮಿಲನವಾಗಿದ್ದರಿಂದ ಸಾವಿರಾರು ಹೋರಾಟಗಾರರು ಮೈಸೂರು ಚಲೋ ಚಳುವಳಿ ನಡೆಸಿದ್ದರು. ಪರಿಣಾಮ 1947ರ ಅಕ್ಟೋಬರ್ 24ರಂದು ವಿಲೀನವಾಯಿತು. ಅದರ ಹಿನ್ನೆಲೆಯಲ್ಲಿ ಮಹಾತ್ಮ ಗಾಂಧಿ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ನಂತರ ರಾಷ್ಟ್ರ ಧ್ವಜಾರೋಹಣ ನೆರವೇರಿಸಿ ರಾಮಸ್ವಾಮಿ ವೃತ್ತದಲ್ಲಿ ನಡೆದಿದ್ದ ಚಳುವಳಿಯಲ್ಲಿ ಹುತಾತ್ಮರಾದ ಸ್ವಾತಂತ್ರ್ಯ ಹೋರಾಟಗಾರ ರಾಮಸ್ವಾಮಿ ಸ್ಮಾರಕಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು.



ಮೈಸೂರಿನ ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನವನದಲ್ಲಿ 77ನೇ ವರ್ಷದ ಮೈಸೂರು ಚಲೋ ಸಂಭ್ರಮ ಆಚರಿಸಲಾಯಿತು.

ಈ ವೇಳೆ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ವೈ.ಸಿ.ರೇವಣ್ಣ ಮಾತನಾಡಿ, 1947ರ ಆಗಸ್ಟ್ 15ರಂದು ದೇಶಕ್ಕೆ ಸ್ವಾತಂತ್ರ್ಯ ಬಂದರೂ ಮೈಸೂರಿನಲ್ಲಿ ರಾಜಮನೆತನದ ಆಡಳಿತವಿತ್ತು. ಆ ಬಳಿಕ ಹಳೇ ಮೈಸೂರು ರಾಜ್ಯದಲ್ಲಿಯೂ ಪ್ರಜಾಪ್ರಭುತ್ವ ಆಡಳಿತ ಜಾರಿಗೆ ತರಬೇಕೆಂದು ತೀವ್ರ ಹೋರಾಟ ಆರಂಭಗೊಂಡ ಹಿನ್ನೆಲೆಯಲ್ಲಿ, ಅ.24ರಂದು ಹಳೆ ಮೈಸೂರು ಪ್ರಾಂತ್ಯದಲ್ಲಿ ರಾಜರ ಆಳ್ವಿಕೆ ಕೊನೆಗೊಳಿಸಿ ತ್ರಿವರ್ಣ ಧ್ವಜ ಹಾರಿಸಿ ಪ್ರಜಾಪ್ರಭುತ್ವ ಆಡಳಿತ ವ್ಯವಸ್ಥೆಯನ್ನು ಜಾರಿಗೆ ತರಲಾಯಿತು. ಇದಕ್ಕಾಗಿ ಸೆ.10ರಿಂದ ಅ.14 ರವರೆಗೆ ಮೈಸೂರು ಚಲೋ ಚಳವಳಿ ನಡೆದದ್ದು ಈಗ ಇತಿಹಾಸ. ರಾಜಾಳ್ವಿಕೆ ಕೊನೆಯಾಗಿ ಜನಪರ ಸರ್ಕಾರ ರಚನೆಯಾದದ್ದು 1947ರ ಅ.24ರಂದು. ಹಾಗಾಗಿ, ಆ ದಿನವನ್ನು ಮೈಸೂರು ಚಲೋ ದಿನವೆಂದು ಆಚರಿಸಲಾಗುತ್ತದೆ ಎಂದರು.

ಈ ಸಂದರ್ಭದಲ್ಲಿ ನಗರಪಾಲಿಕೆ ಮಾಜಿ ಸದಸ್ಯೆ ಪ್ರಮೀಳಾ ಭರತ್, ಮೈಸೂರು ನಗರ ಬಿಜೆಪಿ ಉಪಾಧ್ಯಕ್ಷ ಜೋಗಿ ಮಂಜು, ಸಂಘದ ಕಾರ್ಯದರ್ಶಿ ರವಿ ಡಿ, ಕಾರ್ಯಾಧ್ಯಕ್ಷ ಯೋಗಾನಂದ, ವೇದಾಂಬ, ನಾಗರತ್ನ, ಗಿರಿಜಾ, ಅಶ್ವಥ್ ನಾರಾಯಣ್, ಭಾಗ್ಯಲಕ್ಷ್ಮಿ, ಕಮಲಮ್ಮ, ವಿಘ್ನೇಶ್ವರ ಭಟ್, ನಾಗೇಶ್ ಯಾದವ್, ಪಾಪಣ್ಣ, ಚರಣ್, ಸುಕನ್ಯ, ಗೀತಾ, ಮಧು, ಹಾಗೂ ಸ್ವಾತಂತ್ರ್ಯ ಹೋರಾಟಗಾರರ ಕುಟುಂಬ ವರ್ಗದವರು ಉಪಸ್ಥಿತರಿದ್ದರು.


ಗೃಹಲಕ್ಷ್ಮಿ ಹಣ ತರಲು ಹೋದ ಮಹಿಳೆ ನಾಪತ್ತೆ!

ಮೈಸೂರು,ಅ.24–ಮೈಸೂರಿನ ಮೇಟಗಳ್ಳಿ ಠಾಣಾ ವ್ಯಾಪ್ತಿಯಲ್ಲಿ ಮಹಿಳೆಯೋರ್ವರು ಕಾಣೆಯಾಗಿರುವ ಬಗ್ಗೆ ಪ್ರಕರಣ ದಾಖಲಾಗಿದೆ. ಶ್ರೀಮತಿ ಜರೀನಾ (55) ಅ.16ರಂದು ಗೃಹಲಕ್ಷ್ಮಿ ಹಣ ತೆಗೆದುಕೊಂಡು ಬರುತ್ತೇನೆ ಎಂದು ಹೇಳಿ ಹೋದವರು ಇದುವರೆಗೂ ವಾಪಸ್ ಬಂದಿಲ್ಲ ಎಂದು ಆಕೆ ಪತಿ ನಾಸೀರ್ ದೂರು ದಾಖಲಿಸಿದ್ದಾರೆ. ಇವರ ಬಗ್ಗೆ ಮಾಹಿತಿ ತಿಳಿದಲ್ಲಿ ಮೇಟಗಳ್ಳಿ ಪೊಲೀಸ್ ಠಾಣೆ ಸಂಪರ್ಕಿಸಲು ಕೋರಲಾಗಿದೆ.



ಪಿಎಚ್.ಡಿ ಪದವಿ

ಮೈಸೂರು,ಅ.24– ಡಾ.ಕೆ. ಕಾಳಚನ್ನೇಗೌಡ ಅವರ ಮಾರ್ಗದರ್ಶನದಲ್ಲಿ ಎನ್.ವೆಂಕಟೇಶ ಅವರು ಸಮಾಜಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.



ದೇಶ – ವಿದೇಶ

ಮೆಕ್ಸಿಕೋ ವೈಮಾನಿಕ ಪ್ರದರ್ಶನದಲ್ಲಿ ಹಾಲಿವುಡ್ ಚಿತ್ರದ ತರಬೇತುದಾರ ಸಾವು

ಮೆಕ್ಸಿಕೋ: ನ್ಯೂ ಮೆಕ್ಸಿಕೋ ಏರ್ ಶೋನಲ್ಲಿ ಹಾಲಿವುಡ್ ಚಿತ್ರ 'Top Gun: Maverick'ನ ತರಬೇತುದಾರ ವಿಮಾನ ಪತನವಾಗಿ ಸಾವನ್ನಪ್ಪಿದ್ದಾರೆ. ಕ್ಯಾಲಿಫೋರ್ನಿಯಾದ ಚಾರ್ಲ್ಸ್ ಥಾಮಸ್ ಚಕ್ ಕೋಲ್ಮನ್ ದುರಂತದಲ್ಲಿ ಸಾವನ್ನಪ್ಪಿದ್ದು, ಕೋಲ್ಮನ್ ಚಲಿಸುತ್ತಿದ್ದ ವಿಮಾನ ಆಗಸದಲ್ಲಿ ಒಂದೆರಡು ಸಾಹಸ ಪ್ರವೃತ್ತಿಗಳನ್ನು ಪ್ರದರ್ಶಿಸಿತಾದರೂ ಬಳಿಕ ನಿಯತ್ರಣ ತಪ್ಪಿ ನೇರವಾಗಿ ಭೂಮಿ ಅಪ್ಪಳಿಸಿ ಸ್ಫೋಟಗೊಂಡಿದೆ. ಇದೇ ಕೋಲ್ಮನ್ ಈ ಹಿಂದೆ ಹಾಲಿವುಡ್ ಚಿತ್ರ 'Top Gun: Maverick'ನ ತರಬೇತುದಾರರಾಗಿ ಕೆಲಸ ಮಾಡಿದ್ದರು. ಅಲ್ಲದೆ ಕೋಲ್ಮನ್, 10,000 ಗಂಟೆಗಳಿಗಿಂತ ಹೆಚ್ಚು ಹಾರಾಟದ ಅನುಭವ ಹೊಂದಿದ್ದು, ಅದಾಗ್ಯೂ ಕೋಲ್ಮನ್ ವಿಮಾನ ಪತನದ ಕುರಿತು ಅಧಿಕಾರಿಗಳೇ ಆಘಾತ ವ್ಯಕ್ತಪಡಿಸುತ್ತಿದ್ದಾರೆ.



ವಿಮಾನ ಅಪಘಾತಕ್ಕೆ ನಿಖರ ಕಾರಣ ತಿಳಿದುಬಂದಿಲ್ಲ. ಈ ಕುರಿತು ಅಧಿಕಾರಿಗಳು ತನಿಖೆ ನಡೆಸಿದ್ದಾರೆ ಎನ್ನಲಾಗಿದೆ. ಚಾರ್ಲ್ಸ್ ಥಾಮಸ್ ಚಕ್ ಕೋಲ್ಮನ್ ವಿಮಾನ ಎಂಜಿನಿಯರ್, ಏರೋ ಬ್ಯಾಟಿಕ್, ಪರೀಕ್ಷಾ ಪೈಲಟ್ ಆಗಿದ್ದ ಅವರನ್ನು ಹಲವು ಚಿತ್ರಗಳಲ್ಲಿ ತರಬೇತುದಾರನ್ನಾಗಿ ನೇಮಕ ಮಾಡಲಾಗಿತ್ತು.

ಶೀಘ್ರದಲ್ಲೇ ಜಮ್ಮು–ಕಾಶ್ಮೀರಕ್ಕೆ ಮತ್ತೆ ರಾಜ್ಯದ ಸ್ಥಾನಮಾನ

ನವದೆಹಲಿ: ಜಮ್ಮು ಮತ್ತು ಕಾಶ್ಮೀರದ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಅವರು ಕೇಂದ್ರ ಗೃಹ ಸಚಿವ ಮತ್ತು ಸಹಕಾರ ಸಚಿವ ಅಮಿತ್ ಶಾ ಅವರನ್ನು ಭೇಟಿ ಮಾಡಿದ್ದಾರೆ ಎಂದು ಕೇಂದ್ರ ಗೃಹ ಸಚಿವರ ಕಚೇರಿ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದೆ. ಕೇಂದ್ರ ಗೃಹ ಸಚಿವರ ಭೇಟಿ ವೇಳೆ ಒಮರ್ ಅಬ್ದುಲ್ಲಾ ಅವರು ಜಮ್ಮು–ಕಾಶ್ಮೀರಕ್ಕೆ ರಾಜ್ಯದ ಸ್ಥಾನಮಾನ ಮರು ಸ್ಥಾಪಿಸುವಂತೆ ಮನವಿ ಮಾಡಿದ್ದಾರೆ ಎಂದು ಮೂಲಗಳು ತಿಳಿಸಿವೆ.



ಜಮ್ಮು–ಕಾಶ್ಮೀರದ ಗಂದರ್‌ಬಾಲ್ ಜಿಲ್ಲೆಯಲ್ಲಿ ಭಯೋತ್ಪಾದಕ ದಾಳಿಯಲ್ಲಿ 7 ಮಂದಿ ಸಾವನ್ನಪ್ಪಿದ ನಂತರ ಈ ಭೇಟಿ ನಡೆದಿದೆ. ಗಂದೇರ್‌ಬಾಲ್‌ನಲ್ಲಿ ಇತ್ತೀಚೆಗೆ ನಡೆದ ಭಯೋತ್ಪಾದಕ ದಾಳಿಯ ಪರಿಣಾಮವಾಗಿ ವೈದ್ಯರು ಮತ್ತು ವಲಸೆ ಕಾರ್ಮಿಕರು ಸೇರಿದಂತೆ 7 ಜನರ ಸಾವಿಗೆ ಕಾರಣವಾದ ನಂತರ ಭದ್ರತಾ ಪಡೆಗಳು, ಪೊಲೀಸರು ಎಚ್ಚರವಾಗಿರಬೇಕಾದ ಅಗತ್ಯವನ್ನು ಈ ಹಿಂದೆ ಒಮರ್ ಅಬ್ದುಲ್ಲಾ ಹೇಳಿದ್ದರು. ಈಗ ವಿಶೇಷವಾಗಿ ಪೊಲೀಸ್ ಮತ್ತು ಭದ್ರತಾ ಪಡೆಗಳು ಮತ್ತಷ್ಟು ಎಚ್ಚರಿಕೆ ವಹಿಸಬೇಕು ಮತ್ತು ಅಂತಹ ದಾಳಿಗಳು ನಡೆಯದಂತೆ ನೋಡಿಕೊಳ್ಳಬೇಕು ಎಂದು ಜಮ್ಮು ಮತ್ತು ಕಾಶ್ಮೀರ ಸಿಎಂ ಹೇಳಿದರು.

ಕ್ಯಾಂಪಸ್‌ನಲ್ಲಿ ರೇಪ್

ಸುಳ್ಳು ಸುದ್ದಿ ನಂಬಿ ಬೀದಿಗಿಳಿದ ವಿದ್ಯಾರ್ಥಿಗಳು

ಇಸ್ಲಾಮಾಬಾದ್: ಕಾಲೇಜ್ ಕ್ಯಾಂಪಸ್ ಒಂದರಲ್ಲಿ ಯುವತಿ ಮೇಲೆ ಅತ್ಯಾಚಾರ ನಡೆದಿದೆ ಎಂಬ ಸುದ್ದಿ ಪಾಕಿಸ್ತಾನದಲ್ಲಿ ಕಾಡ್ಗಿಚ್ಚಿನಂತೆ ಹರಡಿದೆ. ದೇಶಾದ್ಯಂತ ದೊಡ್ಡ ಮಟ್ಟದಲ್ಲಿ ಪ್ರತಿಭಟನೆಗಳು ನಡೆಯುತ್ತಿವೆ. ವಿದ್ಯಾರ್ಥಿ, ವಿದ್ಯಾರ್ಥಿನಿಯರು ಭಿತ್ತಿಪತ್ರ, ಬ್ಯಾನರ್‌ಗಳ ಸಮೇತ ಬೀದಿಗಿಳಿದು ಲೈಂಗಿಕ ದೌರ್ಜನ್ಯದ ವಿರುದ್ಧ ದನಿ ಎತ್ತಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿ ಹರಡಿರುವ ಸುದ್ದಿಯ ಮೂಲ ಹುಡುಕುತ್ತಾ ಹೊರಟ ಪೊಲೀಸರು, ಲಾಹೋರ್‌ನ ಪಂಜಾಬ್ ಕಾಲೇಜ್ ಕ್ಯಾಂಪಸ್ ತಲುಪಿದರು. ಈ ಕಾಲೇಜಿನ ನೆಲ ಮಹಡಿಯಲ್ಲಿ ಮಹಿಳೆಯೊಬ್ಬರ ಮೇಲೆ ಕಾಲೇಜು ಸಿಬ್ಬಂದಿ ಅತ್ಯಾಚಾರ ಎಸಗಿದ್ದರು ಎಂದು ಸುದ್ದಿ ಹರಡಿತ್ತು. ಈ ಕುರಿತಾಗಿ ತನಿಖೆ ನಡೆಸಿದಾಗ ಅತ್ಯಾಚಾರಕ್ಕೆ ತುತ್ತಾದವರು ಯಾರು ಅನ್ನೋದೇ ಗೊತ್ತಾಗಲಿಲ್ಲ. ಜೊತೆಗೆ ಕಾಲೇಜು ಆಡಳಿತ ಮಂಡಳಿಗೂ ಈ ವಿಚಾರ ಗೊತ್ತಿರಲಿಲ್ಲ. ಹೀಗಾಗಿ ಇದನ್ನು ಸುಳ್ಳು ಸುದ್ದಿ ಎಂದು ಪೊಲೀಸರು ಖಚಿತಪಡಿಸಿದರೂ ಪ್ರತಿಭಟನೆಗಳು ಮಾತ್ರ ನಿಂತಿಲ್ಲ. ಹೀಗಾಗಿ, ಪಂಜಾಬ್ ಪ್ರಾಂತ್ಯದಲ್ಲಿ ಹಲವು ಕಾಲೇಜುಗಳನ್ನು ಮುಚ್ಚಿರುವ ಪಾಕಿಸ್ತಾನ ಸರ್ಕಾರ, ವಿದ್ಯಾರ್ಥಿಗಳು ಗುಂಪುಗೂಡಿದರೆ ಕಠಿಣ ಶಿಕ್ಷೆ ವಿಧಿಸುವ ಎಚ್ಚರಿಕೆ ನೀಡಿದೆ.



ನೀವು ಅಪರಾಧಕ್ಕೆ ಬೆಂಬಲ ನೀಡುತ್ತಿದ್ದೀರಿ; ಎಕ್ಸ್‌ಗೆ ಕೇಂದ್ರ ತೀವ್ರ ತರಾಟೆ

ನವದೆಹಲಿ: ಕಳೆದೊಂದು ವಾರದಿಂದ ವಿಮಾನಯಾನ ಕಂಪನಿಗಳಿಗೆ ಭಾರಿ ಸಂಖ್ಯೆಯಲ್ಲಿ ಹುಸಿ ಬಾಂಬ್ ಸಂದೇಶಗಳು ರವಾನೆಯಾಗುತ್ತಿರುವ ಬಗ್ಗೆ ಗರಂ ಆಗಿರುವ ಕೇಂದ್ರ ಸರ್ಕಾರ, ಈ ವಿಷಯದಲ್ಲಿ ಕೈಕಟ್ಟಿ ಕುಳಿತಿರುವ 'ಎಕ್ಸ್' (ಹಿಂದಿನ ಟ್ವೀಟರ್) ವಿರುದ್ಧ ತೀವ್ರ ಹರಿಹಾಯ್ದಿದೆ. ಏರ್‌ಲೈನ್ಸ್‌ಗಳಿಗೆ ಹುಸಿ ಬಾಂಬ್ ಸಂದೇಶಗಳು ಹೆಚ್ಚಿನ ಸಂಖ್ಯೆಯಲ್ಲಿ ಎಕ್ಸ್ ಹಾಗೂ ಇನ್ನಿತರ ಸೋಷಿಯಲ್ ಮೀಡಿಯಾ ಮೂಲಕವೇ ಬರುತ್ತಿವೆ. ಈ ಹಿನ್ನೆಲೆಯಲ್ಲಿ ಬುಧವಾರ ಎಕ್ಸ್, ಮೆಟಾ ಮುಂತಾದ ಸೋಷಿಯಲ್ ಮೀಡಿಯಾಗಳ ಭಾರತೀಯ ಪ್ರತಿನಿಧಿಗಳ ಜೊತೆಗೆ ಆನ್‌ಲೈನ್ ಸಭೆ ನಡೆಸಿದ ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಐಟಿ ಸಚಿವಾಲಯದ ಜಂಟಿ ಕಾರ್ಯದರ್ಶಿ ಸಂಕೇತ್ ಎಸ್., ಹುಸಿ ಬಾಂಬ್ ಸಂದೇಶ ತಡೆಗೆ ನೀವು ಏನು ಕ್ರಮ ಕೈಗೊಂಡಿದ್ದೀರಿ? ನಿಮ್ಮ ನಡೆ ಅಪರಾಧವನ್ನು ಬೆಂಬಲಿಸುವುದಕ್ಕೆ ಸಮ.



ನಿಮ್ಮ ವೇದಿಕೆಯನ್ನು ಬಳಸಿ ಕಿಡಿಗೇಡಿಗಳು ರವಾನಿಸುತ್ತಿರುವ ಸಂದೇಶಗಳಿಂದ ಏರ್‌ಲೈನ್ಸ್ ಹಾಗೂ ಪ್ರಯಾಣಿಕರಿಗೆ ಆಗುತ್ತಿರುವ ಸಮಸ್ಯೆಯ ತೀವ್ರತೆ ಅರಿವಿದೆಯೇ ಎಂದು ತೀವ್ರವಾಗಿ ತರಾಟೆ ತೆಗೆದುಕೊಂಡರು ಎಂದು ಮೂಲಗಳು ತಿಳಿಸಿವೆ.

ಸರ್ಕಾರಿ ಸ್ವಾಮ್ಯದ ಏರೋಸ್ಪೇಸ್ ಸಂಸ್ಥೆ ಮೇಲೆ ಉಗ್ರರ ದಾಳಿ; 4 ಸಾವು

ಟರ್ಕಿ: ಬುಧವಾರ ಟರ್ಕಿಯ ಸರ್ಕಾರಿ ಏರೋಸ್ಪೇಸ್ ಮತ್ತು ರಕ್ಷಣಾ ಕಂಪನಿ ಟುಸಾಸ್ ಆವರಣದಲ್ಲಿ ಇಬ್ಬರು ಭಯೋತ್ಪಾದಕರು ದಾಳಿ ನಡೆಸಿದ ಪರಿಣಾಮ 4 ಮಂದಿ ಸಾವನ್ನಪ್ಪಿದ್ದು ಹದಿನಾಲ್ಕು ಮಂದಿ ಗಾಯಗೊಂಡಿದ್ದಾರೆ.

ಟರ್ಕಿಯ ಆಂತರಿಕ ಸಚಿವ ಅಲಿ ಯೆರ್ಲಿಕಾಯಾ ಅವರು ಎಕ್ಸ್ ಪೋಸ್ಟ್ ಮೂಲಕ ಈ ದಾಳಿಯನ್ನು ಖಚಿತಪಡಿಸಿದ್ದಾರೆ. ಇಬ್ಬರು ದಾಳಿಕೋರರು, ಒಬ್ಬ ಪುರುಷ ಮತ್ತು ಮಹಿಳೆ ಕೂಡ ಸಾವನ್ನಪ್ಪಿದ್ದಾರೆ ಎಂದು ಆಂತರಿಕ ಸಚಿವ ಅಲಿ ಯರ್ಲಿಕಾಯಾ ತಿಳಿಸಿದ್ದಾರೆ.

ನಮ್ಮಲ್ಲಿ ನಾಲ್ವರು ಹುತಾತ್ಮರಿದ್ದಾರೆ. 14 ಮಂದಿ ಗಾಯಗೊಂಡಿದ್ದಾರೆ. ಈ ಭೀಕರ ಭಯೋತ್ಪಾದಕ ದಾಳಿಯನ್ನು ನಾನು ಖಂಡಿಸುತ್ತೇನೆ ಎಂದು ಎರ್ಡೋಗನ್ ರಷ್ಯಾದಲ್ಲಿ ನಡೆದ ಬ್ರಿಕ್ಸ್ ಸಭೆಯ ನಡುವೆ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರನ್ನು ಭೇಟಿಯಾದ ಸಂದರ್ಭದಲ್ಲಿ ಹೇಳಿದರು. ಸ್ಥಳದಲ್ಲಿ ಗುಂಡಿನ ಚಕಮಕಿ ಮುಂದುವರಿದಿದ್ದು, ಕಾಂಪ್ಲೆಕ್ಸ್‌ನಲ್ಲಿರುವ ಕೆಲವು ಸಿಬ್ಬಂದಿಯನ್ನು ಒತ್ತೆಯಾಳಾಗಿ ತೆಗೆದುಕೊಂಡಿರಬಹುದು ಎಂದು ಹೇಳಲಾಗಿದೆ. ಅಂಕಾರಾದ ಕಹ್ರಾಮಂಕಜನ್ ಜಿಲ್ಲೆಯ ಆವರಣದ ಮೇಲೆ ಹೆಲಿಕಾಪ್ಟರ್‌ಗಳು ಹಾರುತ್ತಿರುವುದು ಕಂಡುಬಂದಿದೆ ಎಂದು ಮಾಧ್ಯಮ ವರದಿ ಮಾಡಿದೆ.

ಹೋಂ ಸ್ಟೇ ಹೊಸ ನೀತಿ ಶೀಘ್ರ ಜಾರಿ

• ಪ್ರವಾಸೋದ್ಯಮ ಇಲಾಖೆಯಿಂದ ಕನೆಕ್ಟ್ ಕರ್ನಾಟಕ • ಡಾ.ಕೆ.ವಿ.ರಾಜೇಂದ್ರ ಮಾಹಿತಿ



ಮಡಿಕೇರಿ ಖಾಸಗಿ ರೆಸಾರ್ಟ್‌ನಲ್ಲಿ ನಡೆದ ಕನೆಕ್ಟ್ ಕರ್ನಾಟಕ ಕಾರ್ಯಕ್ರಮವನ್ನು ಪ್ರವಾಸೋದ್ಯಮ ಇಲಾಖೆ ನಿರ್ದೇಶಕ ಡಾ.ಕೆ.ವಿ.ರಾಜೇಂದ್ರ ಹಾಗೂ ಜಿಲ್ಲಾಧಿಕಾರಿ ವೆಂಕಟ ರಾಜಾ ಉದ್ಘಾಟಿಸಿದರು.

ಮಡಿಕೇರಿ, ಅ.24–ರಾಜ್ಯದಲ್ಲಿ ಹೋಂ ಸ್ಟೇ ನಿರ್ವಹಣೆ ಸಂಬಂಧ ನೂತನ ನೀತಿಯನ್ನು ಮುಂದಿನ ಜನವರಿ–ಫೆಬ್ರವರಿಯಲ್ಲಿ ಪ್ರಕಟಿಸಲಾಗುವುದು ಎಂದು ಪ್ರವಾಸೋದ್ಯಮ ಇಲಾಖೆ ನಿರ್ದೇಶಕ ಡಾ.ಕೆ.ವಿ.ರಾಜೇಂದ್ರ ತಿಳಿಸಿದರು.

ನಗರದ ಹೊರವಲಯದ ಖಾಸಗಿ ರೆಸಾರ್ಟ್‌ನಲ್ಲಿ ಗುರುವಾರ ನಡೆದ ಪ್ರವಾಸೋದ್ಯಮ ಇಲಾಖೆ 'ಕನೆಕ್ಟ್ ಕರ್ನಾಟಕ–2024' ಕುರಿತ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪ್ರವಾಸೋದ್ಯಮ ಇಲಾಖೆ ಕಾರ್ಯಚಟುವಟಿಕೆ, ಪ್ರವಾಸೋದ್ಯಮ ನೀತಿ, ಮೂಲಸೌಕರ್ಯ, ಪ್ರವಾಸೋದ್ಯಮ ಕ್ಷೇತ್ರದ ಬೆಳವಣಿಗೆಗೆ ಪೂರಕ ಪ್ರಚಾರಾಂದೋಲನ, ಪ್ರವಾಸಿಗರನ್ನು ಆಕರ್ಷಿಸುವುದು ಹಾಗೂ ಪ್ರವಾಸಿ ಕ್ಷೇತ್ರದ ಪಾಲುಗಾರರಿಗೆ ಉತ್ತೇಜನ ನೀಡುವ ಸಲುವಾಗಿ ಪ್ರಸ್ತುತ ರಾಜ್ಯದ ಪ್ರಮುಖ ಜಿಲ್ಲಾ ಕೇಂದ್ರಗಳನ್ನು ಸಂಪರ್ಕಿಸಿ, ಪ್ರವಾಸಿ ಸಹಭಾಗಿದಾರರನ್ನು ಒಗ್ಗೂಡಿಸುವ ಸಂಬಂಧ ಕನೆಕ್ಟ್ ಕರ್ನಾಟಕ ಕಾರ್ಯಕ್ರಮ ಆಯೋಜಿಸಲಾಗಿದೆ. ಹೋಂ ಸ್ಟೇಗಳಿಗೆ ಸಂಬಂಧಿಸಿದಂತೆ ಒಂದು ನೀತಿ ಬೇಕಿದೆ ಎಂದು ಹಲವು ದಶಕಗಳಿಂದ ಕೇಳಿ ಬರುತ್ತಿದ್ದು, ಈ ಹಿನ್ನೆಲೆ ಸರ್ಕಾರದ ಮಟ್ಟದಲ್ಲಿ ಚರ್ಚೆ ನಡೆದಿದೆ. ಮುಂದಿನ ಜನವರಿಯಲ್ಲೇ ಹೋಂ ಸ್ಟೇಗಳಿಗೆ ಹೊಸ ನೀತಿಯನ್ನು ಸರ್ಕಾರ ಘೋಷಿಸಲಿದೆ ಎಂದು ಮಾಹಿತಿ ನೀಡಿದರು.

ಮಾಲೀಕರು ವಾಸಿಸುವ ಸ್ಥಳದಲ್ಲೇ ಹೋಂ ಸ್ಟೇಗಳು ಇರುವುದರಿಂದ ಅವುಗಳ ನಿರ್ವಹಣೆ, ನೋಂದಣಿ ಪ್ರಕ್ರಿಯೆ, ಎನ್‌ಓಸಿ ಪಡೆಯುವುದು ಮತ್ತಿತರ ಮಾರ್ಗಸೂಚಿಯನ್ನು ಹೊಸ ಹೋಂ ಸ್ಟೇ ನೀತಿಯಲ್ಲಿ ಪ್ರಕಟಿಸಲಾಗುವುದು. ಹೋಂ ಸ್ಟೇಗಳನ್ನು ನೋಂದಣಿ ಮಾಡಿಕೊಂಡು ಪ್ರವಾಸಿಗರಿಗೆ ಉತ್ತಮ ಸೌಲಭ್ಯ ಕಲ್ಪಿಸಬೇಕು. ಅಂತಹ ಹೋಂ ಸ್ಟೇಗಳಿಗೆ ಆದಷ್ಟು ಸಹಕಾರ, ಪ್ರೋತ್ಸಾಹ ನೀಡಲಾಗುವುದು. ಆ ನಿಟ್ಟಿನಲ್ಲಿ ಮೂಲ ಸೌಕರ್ಯಕ್ಕೆ ಹೆಚ್ಚಿನ ಒತ್ತು ನೀಡಬೇಕು ಎಂದು ಸೂಚಿಸಿದರು.

ರಾಜ್ಯದಲ್ಲಿ ಪ್ರವಾಸೋದ್ಯಮವನ್ನು ಮತ್ತಷ್ಟು ಅಭಿವೃದ್ಧಿ ಪಡಿಸುವಲ್ಲಿ ವೃತ್ತಿ ಕೌಶಲ ತರಬೇತಿಯನ್ನು ಹಮ್ಮಿಕೊಂಡು ಯುವಜನರಿಗೆ ಉದ್ಯೋಗ ಕಲ್ಪಿಸುವಲ್ಲಿ ಒತ್ತು ನೀಡಲು ಮುಂದಾಗಲಾಗಿದೆ. ಸ್ಥಳೀಯವಾಗಿ ಯುವಜನರಿಗೆ ಉದ್ಯೋಗ ಕಲ್ಪಿಸುವಲ್ಲಿ ಪ್ರವಾಸೋದ್ಯಮ ಸಾಕಷ್ಟು ಸಹಕಾರಿಯಾಗಿದ್ದು, ಆ ನಿಟ್ಟಿನಲ್ಲಿ ಕೌಶಲ ತರಬೇತಿಯನ್ನು ಪ್ರತಿ ಜಿಲ್ಲೆಯಲ್ಲೂ ಆಯೋಜಿಸಲಾಗುವುದು. ಪ್ರವಾಸೋದ್ಯಮ ಅಭಿವೃದ್ಧಿಯಿಂದ ಸರ್ಕಾರಕ್ಕೂ ಆದಾಯ ಬರಲಿದ್ದು, ತೆರಿಗೆ ಸಂಗ್ರಹವಾಗಲಿದೆ. ಜೊತೆಗೆ ಉದ್ಯೋಗ ಸೃಷ್ಟಿಯಾಗಲಿದೆ. ಆ ನಿಟ್ಟಿನಲ್ಲಿ ಯುವಜನರಿಗೆ ಅವಕಾಶಗಳು ಒದಗಲಿವೆ ಎಂದರು.

ಪ್ರವಾಸೋದ್ಯಮ ಕ್ಷೇತ್ರದಲ್ಲಿ ರಾಜ್ಯ 10ನೇ ಸ್ಥಾನದೊಳಗಿದೆ. ರಾಜ್ಯದಲ್ಲಿ ಕೊಡಗು ಪ್ರವಾಸೋದ್ಯಮ ಕ್ಷೇತ್ರದಲ್ಲಿ ಮೂರನೇ ಸ್ಥಾನದಲ್ಲಿದ್ದು, ಮೈಸೂರು, ವಿಜಯನಗರದ ಹಂಪಿ, ಕೊಡಗು, ಚಿಕ್ಕಮಗಳೂರು, ವಿಜಯಪುರ, ದಕ್ಷಿಣಕನ್ನಡ, ಉಡುಪಿ, ಉತ್ತರಕನ್ನಡ, ಚಾಮರಾಜನಗರ ಹೀಗೆ ವಿವಿಧ ಪ್ರವಾಸಿ ಸ್ಥಳಗಳು ಪ್ರವಾಸಿಗರನ್ನು ಆಕರ್ಷಣೀಯಗೊಳಿಸಲಿವೆ ಎಂದು ತಿಳಿಸಿದರು.

ಜನವರಿಯಲ್ಲಿ ಕಾಫಿ ಟೇಬಲ್ ಬಿಡುಗಡೆ

ಕೊಡಗು ಜಿಲ್ಲೆಯಲ್ಲಿ ಪ್ರವಾಸೋದ್ಯಮ ಕ್ಷೇತ್ರದ ಮತ್ತಷ್ಟು ಅಭಿವೃದ್ಧಿಗೆ ಪ್ರತಿಯೊಬ್ಬರೂ ಯೋಚಿಸಬೇಕು. ಆ ನಿಟ್ಟಿನಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಪಡಿಸುವಲ್ಲಿ 'ಕಾಫಿ ಟೇಬಲ್ ಬುಕ್' ಅನ್ನು ಜನವರಿಯಲ್ಲಿ ಬಿಡುಗಡೆ ಮಾಡಲಾಗುವುದು ಎಂದು ಜಿಲ್ಲಾಧಿಕಾರಿ ವೆಂಕಟ ರಾಜಾ ತಿಳಿಸಿದರು.

ಪ್ರವಾಸೋದ್ಯಮ ಕ್ಷೇತ್ರದಲ್ಲಿ ಕೊಡಗು ಹೆಸರುವಾಸಿಯಾಗಿದೆ. ಇಲ್ಲಿನ ರಾಜಾಸೀಟು, ಮಾಂದಲ್‌ಪಟ್ಟಿ ಪ್ರವಾಸಿ ಸ್ಥಳಗಳು ಹೆಚ್ಚು ಆಕರ್ಷಣೀಯವಾಗಿದೆ. ವಿವಿಧ ಜಲಪಾತಗಳು, ಕಾಫಿ, ಸಾಕಾನೆ ಶಿಬಿರ, ನಗರದ ಕೋಟೆ ಸಹ ಪ್ರಸಿದ್ಧ ತಾಣವಾಗಿದೆ. ಪ್ರವಾಸಿ ಸ್ಥಳಗಳಲ್ಲಿ ಕುಡಿಯುವ ನೀರು, ಶೌಚಾಲಯ, ವಾಹನ ನಿಲುಗಡೆಗೆ ವ್ಯವಸ್ಥೆ ಹೀಗೆ ಮತ್ತಿತರ 'ಡೆಸ್ಟಿನೇಷನ್ ಟೂರಿಸಂಗೆ' ಒತ್ತು ನೀಡುವುದು ಅತ್ಯಗತ್ಯ. ಕೊಡಗಿನಲ್ಲಿ ಮುಂದಿನ ಎರಡು ವರ್ಷದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ಪಡಿಸುವಲ್ಲಿ ಈಗಿನಿಂದಲೇ ಯೋಜನೆ ರೂಪಿಸಬೇಕಿದೆ. ಪರಿಸರ ಪ್ರವಾಸೋದ್ಯಮಕ್ಕೆ ಒತ್ತು ನೀಡಬೇಕಿದೆ ಎಂದರು.

ಪ್ರವಾಸೋದ್ಯಮ ಇಲಾಖೆ ಉಪನಿರ್ದೇಶಕಿ ಅನಿತಾ ಭಾಸ್ಕರ್, ಕರ್ನಾಟಕ ಪ್ರವಾಸೋದ್ಯಮ ಸಂಸ್ಥೆಯ ಪ್ರತಿನಿಧಿ ಮೋಂತಿ ಗಣೇಶ್, ಜಿಲ್ಲಾ ಚೇಂಬರ್ ಆಫ್ ಕಾಮರ್ಸ್ ಅಧ್ಯಕ್ಷ ನಾಗೇಂದ್ರ ಪ್ರಸಾದ್, ಪ್ರವಾಸೋದ್ಯಮ ಸಂಘದ ಗೌರವ ಸಲಹೆಗಾರ ಹೆಚ್.ಟಿ.ಅನಿಲ್, ಅಧ್ಯಕ್ಷ ಕೆ.ಶ್ಯಾಮ ರಾಜ್, ಕರ್ನಾಟಕ ಹೋಟೆಲ್ ಅಸೋಸಿಯೇಷನ್ ಅಧ್ಯಕ್ಷ ಜಿ.ಕೆ.ಶೆಟ್ಟಿ, ಸದಸ್ಯ ಅಯ್ಯಪ್ಪ ಸೋಮಯ್ಯ, ಬೆಂಗಳೂರು ಹೋಟೆಲ್ ಅಸೋಸಿಯೇಷನ್ ಅಧ್ಯಕ್ಷ ಪಿ.ಸಿ.ರಾವ್, ಜಿಲ್ಲಾಧ್ಯಕ್ಷ ದಿನೇಶ್ ಕಾರ್ಯಪ್ಪ, ಜಿಲ್ಲಾ ಸಲಹೆಗಾರ ಜಿ.ಚಿದ್ವಿಲಾಸ್, ಜಾನಪದ ಪರಿಷತ್ ಜಿಲ್ಲಾಧ್ಯಕ್ಷ ಬಿ.ಜಿ.ಅನಂತ ಶಯನ, ಜಿಲ್ಲಾ ಹೋಟೆಲ್ ಅಸೋಸಿಯೇಷನ್ ಕಾರ್ಯದರ್ಶಿ ನಾಜೀರ್, ಜಿಲ್ಲಾ ಟೂರ್ ಅಂಡ್ ಟ್ರಾವೆಲ್ ಸಂಸ್ಥೆ ಅಧ್ಯಕ್ಷ ವಸಂತ, ಛಾಯಾ ನಂಜಪ್ಪ, ಕರ್ನಾಟಕ ಪ್ಲಾಂಟರ್ ಅಸೋಸಿಯೇಷನ್ ಸದಸ್ಯ ಮೋಹನ್ ದಾಸ್, ಪ್ರವಾಸೋದ್ಯಮ ಇಲಾಖೆಯ ಪ್ರವಾಸಿ ಸಮಾಲೋಚಕ ಜತಿನ್ ಬೋಪಣ್ಣ ಇತರರು ಇದ್ದರು.

ಪ್ರಿಯತಮೆ ಆಯಿಷಾಳ ಪತಿಯ ಕೊಲೆಗೆ ಯತ್ನಿಸಿದ

ಪೇದೆ, ಆತನ ಪ್ರೇಯಸಿ ಬಂಧನ


ಕೊಟ್ರೇಶ್


ಆಯಿಷಾ

ಮಡಿಕೇರಿ, ಅ.24–ಪೊಲೀಸ್ ಪೇದೆ ತನ್ನ ಪ್ರೇಯಸಿ ಪತಿಯ ಕೊಲೆಗೆ ಯತ್ನಿಸಿರುವ ಘಟನೆ ಸೋಮವಾರಪೇಟೆ ತಾಲೂಕಿನ ಶನಿವಾರಸಂತೆಯಲ್ಲಿ ನಡೆದಿದೆ.

ಪೇದೆ ಕೊಟ್ರೇಶ್ (30) ಮತ್ತು ಕೊಲೆಗೆ ಕುಮ್ಮಕ್ಕು ನೀಡಿದ ಪ್ರಿಯತಮೆ ಆಯಿಷಾ (29)ಳನ್ನು ಪೊಲೀಸರು ಬಂಧಿಸಿದ್ದಾರೆ.

ಹಾವೇರಿ ಮೂಲದ ಕೊಟ್ರೇಶ್ ಶನಿವಾರಸಂತೆ ಪೊಲೀಸ್ ಠಾಣೆಯಲ್ಲಿ ಪೇದೆಯಾಗಿದ್ದು, ಪ್ರೇಯಸಿ ಆಯಿಷಾಳ ಪಕ್ಕದ ಮನೆಯಲ್ಲಿ ವಾಸವಾಗಿದ್ದಾನೆ. ಶನಿವಾರಸಂತೆ ನಿವಾಸಿ ಇಫ್ರಾಜ್ ಅವರು 6 ವರ್ಷಗಳ ಹಿಂದೆ ಆಯಿಷಾಳನ್ನು ವಿವಾಹವಾಗಿದ್ದು, ದಂಪತಿಗೆ ಒಂದೂವರೆ ವರ್ಷದ ಮಗುವಿದೆ. ಆದರೆ, ಪತಿ–ಪತ್ನಿ ಜಗಳವಾಡಿ ಹಲವು ಬಾರಿ ಪೊಲೀಸ್ ಠಾಣೆ ಮೆಟ್ಟಿಲೇರಿದ್ದರು ಎನ್ನಲಾಗಿದೆ.

ಆಯಿಷಾ ಪೇದೆ ಕೊಟ್ರೇಶ್‌ನನ್ನು ಅ.22ರ ಮಧ್ಯರಾತ್ರಿ ಮನೆಗೆ ಕರೆಸಿದ್ದು, ಬಳಿಕ ಕೊಟ್ರೇಶ್ ದಿಂಬಿನಿಂದ ಉಸಿರುಗಟ್ಟಿಸಿ ಆಯಿಷಾಳ ಪತಿ ಇಫ್ರಾಜ್‌ನನ್ನು ಕೊಲೆ ಮಾಡಲು ಯತ್ನಿಸಿದ್ದಾನೆ. ಈ ವೇಳೆ ಇಫ್ರಾಜ್ ಜೋರಾಗಿ ಕೂಗಿಕೊಂಡಿದ್ದು, ಪಕ್ಕದ ಕೋಣೆಯಲ್ಲಿ ಮಲಗಿದ್ದ ಇಫ್ರಾಜ್ ಅಕ್ಕನ ಮಗ ಬಂದು ಬಾಗಿಲು ಒಡೆದು ರಕ್ಷಿಸಿದ್ದಾನೆ. ಇಫ್ರಾಜ್, ಕೊಟ್ರೇಶ್‌ನ ಬೆರಳು ಕಚ್ಚಿ ಓಡಿ ಹೋಗಿದ್ದು, ಇಫ್ರಾಜ್ ಶನಿವಾರಸಂತೆ ಉಪಠಾಣೆಗೆ ದೂರು ನೀಡಲು ಮುಂದಾದಾಗ ಪೊಲೀಸರು ಪ್ರಕರಣ ದಾಖಲಿಸಿಕೊಳ್ಳಲು ಹಿಂದೇಟು ಹಾಕಿದ್ದರು.

ಬಳಿಕ ಇಫ್ರಾಜ್ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಅವರನ್ನು ನೇರವಾಗಿ ಭೇಟಿ ಮಾಡಿ, ದೂರು ನೀಡಿ ಸೋಮವಾರಪೇಟೆ ಪೊಲೀಸರ ನಿರ್ಲಕ್ಷ್ಯದ ಬಗ್ಗೆ ತಿಳಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಪ್ರಕರಣದ ಬಗ್ಗೆ ವಿಚಾರಣೆ ನಡೆಸುವಂತೆ ಎಸ್‌ಪಿ ರಾಮರಾಜನ್ ಶನಿವಾರಸಂತೆ ಠಾಣಾ ಪೊಲೀಸರಿಗೆ ಸೂಚಿಸಿದ್ದಾರೆ. ಇದರಿಂದ ಎಚ್ಚೆತ್ತ ಪೊಲೀಸರು ಕೊಲೆ ಯತ್ನದ ದೂರು ದಾಖಲಿಸಿಕೊಂಡಿದ್ದಾರೆ.

ಇಫ್ರಾಜ್ ಶನಿವಾರಸಂತೆ ಠಾಣೆಗೆ ದೂರು ನೀಡಲು ತೆರಳಿದಾಗ ಅಲ್ಲೇ ಇದ್ದ ಪೇದೆ ಕೊಟ್ರೇಶ್ ಅಸಹಜವಾಗಿ ವರ್ತಿಸಲು ಶುರು ಮಾಡಿದ್ದಾನೆ. ತನ್ನ ಕೈ ಬೆರಳನ್ನು ಮುಚ್ಚಿಕೊಳ್ಳಲು ಹೆಣಗಾಡಿದ್ದಾನೆ. ಈ ಸಂದರ್ಭ ಇಫ್ರಾಜ್ ಕೊಟ್ರೇಶ್‌ನ ಬೆರಳನ್ನು ನೋಡಿದಾಗ ಗಾಯವಾಗಿರುವು ಕಂಡು ಬಂದಿದೆ. ಅಲ್ಲದೆ, ಕೊಲೆ ಯತ್ನ ಸಂದರ್ಭದಲ್ಲಿ ಕೊಟ್ರೇಶ್ ಓಡಿ ಹೋಗುವಾಗ ಸ್ಥಳದಲ್ಲಿ ಚಪ್ಪಲಿ ಬಿಟ್ಟು ಹೋಗಿದ್ದಾನೆ.

ಪೇದೆ ತೊಟ್ಟಿದ್ದ ಶೂ ಸೈಜ್ ಮತ್ತು ಆ ಚಪ್ಪಲಿಯ ಸೈಜ್ ಹೊಂದಾಣಿಕೆಯೂ ಆಗಿದೆ. ಅಲ್ಲದೆ, ಕೊಲೆ ಯತ್ನ ಸಂದರ್ಭದಲ್ಲಿ ಆರೋಪಿ, ಪೊಲೀಸರು ಧರಿಸುವ ನೀಲಿ ಬಣ್ಣದ ಕ್ರೀಡಾ ಜರ್ಕಿನ್ ಧರಿಸಿದ್ದು ನೆನಪಿಗೆ ಬಂದಿದೆ. ಕೊಟ್ರೇಶ್, ಆಯಿಷಾಳ ತಂದೆ–ತಾಯಿ ನೆಲೆಸಿರುವ ಕಟ್ಟಡದಲ್ಲೇ ಬಾಡಿಗೆ ಮನೆಯಲ್ಲಿ ವಾಸವಾಗಿದ್ದು, ತನ್ನ ಮೇಲೆ ದಾಳಿ ಮಾಡಿದ್ದು ಈತನೇ ಎಂದು ಇಫ್ರಾಜ್‌ಗೆ ಸ್ಪಷ್ಟವಾಗಿದೆ. ಈ ವಿಚಾರವನ್ನು ಠಾಣಾಧಿಕಾರಿಗೆ ತಿಳಿಸಿದ ಹಿನ್ನೆಲೆಯಲ್ಲಿ ಪೊಲೀಸರು ಕೊಟ್ರೇಶ್‌ನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ ಸಂದರ್ಭ ಆತ ನಡೆದ ಘಟನೆಯನ್ನು ಪೊಲೀಸರಿಗೆ ವಿವರಿಸಿದ್ದಾನೆ.

ಈ ಹಿನ್ನೆಲೆಯಲ್ಲಿ ಕೊಲೆ ಯತ್ನ ಆರೋಪದಲ್ಲಿ ಪೇದೆ ಕೊಟ್ರೇಶ್ ಮತ್ತು ಇದಕ್ಕೆ ಕುಮ್ಮಕ್ಕು ನೀಡಿದ ಇಫ್ರಾಜ್ ಪತ್ನಿ ಆಯಿಷಾಳನ್ನು ಪೊಲೀಸರು ಬಂಧಿಸಿ ಜೈಲಿಗಟ್ಟಿದ್ದಾರೆ.

ಕೊಟ್ರೇಶ್‌ಗೆ ನವೆಂಬರ್‌ನಲ್ಲಿ ಮದುವೆ ನಿಗದಿಯಾಗಿತ್ತು ಎಂದು ತಿಳಿದು ಬಂದಿದೆ. ಕೊಲೆ ಯತ್ನ ಪ್ರಕರಣದ ಸೂಕ್ತ ತನಿಖೆ ನಡೆಸಿ ನ್ಯಾಯ ಒದಗಿಸುವಂತೆ ಇಫ್ರಾಜ್ ಕುಟುಂಬ ಮನವಿ ಮಾಡಿದೆ.

ಪಾಡಿ ಇಗುತಪ್ಪ ಸನ್ನಿಧಿಯಲ್ಲಿ ಕಾಮಗಾರಿಗೆ ಚಾಲನೆ


ಕಕ್ಕಬ್ಬೆ ಪಾಡಿ ಇಗುತಪ್ಪ ದೇವಸ್ಥಾನದಲ್ಲಿ ಚಾವಣಿ ನಿರ್ಮಾಣ ಕಾಮಗಾರಿಗೆ ಪೂಜೆ ಸಲ್ಲಿಸಿ ಚಾಲನೆ ನೀಡಲಾಯಿತು.

ನಾಪೋಕ್ಲು, ಅ.24– (ದುಗ್ಗಳ) ಸಮೀಪದ ಕಕ್ಕಬ್ಬೆಯ ಪಾಡಿ ಶ್ರೀ ಇಗುತಪ್ಪ ದೇವರ ಸನ್ನಿಧಿಯಲ್ಲಿ ಭಕ್ತ ಜನ ಸಂಘದ ವತಿಯಿಂದ ಚಾವಣಿ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಲಾಯಿತು.

ದೇವಾಲಯ ಮುಖ್ಯ ದ್ವಾರದಿಂದ ನಾಗನಕಟ್ಟೆವರೆಗೆ 12 ಲಕ್ಷ ರೂ. ವೆಚ್ಚದಲ್ಲಿ ಭಕ್ತರ ರಕ್ಷಣೆಗೆ ಹಾದಿ ಉದ್ದಕ್ಕೂ ಅಲ್ಯೂಮಿನಿಯಂ ಫ್ಯಾಬ್ರಿಕೇಷನ್ ಮತ್ತು ಹಂಚಿನ ಚಾವಣಿ ನಿರ್ಮಾಣಕ್ಕೆ ಭಕ್ತ ಜನ ಸಂಘದ ಅಧ್ಯಕ್ಷರಾದ ಅಖಿಲ ಕೊಡವ ಸಮಾಜ ಅಧ್ಯಕ್ಷ ಪರದಂಡ ಸುಬ್ರಮಣಿ ಕಾವೇರಪ್ಪ ಪ್ರಾರ್ಥನೆ ಸಲ್ಲಿಸಿ ಕಾಮಗಾರಿಗೆ ಚಾಲನೆ ನೀಡಿದರು. ಪೂಜಾ ವಿಧಿ ವಿಧಾನಗಳನ್ನು ಅರ್ಚಕ ಜಗದೀಶ್ ಪ್ರಸಾದ್ ನೆರವೇರಿಸಿದರು.

ಇದೇ ವೇಳೆ ಸಂಘದ ಉಪಾಧ್ಯಕ್ಷ ಕಲ್ಯಾಟಂಡ ರಾಜ ಅಪ್ಪಣ್ಣ, ಕಾರ್ಯದರ್ಶಿ ಬಟ್ಟೀರ ಚೊಂದಮ್ಮ ಮೇದಪ್ಪ, ಖಜಾಂಚಿ ಅಂಜಪರವಂಡ ಕುಶಾಲಪ್ಪ, ನಿರ್ದೇಶಕರಾದ ಪರದಂಡ ಸದಾ ನಾಣಯ್ಯ, ಕುಲೇಟೀರ ಅರುಣ್ ಬೇಬ, ಕುಲೇಟೀರ ರಂಜನ್, ಕಂಬೆಯಂಡ ಬೊಳ್ಳಪ್ಪ, ಕಂಬೆಯಂಡ ಗಣೇಶ್ ಉಪಸ್ಥಿತರಿದ್ದರು.

ಕಿಡಿಗೇಡಿಗಳಿಂದ ಶಾಲಾ ಸಿಸಿ ಕ್ಯಾಮರಾ ನಾಶ



ಗೋಣಿಕೊಪ್ಪಲಿನ ಶಾಲಾ ಆವರಣದಲ್ಲಿದ್ದ ಸಿಸಿ ಕ್ಯಾಮರಾವನ್ನು ಕಿಡಿಗೇಡಿಗಳು ನಾಶಪಡಿಸಿರುವುದು.


ಮಡಿಕೇರಿ, ಅ.24– ಶಾಲಾ ಆವರಣದಲ್ಲಿದ್ದ ಸಿಸಿ ಕ್ಯಾಮರಾವನ್ನು ಕಿಡಿಗೇಡಿಗಳು ನಾಶಪಡಿಸಿರುವ ಘಟನೆ ಗೋಣಿಕೊಪ್ಪಲಿನಲ್ಲಿ ನಡೆದಿದೆ.

ಗೋಣಿಕೊಪ್ಪಲು ಗ್ರಾಮ ಪಂಚಾಯಿತಿಯಿಂದ ಸ್ಥಳೀಯ ಸರ್ಕಾರಿ ಮಾದರಿ ಪ್ರಾಥಮಿಕ ಶಾಲಾ ಆವರಣದಲ್ಲಿ 4 ಸಿಸಿ ಕ್ಯಾಮರಾಗಳನ್ನು ಅಳವಡಿಸಲಾಗಿತ್ತು. ಬುಧವಾರ ರಾತ್ರಿ ಶಾಲೆ ಹಿಂಭಾಗದ ಗೇಟ್‌ನಿಂದ ಪ್ರವೇಶಿಸಿರುವ ಕಿಡಿಗೇಡಿಗಳು ಸಿಸಿ ಕ್ಯಾಮರಾ ಒಂದನ್ನು ನಾಶಪಡಿಸಿದ್ದಾರೆ. ಅಲ್ಲದೆ, ಪಠ್ಯೇತರ ಚಟುವಟಿಕೆಗೆ ಅನುಗುಣವಾಗಿ ಶಾಲಾ ವಿದ್ಯಾರ್ಥಿಗಳು ತಯಾರಿಸಿದ್ದ ವಿಜ್ಞಾನ ಮಾದರಿಗಳನ್ನು ಶಾಲಾ ಕಟ್ಟಡ ಮೇಲಿನಿಂದ ಕೆಳಕ್ಕೆ ಬಿಸಾಡಿ ಧ್ವಂಸಗೊಳಿಸಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಶಾಲಾ ಮುಖ್ಯಶಿಕ್ಷಕ ಹೆಚ್.ಕೆ.ಕುಮಾರ್ ಪೊಲೀಸರಿಗೆ ದೂರು ನೀಡಿದ್ದಾರೆ.

ಈ ಹಿಂದೆಯೂ ಶಾಲಾ ಆವರಣದಲ್ಲಿ ಕಿಡಿಗೇಡಿಗಳು ಮದ್ಯಪಾನ, ಧೂಮಪಾನ ಮಾಡುತ್ತಿದ್ದ ಬಗ್ಗೆ ಪೊಲೀಸರಿಗೆ ದೂರು ನೀಡಲಾಗಿತ್ತು. ಆ ವೇಳೆ ಪೊಲೀಸರು ಗಸ್ತು ಹೆಚ್ಚಿದ್ದರಿಂದ ಕಿಡಿಗೇಡಿಗಳ ಕೃತ್ಯಕ್ಕೆ ಕಡಿವಾಣ ಬಿದ್ದಿತ್ತು. ಇದೀಗ ಮತ್ತೆ ಪುಂಡರು ಕಿಡಿಗೇಡಿ ಕೃತ್ಯದಲ್ಲಿ ತೊಡಗಿಕೊಂಡಿದ್ದು, ಶಾಲೆ ಬಳಿ ಪೊಲೀಸ್ ಗಸ್ತು ಹೆಚ್ಚಿಸುವಂತೆ ಮುಖ್ಯಶಿಕ್ಷಕ ಹೆಚ್.ಕೆ.ಕುಮಾರ್ ಮನವಿ ಮಾಡಿದರು.

ಸುವರ್ಣಾವತಿ ಜಲಾಶಯದಿಂದ 150 ಕ್ಯೂಸೆಕ್ ನೀರು ಬಿಡುಗಡೆ

ಸುರಕ್ಷಿತ ಸ್ಥಳಗಳಿಗೆ ತೆರಳಲು ಸೂಚನೆ


ಸುವರ್ಣಾವತಿ ಜಲಾಶಯದಿಂದ 150 ಕ್ಯೂಸೆಕ್ ಹೊರ ಬಿಡಲಾಗಿರುವುದು.

ಚಾಮರಾಜನಗರ, ಅ.24–ಸುವರ್ಣಾವತಿ ಜಲಾಶಯ ಯಾವುದೇ ಸಮಯದಲ್ಲಿ ಭರ್ತಿಯಾಗಬಹುದಾಗಿದ್ದು, ನದಿ ಪಾತ್ರ ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರು ಮುನ್ನೆಚ್ಚರಿಕೆಯಾಗಿ ಸುರಕ್ಷಿತ ಸ್ಥಳಗಳಿಗೆ ತೆರಳುವಂತೆ ಸೂಚಿಸಲಾಗಿದೆ.

ಜಲಾನಯನ ಪ್ರದೇಶದಲ್ಲಿ ಹೆಚ್ಚು ಮಳೆಯಾಗುತ್ತಿದ್ದು, ಜಲಾಶಯದ ನೀರಿನ ಸಾಮರ್ಥ್ಯ ಗರಿಷ್ಠ ಮಟ್ಟ ತಲುಪುವ ಹಂತದಲ್ಲಿದೆ. ಯಾವುದೇ ಸಮಯದಲ್ಲಿ ಭರ್ತಿಯಾಗಬಹುದಾಗಿದೆ. ಗುರುವಾರ ಸಂಜೆ 6 ಗಂಟೆಯಲ್ಲಿ ಜಲಾಶಯದಿಂದ 150 ಕ್ಯೂಸೆಕ್ ಹೊರ ಬಿಡಲಾಗಿದೆ.

ಈ ಹಿನ್ನೆಲೆಯಲ್ಲಿ ತಾಲೂಕಿನ ಹರದನಹಳ್ಳಿ ಹೋಬಳಿಯ ಅಟ್ಟಗೂಳಿಪುರದ ಹತ್ತಿರದ ಸುವರ್ಣಾವತಿ ಜಲಾಶಯ ಯೋಜನೆ ಅಚ್ಚುಕಟ್ಟು ಪ್ರದೇಶ ಹಾಗೂ ನದಿ ಪಾತ್ರದ ರೈತರು ಮತ್ತು ಸುತ್ತಮುತ್ತಲ ಗ್ರಾಮಸ್ಥರು ಮುನ್ನೆಚ್ಚರಿಕೆಯಾಗಿ ಸುರಕ್ಷಿತ ಸ್ಥಳಗಳಿಗೆ ತೆರಳಬೇಕು. ಆಸ್ತಿ–ಪಾಸ್ತಿ ಮತ್ತು ಜಾನುವಾರುಗಳ ಬಗ್ಗೆ ನಿಗಾ ವಹಿಸಬೇಕು ಎಂದು ಕಾವೇರಿ ನೀರಾವರಿ ನಿಗಮದ ಕಬಿನಿ ನಾಲಾ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ತಿಳಿಸಿದ್ದಾರೆ.

ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಪುರಸ್ಕೃತರಿಗೆ ಸನ್ಮಾನ...


ಚಾಮರಾಜನಗರ ರೋಟರಿ ಭವನದಲಿ ನಡೆದ ಕಾರ್ಯಕ್ರಮದಲಿ ಜಿಲಾ ಮಟ್ಟದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಪುರಸ್ಕೃತರಾದ ಬಿ.ಕೃಷ್ಣಮೂರ್ತಿ, ಸಿ.ಎಸ್.ಮಹದೇವಸ್ವಾಮಿ, ಸಿದ್ದರಾಜು ಅವರನ್ನು ಸನ್ಮಾನಿಸಲಾಯಿತು. ರೋಟರಿ ಅಧ್ಯಕ್ಷ ರಾಮಸಮುದ್ರ ನಾಗರಾಜು, ಕಾರ್ಯದರ್ಶಿ ಹೆಚ್.ಎಂ.ಗುರುಸ್ವಾಮಿ, ಖಜಾಂಚಿ ಆರ್.ಎಂ.ಸ್ವಾಮಿ, ರೋಟರಿ ಸಂಸ್ಥಾಪಕ ಶ್ರೀನಿವಾಸಶೆಟ್ಟಿ, ಶಿಕ್ಷಕರಾದ ಸಿದ್ದಮಲ್ಲಪ್ಪ, ಕೆಂಪನಪುರ ಸಿದ್ದರಾಜು, ಮಹದೇವಸ್ವಾಮಿ, ಅಂಕಶೆಟ್ಟಿ, ನಂಜುಂಡಸ್ವಾಮಿ, ಅಬ್ದುಲ್ ಅಜೀಜ್, ಪ್ರಭಾಕರ್, ಪ್ರಕಾಶ್, ಸುಭಾಷ್, ಸಂಜಯ್ ಜೈನ್, ಎಸ್‌ಆರ್‌ಎಸ್ ಶ್ರೀನಿವಾಸ, ಯೋಗರಾಜು, ಡಿ.ಪಿ.ಉಲ್ಲಾಸ್ ಇದ್ದರು.

ವಲಯ ಅರಣ್ಯಾಧಿಕಾರಿ ಲೋಕಾಯುಕ್ತ ಬಲೆಗೆ


ಕಾಂತರಾಜ್ ಚೌಹಾಣ್

ಹನೂರು, ಅ.24–ಕೆರೆ ಅಭಿವೃದ್ಧಿ ಕಾಮಗಾರಿಗೆ ಸಂಬಂಧ ಲಂಚ ಸ್ವೀಕರಿಸುವಾಗ ವಲಯ ಅರಣ್ಯಾಧಿಕಾರಿ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ.

ಹನೂರು ತಾಲೂಕಿನ ಕೌದಳ್ಳಿ ವಲಯ ಅರಣ್ಯಾಧಿಕಾರಿ ಕಾಂತರಾಜ್ ಚೌಹಾಣ್ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ. ಮಾರ್ಟಳ್ಳಿ ಗ್ರಾಮ ಪಂಚಾಯಿತಿ ಸದಸ್ಯ ಜೋಸೆಫ್ ಅನ್ಬಳಗನ್ ಅವರು ಮಹಾತ್ಮಾಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ ನಾಲ್‌ರೋಡ್ ಅರಣ್ಯ ವ್ಯಾಪ್ತಿಯಲ್ಲಿ ಮೋರನೂರು ಕೆರೆ ಅಭಿವೃದ್ಧಿ ಪಡಿಸಲು ಅನುಮತಿ ನೀಡುವಂತೆ ವಲಯ ಅರಣ್ಯಾಧಿಕಾರಿ ಕಾಂತರಾಜ್ ಚೌಹಾಣ್ ಅವರಿಗೆ ಮನವಿ ಮಾಡಿದ್ದರು.

ಕೆರೆ ಅಭಿವೃದ್ಧಿಗೆ ಅನುಮತಿ ನೀಡಲು 60 ಸಾವಿರ ರೂ. ಲಂಚಕ್ಕೆ ಕಾಂತರಾಜು ಒತ್ತಾಯಿಸಿದ್ದರಿಂದ ಬೇಸತ್ತ ಗ್ರಾಪಂ ಸದಸ್ಯ ಜೋಸೆಫ್ ಅನ್ಬಳಗನ್ ಲೋಕಾಯುಕ್ತರ ಮೊರೆ ಹೋಗಿದ್ದರು. ಲೋಕಾಯುಕ್ತ ಡಿವೈಎಸ್ಪಿ ಮ್ಯಾಥ್ಯೂ ಥಾಮಸ್ ಮಾರ್ಗದರ್ಶನದಲ್ಲಿ ಇನ್ಸ್‌ಪೆಕ್ಟರ್ ಶಶಿಕುಮಾರ್ ನೇತೃತ್ವದಲ್ಲಿ ಸಿಬ್ಬಂದಿ ಕೌದಳ್ಳಿಯಲ್ಲಿ ಅರಣ್ಯ ಇಲಾಖೆ ಕಚೇರಿಯಲ್ಲಿ ಜೋಸೆಫ್ ಅನ್ಬಳಗನ್ ಅವರಿಂದ 60 ಸಾವಿರ ರೂ. ಲಂಚ ಸ್ವೀಕರಿಸುತ್ತಿದ್ದಾಗ ಕಾಂತರಾಜ್ ಚೌಹಾಣ್‌ನನ್ನು ಬಂಧಿಸಿದ್ದಾರೆ.

ಬಿಪಿಎಲ್ ಕಾರ್ಡ್ ರದ್ದು ಪಡಿಸುವ ಹುನ್ನಾರ ಆರೋಪಿಸಿ

ಸರ್ಕಾರದ ವಿರುದ್ಧ ಕರ್ನಾಟಕ ಸೇನಾ ಪಡೆ ಪ್ರತಿಭಟನೆ


ಬಿಪಿಎಲ್ ಕಾರ್ಡ್ ರದ್ದುಗೊಳಿಸಲು ಸರ್ಕಾರ ಹುನ್ನಾರ ನಡೆಸುತ್ತಿದೆ ಎಂದು ಆರೋಪಿಸಿ ಕರ್ನಾಟಕ ಸೇನಾ ಪಡೆ ಕಾರ್ಯಕರ್ತರು ಚಾಮರಾಜನಗರದಲ್ಲಿ ಪ್ರತಿಭಟನೆ ನಡೆಸಿದರು.

ಚಾಮರಾಜನಗರ, ಅ.24–ರಾಜ್ಯ ಸರ್ಕಾರ ಅವೈಜ್ಞಾನಿಕವಾಗಿ ಬಿಪಿಎಲ್ ಕಾರ್ಡ್ ರದ್ದುಪಡಿಸುವ ಹುನ್ನಾರ ಮಾಡುತ್ತಿದೆ ಎಂದು ಆರೋಪಿಸಿ ಕರ್ನಾಟಕ ಸೇನಾ ಪಡೆ ಕಾರ್ಯಕರ್ತರು ನಗರದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು.

ಚಾಮರಾಜೇಶ್ವರ ಉದ್ಯಾನ ಮುಂಭಾಗದಲ್ಲಿ ಕರ್ನಾಟಕ ಸೇನಾ ಪಡೆ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ ನೇತೃತ್ವದಲ್ಲಿ ಜಮಾಯಿಸಿದ್ದ ಪ್ರತಿಭಟನಾಕಾರರು, ಕನ್ನಡಧ್ವಜ ಹಿಡಿದು ಭುವನೇಶ್ವರಿ ವೃತ್ತದವರೆಗೆ ಮೆರವಣಿಗೆ ನಡೆಸಿದರು. ನಂತರ ಹೆದ್ದಾರಿಯಲ್ಲಿ ಕೆಲಕಾಲ ರಸ್ತೆ ಸಂಚಾರ ತಡೆ ನಡೆಸಿ, ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

ಬಡವರಿಗೆ ಬಿಪಿಎಲ್ ಪಡಿತರ ಚೀಟಿ, ಆಹಾರ ಭದ್ರತೆ, ಜೊತೆಗೆ ಸೌಕರ್ಯ ನೀಡುತ್ತೇವೆ ಎಂದು ಸರ್ಕಾರ ಅವೈಜ್ಞಾನಿಕವಾಗಿ ಬಿಪಿಎಲ್ ಕಾರ್ಡ್‌ಗಳನ್ನು ರದ್ದು ಮಾಡುವ ಮೂಲಕ ಬಡವರ ಹೊಟ್ಟೆ ಮೇಲೆ ಒಡೆಯುವ ಕೆಲಸ ಮಾಡುತ್ತಿದೆ ಎಂದು ಆರೋಪಿಸಿದರು.

ಜನರಿಗೆ ಅವಶ್ಯಕತೆ ಇರುವ ಬಿಪಿಎಲ್ ಕಾರ್ಡ್‌ಗಳನ್ನು ವ್ಯವಸ್ಥಿತವಾಗಿ ರಾಜ್ಯ ಸರ್ಕಾರ ರದ್ದು ಮಾಡಲು ಹೊರಟಿರುವುದು ಅತ್ಯಂತ ಖಂಡನೀಯ. ಒಂದು ಕಡೆ ಸೌಲಭ್ಯ ಕೊಡುವುದು ಮತ್ತೊಂದು ಕಡೆ ಕಿತ್ತುಕೊಳ್ಳುವ ಮೂಲಕ ದ್ವಂದ್ವ ನೀತಿಯನ್ನು ಸರ್ಕಾರ ಅನುಸರಿಸುತ್ತಿದೆ. ಕಳೆದ 4 ದಿನಗಳಿಂದ ಸರ್ವರ್ ಸಮಸ್ಯೆಯಾಗಿದ್ದು, ನ್ಯಾಯಬೆಲೆ ಅಂಗಡಿಗಳ ಮುಂದೆ ಪಡಿತರ ಪಡಿಯಲು ಸಾರ್ವಜನಿಕರು ಸರತಿ ಸಾಲಿನಲ್ಲಿ ಕಾದು ನಿಂತಿದ್ದಾರೆ. ಇದರಿಂದ ಕೂಲಿ ಕಾರ್ಮಿಕರು ಕೆಲಸ ಬಿಟ್ಟು ಪಡಿತರ ಪಡೆಯುವಂತಾಗಿದೆ. ಇದರಿಂದ ಜನರಿಗೆ ತುಂಬಾ ತೊಂದರೆ ಉಂಟಾಗಿದೆ. ಸರ್ಕಾರ ಸರ್ವೇ ಮಾಡಿ ಬಿಪಿಎಲ್ ಕಾರ್ಡ್ ರದ್ದು ಪಡಿಸುವ ಪ್ರಕ್ರಿಯೆಯನ್ನು ಹಿಂಪಡೆಯಬೇಕು. ತೆರಿಗೆದಾರರು, ನೌಕರರನ್ನು ಹೊರತುಪಡಿಸಿ ರಾಜ್ಯದ ಪ್ರತಿ ನಾಗರಿಕನಿಗೂ ಬಿಪಿಎಲ್ ಕಾರ್ಡ್ ನೀಡಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಶಾ.ಮುರಳಿ, ನಿಜಧ್ವನಿ ಗೋವಿಂದರಾಜು, ಪಣ್ಯದಹುಂಡಿ ರಾಜು, ಚಾ.ವೆಂ.ರಾಜ್‌ಗೋಪಾಲ್, ಕಂಡಕ್ಟರ್ ಸೋಮನಾಯಕ, ಚಾ.ರಾ.ಕುಮಾರ್, ನಂಜುಂಡಶೆಟ್ಟಿ, ಮಹೇಶ್‌ಗೌಡ, ಆಟೋ ಲಿಂಗರಾಜು, ರವಿಚಂದ್ರ ಪ್ರಸಾದ್ ಕಹಳೆ, ವೀರಭದ್ರ, ತಾಂಡವಮೂರ್ತಿ, ಚಾ.ಸಿ. ಸಿದ್ದರಾಜು ಇತರರು ಭಾಗವಹಿಸಿದ್ದರು.

ಅರ್ಥಪೂರ್ಣ ರಾಜ್ಯೋತ್ಸವ ಆಚರಣೆಗೆ ನಿರ್ಧಾರ


ಯಳಂದೂರು ತಾಲೂಕು ಕಚೇರಿಯಲ್ಲಿ ತಹಸೀಲ್ದಾರ್ ಜಯಪ್ರಕಾಶ್ ಅಧ್ಯಕ್ಷತೆಯಲ್ಲಿ ಕನ್ನಡ ರಾಜ್ಯೋತ್ಸವ ಪೂರ್ವಭಾವಿ ಸಭೆ ನಡೆಯಿತು.

ಯಳಂದೂರು, ಅ.24–ಈ ಬಾರಿ ಪಟ್ಟಣದಲ್ಲಿ ಅದ್ದೂರಿ ಹಾಗೂ ಅರ್ಥಪೂರ್ಣವಾಗಿ ಕನ್ನಡ ರಾಜ್ಯೋತ್ಸವ ಆಚರಿಸಲು ಸಭೆಯಲ್ಲಿ ನಿರ್ಧರಿಸಲಾಯಿತು.

ಪಟ್ಟಣದ ತಾಲೂಕು ಕಚೇರಿ ಸಭಾಂಗಣದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಅಧ್ಯಕ್ಷರಾದ ತಹಸೀಲ್ದಾರ್ ಜಯಪ್ರಕಾಶ್ ಅಧ್ಯಕ್ಷತೆಯಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ನ.1ರಂದು ಪಟ್ಟಣದ ಕರ್ನಾಟಕ ಪಬ್ಲಿಕ್ ಶಾಲೆಯ ಪದವಿಪೂರ್ವ ಕಾಲೇಜಿನ ಆವರಣದಲ್ಲಿ ಧ್ವಜಾರೋಹಣ, ವೇದಿಕೆ ಕಾರ್ಯಕ್ರಮ, ವಿವಿಧ ಇಲಾಖೆ ಮತ್ತು ಶಾಲಾ–ಕಾಲೇಜುಗಳ ವತಿಯಿಂದ ಸ್ತಬ್ಧಚಿತ್ರ ಹಾಗೂ ಕಲಾತಂಡಗಳೊಂದಿಗೆ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಲು ತೀರ್ಮಾನಿಸಲಾಯಿತು.

ಎಲ್ಲಾ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿ ಕಡ್ಡಾಯವಾಗಿ ಭಾಗವಹಿಸಬೇಕು. ಪುರುಷ ಸಿಬ್ಬಂದಿ ಬಿಳಿ ಪಂಚೆ–ಅಂಗಿ, ಹಳದಿ–ಕೆಂಪು ಶಾಲು ಮತ್ತು ಮಹಿಳೆಯರು ಸೀರೆ, ಹಳದಿ–ಕೆಂಪು ಶಾಲು ಧರಿಸಿ ಮೆರವಣಿಗೆಯಲ್ಲಿ ಪಾಲ್ಗೊಂಡು ಕನ್ನಡ ಕಂಪು ಪಸರಿಸಬೇಕು. ಪಟ್ಟಣದ ಎಲ್ಲಾ ಇಲಾಖೆ ಕಚೇರಿ ಹಾಗೂ ಪ್ರಮುಖ ಬೀದಿಗಳು ಮತ್ತು ಬಳೆಮಂಟಪ, ಜಹಗೀರ್‌ದಾರ್ ಬಂಗಲೆ, ಷಡಕ್ಷರಿ ಗದ್ದುಗೆ, ಅಂಬೇಡ್ಕರ್ ಪ್ರತಿಮೆ ಮುಂತಾದ ಐತಿಹಾಸಿಕ ಸ್ಥಳಗಳಲ್ಲಿ ತಳಿರು ತೋರಣಗಳ ಸಿಂಗಾರ, ವಿದ್ಯುತ್ ದೀಪಾಲಂಕಾರ, ಕಡ್ಡಾಯವಾಗಿ ಕನ್ನಡ ಬಾವುಟ ಹಾರಿಸಲು ಕನ್ನಡಪರ ಸಂಘಟನೆಗಳು ಮನವಿ ಮಾಡಿದವು. ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಕನ್ನಡ ಭಾಷೆಯಲ್ಲಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲು ಮತ್ತು ಪೂರ್ವಭಾವಿ ಸಭೆಗೆ ಗೈರಾದ ಅಧಿಕಾರಿಗಳಿಗೆ ನೋಟಿಸ್ ನೀಡಲು ತೀರ್ಮಾನಿಸಲಾಯಿತು.

ಸಭೆಯಲ್ಲಿ ಪಟ್ಟಣ ಪಂಚಾಯಿತಿ ಅಧ್ಯಕ್ಷೆ ಲಕ್ಷ್ಮೀ, ಸದಸ್ಯರಾದ ಮಹೇಶ್, ರಂಗನಾಥ್, ನಾಮನಿರ್ದೇಶಿತ ಸದಸ್ಯರಾದ ಬಳೇಪೇಟೆ ಲಿಂಗರಾಜುಮೂರ್ತಿ, ಮುನಾವರ್ ಬೇಗ್, ಮುಖ್ಯಾಧಿಕಾರಿ ಮಹೇಶ್ ಕುಮಾರ್, ಮುಖಂಡರಾದ ದುಗ್ಗಹಟ್ಟಿ ವೀರಭದ್ರಪ್ಪ, ಕಸಾಪ ಅಧ್ಯಕ್ಷ ಯರಿಯೂರು ನಾಗೇಂದ್ರ, ಕರವೇ ಜಿಲ್ಲಾ ಉಪಾಧ್ಯಕ್ಷ ವೈ.ಕೆ.ಮೋಳೆ ನಾಗರಾಜು, ನ್ಯಾಯಬೆಲೆ ಅಂಗಡಿ ಮಾಲೀಕರ ಸಂಘದ ಅಧ್ಯಕ್ಷ ಸಿದ್ದರಾಜು, ಅಂಬೇಡ್ಕರ್ ಸೇವಾ ಸಮಿತಿ ಅಧ್ಯಕ್ಷ ರೇವಣ್ಣ, ವಿವಿಧ ಇಲಾಖೆ ಅಧಿಕಾರಿಗಳು ಹಾಗೂ ಸಂಘ–ಸಂಸ್ಥೆಗಳ ಪದಾಧಿಕಾರಿಗಳು ಹಾಜರಿದ್ದರು.

ಲೆಕ್ಕಪರಿಶೋಧನೆ ತನಿಖೆ ನಡೆಸಿ

ಚಾಮರಾಜನಗರ: ಆದಿಕರ್ನಾಟಕ ಅಭಿವೃದ್ಧಿ ಸಂಘದ ಲೆಕ್ಕಪತ್ರಗಳನ್ನು ಸರಿಯಾಗಿ ನಿರ್ವಹಿಸದೆ ಹಣ ದುರುಪಯೋಗವಾಗಿದೆ. ಈ ಬಗ್ಗೆ ಲೆಕ್ಕಪರಿಶೋಧನೆ ಇಲಾಖೆಯಿಂದ ತನಿಖೆ ನಡೆಸಬೇಕು ಎಂದು ಸಂಘದ ಸದಸ್ಯ, ಜಿಪಂ ನಿವೃತ್ತ ಲೆಕ್ಕಪರಿಶೋಧನಾಕಾರಿ ಕೆಂಪನಪುರ ಚನ್ನಬಸವಯ್ಯ ಒತ್ತಾಯಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂಘದಲ್ಲಿ ಸುಮಾರು 3.61 ಕೋಟಿ ರೂ. ವಹಿವಾಟು ನಡೆದಿದೆ. 2008ರ ಅ.1 ರಿಂದ 2021ರ ಮಾ.31ರವರೆಗೆ ಸಂಘದ ಕಟ್ಟಡವನ್ನು ಇಂಜಿನಿಯರ್ ಕಾಲೇಜಿನ ಹಾಸ್ಟೆಲ್‌ಗೆ ಬಾಡಿಗೆಗೆ ನೀಡಿದ್ದು, 151 ತಿಂಗಳಿಗೆ ಒಟ್ಟು 74,31,314 ರೂ. ಬಾಡಿಗೆ ಪಡೆಯಲಾಗಿದೆ ಅದೇ ಸಮಯದಲ್ಲಿ ಸಮಾಜ ಕಲ್ಯಾಣ ಇಲಾಖೆ ಹಾಸ್ಟೆಲ್ ವಿದ್ಯಾರ್ಥಿಗಳು ಇದ್ದಾರೆ ಎಂದು 2013–14ನೇ ಸಾಲಿನಲ್ಲಿ 1,22,647 ರೂ., 2014–15ನೇ ಸಾಲಿನಲ್ಲಿ 1,33,880 ರೂ., 2015–16ನೇ ಸಾಲಿನಲ್ಲಿ 3,03,477 ರೂ ಪಡೆದಿದ್ದಾರೆ ಅಲ್ಲದೆ ಬಿಸಿಎಂ ಇಲಾಖೆಯಿಂದ 2021 ರಿಂದ 2023 ರವರೆಗೆ ಒಟ್ಟು 8,75,032 ರೂ. ಬಾಡಿಗೆ ಪಡೆದಿಯಲಾಗಿದೆ. ಇದರ ಲೆಕ್ಕವೇ ಇಲ್ಲ. ಹೀಗಾಗಿ ಸಂಘದಲ್ಲಿ ಲಕ್ಷಾಂತರ ರೂ. ಅವ್ಯವಹಾರ ನಡೆದಿದೆ. ಆದ್ದರಿಂದ ಜಿಲ್ಲಾಧಿಕಾರಿಗಳು ಸಂಘದ ಲೆಕ್ಕಪತ್ರಗಳನ್ನು ಸ್ಥಳೀಯ ಇಲಾಖೆ ಅಧಿಕಾರಿಗಳಿಂದ ತನಿಖೆ ನಡೆಸಬೇಕು ಎಂದು ಆಗ್ರಹಿಸಿದರು.

ಮಿಸ್ಟರ್ ರಾಣಿ ಟೀಸರ್ ಗಂಡು ಹೆಣ್ಣಾದಾಗ..

ವಾಸ್ಕೋಡಗಾಮ ಖ್ಯಾತಿಯ ನಿರ್ದೇಶಕ ಮಧುಚಂದ್ರ ಈಗ ಫ್ರೆಶ್ ಕಥೆಯೊಂದನ್ನು ಹೊತ್ತು ತಂದಿದ್ದಾರೆ. ಅದೇ ಮಿಸ್ಟರ್ ರಾಣಿ, ಲವ್, ಕ್ರೈಮ್, ಥ್ರಿಲ್ಲರ್, ಸಸ್ಪೆನ್ಸ್, ಹಾರರ್ ಹೀಗೆ ಮಾಮೂಲಿ ಸೂತ್ರಗಳನ್ನು ಬದಿಗಿಟ್ಟು ಬೇರೆಯದೇ ಶೈಲಿಯ ಕಾಮಿಡಿ ಎಂಟರ್‌ಟೈನರ್ ಚಿತ್ರವನ್ನು ನಿರ್ದೇಶಕ ಮಧುಚಂದ್ರ ತೆರೆಮೇಲೆ ಮೂಡಿಸಲಿದ್ದಾರೆ. ತಾನೊಬ್ಬ ಹೀರೋ ಆಗ್ಬೇಕೆಂದು ಚಿತ್ರರಂಗಕ್ಕೆ ಬಂದ ಹುಡುಗನೊಬ್ಬ ಆಕಸ್ಮಿಕವಾಗಿ ಹೀರೋಯಿನ್ ಆಗಿಬಿಡ್ತಾನೆ, ಆದರೆ ಅದು ಹೇಗೆ ಅನ್ನೋದನ್ನು ತೆರೆಯ ಮೇಲೇ ನೋಡಬೇಕು. ಇತ್ತೀಚೆಗಷ್ಟೇ ಈ ಚಿತ್ರದ ಟೀಸರ್ ರಿಲೀಸಾಗಿದೆ.

ಲಕ್ಷ್ಮಿ ನಿವಾಸ ಸೀರಿಯಲ್‌ನಲ್ಲಿ ಜಯಂತ್ ಪಾತ್ರದ ಮೂಲಕ ಹೆಸರಾಗಿದ್ದ ನಟ ದೀಪಕ್ ಸುಬ್ರಹ್ಮಣ್ಯ ಈ ಚಿತ್ರದ ಹೀರೋ(ಯಿನ್!?) ರಾಣಿಯ ರೋಲ್‌ನಲ್ಲಿ ಕಾಣಿಸಿಕೊಂಡಿದ್ದಾರೆ. ರಾಣಿ ಚಿತ್ರದ ಪೋಸ್ಟರ್ ನೋಡಿ, ನಮಗೆ ಇನ್ನೊಬ್ಬಳು ಹೀರೋಯಿನ್ ಕಾಂಪಿಟೇಷನ್ ಮಾಡೋಕೆ ಬಂದಳಲ್ಲ ಅಂತ ತುಂಬಾ ಜನ ನಾಯಕಿಯರು ಕನ್‌ಫ್ಯೂಸ್ ಆಗಿದ್ದಾರೆ. ಇನ್ನು ಈ ಚಿತ್ರದ ಟೀಸರ್ ನೋಡಿದಾಗ ಸಿನಿಮಾ ಟೆಕ್ನಿಕಲ್ಲಾಗಿ ಬೇರೆಯದೇ ಲೆವೆಲ್‌ನಲ್ಲಿ ಮೂಡಿಬಂದಿರೋದು ಎದ್ದು ಕಾಣುತ್ತಿದೆ. ಟೀಸರ್‌ನ ಓಪನಿಂಗ್‌ನಲ್ಲಿ ಬರುವ ಅನಿಮೇಷನ್ ನೋಡಿದಾಗ ಇದು ಯಾವುದೋ ಹಾಲಿವುಡ್ ಚಿತ್ರವಿರಬೇಕು ಎಂದನಿಸದೇ ಇರದು. ಮಿಸ್ಟರ್ ರಾಣಿ ವಿಭಿನ್ನ ರೀತಿಯ ಥಿಯೇಟ್ರಿಕಲ್ ಎಕ್ಸ್‌ಪೀರಿಯನ್ಸ್ ಕೊಡುವಂಥ ಚಿತ್ರ.



ಕಂಪ್ಲೀಟ್ ಕಾಮಿಡಿ ಪ್ಯಾಕೇಜ್ ಇರುವ ಈ ಚಿತ್ರದ ಟೀಸರ್ ಸದ್ಯ ಯೂಟ್ಯೂಬ್‌ನಲ್ಲಿ ರಿಲೀಸಾಗಿ ಟ್ರೆಂಡಿಂಗ್‌ನಲ್ಲಿದೆ. ಎಕ್ಸೆಲ್ ಆರ್ಬಿಟ್ ಕ್ರಿಯೇಷನ್ಸ್ ಅಡಿ ಮಧುಚಂದ್ರ ಅವರೇ ಕಥೆ ಬರೆದು ನಿರ್ದೇಶಿಸಿರುವ ಈ ಚಿತ್ರಕ್ಕೆ ಜೂಡಾ ಸ್ಯಾಂಡಿ ಅವರ ಸಂಗೀತ, ರವೀಂದ್ರನಾಥ್ ಟಿ, ಅವರ ಛಾಯಾಗ್ರಹಣ ಹಾಗೂ ಮಧು ತುಂಬಕೆರೆ ಅವರ ಸಂಕಲನವಿದೆ.

ಗುರುನಂದನ್ ಈಗ 'ರಾಜು ಜೇಮ್ಸ್ ಬಾಂಡ್'

ಫಸ್ಟ್ ರ‍್ಯಾಂಕ್ ರಾಜು ಖ್ಯಾತಿಯ ಗುರುನಂದನ್ ಈಗ ಜೇಮ್ಸ್ ಬಾಂಡ್ ಅವತಾರ ಎತ್ತಿದ್ದಾರೆ. ಹೌದು, ಗುರುನಂದನ್ ಅಭಿನಯದ ರಾಜು ಜೇಮ್ಸ್‌ಬಾಂಡ್ ಚಿತ್ರ ತೆರೆಗೆ ಬರಲು ಸಿದ್ಧವಾಗಿದೆ. ಮಂಜುನಾಥ್ ವಿಶ್ವಕರ್ಮ ಮತ್ತು ಕಿರಣ್ ಸೇರಿ ಈ ಚಿತ್ರವನ್ನು ನಿರ್ಮಿಸಿದ್ದಾರೆ.

ದೀಪಕ್ ಮಧುವನಹಳ್ಳಿ ಅವರ ನಿರ್ದೇಶನದ ಈ ಚಿತ್ರದಲ್ಲಿ ಮೃದುಲಾ ನಾಯಕಿಯಾಗಿದ್ದು, ಸಾಧು ಕೋಕಿಲ, ಅಚ್ಯುತ್ ಕುಮಾರ್, ಚಿಕ್ಕಣ್ಣ, ರವಿಶಂಕರ್, ಜೈಜಗದೀಶ್ ಮುಂತಾದವರು ನಟಿಸಿದ್ದಾರೆ.

ರಾಜು ಜೇಮ್ಸ್ ಬಾಂಡ್ ಹಾಸ್ಯ ಮತ್ತು ಹೈಸ್ಟ್ ಡ್ರಾಮಾ ಒಳಗೊಂಡ ಚಿತ್ರ ಈ ಚಿತ್ರದ ಟೀಸರ್ ಮತ್ತು ಆಡಿಯೋ ಬಿಡುಗಡೆಯಾಗಿದ್ದು ಸದ್ಯದಲ್ಲೇ ಚಿತ್ರ ತೆರೆಕಾಣಲಿದೆ,

ಈ ಸಿನಿಮಾವನ್ನು ಹಲವಾರು ಸಲ ನೋಡಿದ್ದರೂ, ನಮಗೆ ಒಂದು ಸಲವೂ ಬೇಸರವಾಗಿಲ್ಲ, ನಮಗೆ ಕತೆ ಗೊತ್ತಿದ್ದರೂ ಕೆಲವು ಸನ್ನಿವೇಶಗಳಲ್ಲಿ ನಗು ತಾನೇ ತಾನಾಗಿ ಬಂದುಬಿಡುತ್ತದೆ, ಚಿತ್ರವನ್ನು ಕುತೂಹಲದಿಂದ ನೋಡಿದ್ದೇವೆ. ಪ್ರೇಕ್ಷಕರಿಗೂ ಇದೇ ಅನುಭವ ನೀಡಲಿದೆ ಎಂಬ ಸಂಪೂರ್ಣ ನಂಬಿಕೆಯಿದೆ ಎಂದು ನಿರ್ಮಾಪಕರು ಚಿತ್ರದ ಬಗ್ಗೆ ಅಪಾರ ವಿಶ್ವಾಸವನ್ನು ವ್ಯಕ್ತಪಡಿಸಿದ್ದಾರೆ. ಯಾವುದೇ ಸಿನಿಮಾದ ಮೊಟ್ಟ ಮೊದಲ ಆದ್ಯತೆ ಪ್ರೇಕ್ಷಕನ ಮನರಂಜನೆ ಆಗಿರಬೇಕೆಂಬುದು ನನ್ನ ಅಭಿಪ್ರಾಯ. ಹಾಗಾಗಿ ಅದನ್ನು ಮುಖ್ಯವಾಗಿ ಪರಿಗಣಿಸಿ ನಮ್ಮ ರಾಜು ಜೇಮ್ಸ್ ಬಾಂಡ್ ಚಿತ್ರವನ್ನು ಸಿದ್ಧಪಡಿಸಲಾಗಿದೆ. ಸಿನಿಮಾದ ಅವಧಿ 2:16 ಗಂಟೆಯಿದ್ದು, ಅದರಲ್ಲಿ ಸುಮಾರು 40 ನಿಮಿಷ ಥಿಯೇಟರ್‌ನಲ್ಲಿರುವ ಪ್ರೇಕ್ಷಕರು ನಗುವನ್ನು ತಡೆದುಕೊಳ್ಳಲು ಸಾಧ್ಯವೇ ಇಲ್ಲ, ನಾಲ್ಕು ಹಾಡುಗಳಲ್ಲಿ ಎರಡು ಹಾಡುಗಳನ್ನು ಲಂಡನ್ ಸುತ್ತಮುತ್ತ ಚಿತ್ರೀಕರಿಸಲಾಗಿದೆ. ನಮ್ಮ ಚಿತ್ರ ಪ್ರೇಕ್ಷಕರಿಗೆ ಉತ್ತಮ ವಿಷ್ಯುಯಲ್ ಅನುಭವವನ್ನು ನೀಡುತ್ತದೆ ಎಂದು ನಿರ್ದೇಶಕ ದೀಪಕ್ ಮಧುವನಹಳ್ಳಿ ಹೇಳಿದ್ದಾರೆ.

ಈಗಾಗಲೇ ಚಿತ್ರದ ಸೆನ್ಸಾರ್ ಪ್ರಕ್ರಿಯೆ ಮುಗಿದಿದ್ದು, ಸಿನಿಮಾಗೆ ಯು/ಎ ಸರ್ಟಿಫಿಕೇಟ್ ದೊರಕಿದೆ. ರಾಜು ಜೇಮ್ಸ್ ಬಾಂಡ್ ಚಿತ್ರದ ಬಿಡುಗಡೆಯ ದಿನಾಂಕ ತಿಳಿಸುವ ಟೀಸರ್ ಒಂದನ್ನು ಸದ್ಯದಲ್ಲೇ ಬಿಡುಗಡೆ ಮಾಡುವ ಯೋಚನೆ ಚಿತ್ರತಂಡಕ್ಕಿದೆ. ಚಿತ್ರದ ಸಂಗೀತ ನಿರ್ದೇಶಕರಾಗಿ ಅನೂಪ್ ಸೀಳಿನ್ ಹಾಗೂ ಛಾಯಾಗ್ರಾಹಕರಾಗಿ ಮನೋಹರ್ ಜೋಶಿ ಅವರು ಕೆಲಸ ಮಾಡಿದ್ದಾರೆ.





ಮೂವರು ಸ್ಟಾರ್‌ಗಳಿಗೂ ವಿಲನ್ ಸೂರ್ಯಪ್ರವೀಣ್


ಒಂದು ಚಿತ್ರದಲ್ಲಿ ನಾಯಕನ ಪಾತ್ರ ವಿಜೃಂಭಿಸಬೇಕೆಂದರೆ ಅಲ್ಲಿ ಖಳನಾಯಕನ ಪಾತ್ರವೂ ಅಷ್ಟೇ ಶಕ್ತಿಶಾಲಿಯಾಗಿರಬೇಕು. ಆಗಷ್ಟೇ ನಾಯಕನ ಪಾತ್ರಕ್ಕೆ ಹೀರೋ ಕಳೆ ಬರುವುದು. ಇವರಿಬ್ಬರಿಂದಲೇ ಕಥೆ ರೋಚಕವಾಗಿ ಸಾಗುತ್ತದೆ. ಡಾ.ರಾಜ್‌ಕುಮಾರ್ ಚಿತ್ರಗಳಲ್ಲಿ ಖಳನಾಯಕರಾಗಿ ನಟಿಸಿದ್ದ ನಾಗಪ್ಪ, ದಿನೇಶ್, ಬಾಲಕೃಷ್ಣ, ಎಂ.ಪಿ. ಶಂಕರ್, ತೂಗುದೀಪ ಶ್ರೀನಿವಾಸ್, ವಜ್ರಮುನಿ ಇವರೆಲ್ಲ ಚಿತ್ರದ ಆಧಾರಸ್ತಂಭಗಳೇ ಆಗಿದ್ದರು. ಅದೇ ರೀತಿ ಇತ್ತೀಚಿನ ದಿನಗಳಲ್ಲಿ ಪ್ರವರ್ಧಮಾನಕ್ಕೆ ಬರುತ್ತಿರುವ ಖಳನಟ ಎಂದರೆ ಸೂರ್ಯಪ್ರವೀಣ್. ಯಜಮಾನ, ಅವನೇ ಶ್ರೀಮನ್ನಾರಾಯಣ ಸೇರಿದಂತೆ ಸಾಕಷ್ಟು ಸ್ಟಾರ್ ಚಿತ್ರಗಳಲ್ಲಿ ವಿಭಿನ್ನ ಪಾತ್ರಗಳಲ್ಲಿ ಕಾಣಿಸಿಕೊಳ್ಳುವ ಮೂಲಕ ಹಿರಿತೆರೆ, ಕಿರುತೆರೆಯಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ.

ಸೂರ್ಯಪ್ರವೀಣ್ ಮೂಲತಃ ಮೈಸೂರಿನವರು. ಕಾಲೇಜು ದಿನಗಳಲ್ಲಿ ನಾಟಕಗಳಲ್ಲಿ ಅಭಿನಯಿಸಿದ್ದು ಬಿಟ್ಟರೆ, ತಾನು ಬಣ್ಣದ ಲೋಕಕ್ಕೆ ಬರಬೇಕೆನ್ನುವ ಯಾವುದೇ ಆಸೆ, ಆಕಾಂಕ್ಷೆ ಅವರಿಗೆ ಇರಲಿಲ್ಲ. ನಂತರ ಡಾ.ರಾಜ್, ಡಾ. ವಿಷ್ಣುವರ್ಧನ್, ಅಂಬರೀಷ್ ಅವರ ಚಿತ್ರಗಳನ್ನು ನೋಡುತ್ತಾ ಹೋದಂತೆ ತಾನೂ ಕಲಾವಿದನಾಗಿ ಬೆಳೆಯಬೇಕೆಂಬ ಸಣ್ಣದೊಂದು ಕನಸು ಚಿಗುರಿದೆ. ಇದೇ ಸಮಯದಲ್ಲಿ ಗೆಳೆಯನ ಸಲಹೆಯಂತೆ ನಿರ್ದೇಶಕ ನಾಗಣ್ಣ ಅವರನ್ನು ಭೇಟಿಯಾಗಿದ್ದಾರೆ, ಪ್ರಥಮ ಪ್ರಯತ್ನದಲ್ಲೇ ಬಂಪರ್ ಲಾಟರಿ ಗೆದ್ದ ಹಾಗೆ ನಾಗಣ್ಣ ನಿರ್ದೇಶನದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಚಿತ್ರದಲ್ಲಿ ದರ್ಶನ್ ಸ್ನೇಹಿತನಾಗಿ 45 ದಿನಗಳ ಕಾಲ ಕೆಲಸ ಮಾಡಿದ್ದಾರೆ. ಭವಿಷ್ಯದಲ್ಲಿ ನಟನೆಯಲ್ಲೇ ಬೆಳೆಯಬೇಕೆಂದು ಕಲಾಭೂಮಿ ಮತ್ತು ಆದರ್ಶ ಫಿಲಂ ಇನ್‌ಸ್ಟಿಟ್ಯೂಟ್‌ನಲ್ಲಿ ಅಭಿನಯ ತರಬೇತಿ ಪಡೆದುಕೊಂಡಿದ್ದಾರೆ. ಮನೆಯಲ್ಲೂ ಪ್ರೋತ್ಸಾಹ ಸಿಕ್ಕಿದ್ದರಿಂದ ಅಭಿನಯವನ್ನೇ ವೃತ್ತಿಯನ್ನಾಗಿ ತೆಗೆದುಕೊಂಡಿದ್ದಾರೆ.

ಕಿರುತೆರೆಯ ಕಾದಂಬರಿ ಕಣಜ, ಮಂಗಳಗೌರಿ ಮದುವೆ, ಹರಹರ ಮಹದೇವ, ಗೀತಾ ಅಲ್ಲದೆ ಒಂದು ತೆಲುಗು ಸೀರಿಯಲ್ ಸೇರಿದಂತೆ 60ಕ್ಕೂ ಹೆಚ್ಚು ಧಾರಾವಾಹಿಗಳ 2500ಕ್ಕೂ ಹೆಚ್ಚು ಕಂತುಗಳಲ್ಲಿ ಖಳನಾಗಿ ಕಾಣಿಸಿಕೊಳ್ಳುವ ಮೂಲಕ ವೀಕ್ಷಕರ ಮನ ಗೆದ್ದಿದ್ದಾರೆ. ತಮ್ಮ ಹನ್ನೆರಡು ವರ್ಷದ ಸಿನಿ ಪಯಣದಲ್ಲಿ ಅವನೇ ಶ್ರೀಮನ್ನಾರಾಯಣ, ಆಪರೇಶನ್ ಅಲಮೇಲಮ್ಮ, ಯಜಮಾನ, ಬಾನದಾರಿಯಲ್ಲಿ ಸೇರಿ 25ಕ್ಕೂ ಹೆಚ್ಚು ಚಿತ್ರಗಳಲ್ಲಿ ಅಭಿನಯಿಸಿದ್ದಾರೆ. ಮುಂದೆಯೂ ತಾನು ನೆಗೆಟಿವ್ ಪಾತ್ರಗಳಲ್ಲೇ ಗುರುತಿಸಿಕೊಳ್ಳಬೇಕೆಂಬ ಬಯಕೆ ಹೊಂದಿದ್ದು, ನಾಯಕನ ಪಾತ್ರಕ್ಕೆ ಆಫರ್ ಬಂದರೂ, ಅದರಲ್ಲೂ ನೆಗಟಿವ್‌ನಿಂದ ಪಾಸಿಟಿವ್ ಆಗುವಂಥ ಕ್ಯಾರೆಕ್ಟರ್ ಸಿಕ್ಕರೆ ಖುಷಿಯಾಗುತ್ತದೆ ಎನ್ನುತ್ತಾರೆ ಸೂರ್ಯಪ್ರವೀಣ್.

ಬಹುನಿರೀಕ್ಷಿತ 45 ಚಿತ್ರದಲ್ಲಿ ಮೂವರು ಸ್ಟಾರ್‌ಗಳೊಂದಿಗೆ ಸೂರ್ಯಪ್ರವೀಣ್ ತೆರೆಹಂಚಿಕೊಂಡಿದ್ದು, ಜೊತೆಗೆ ಪ್ರಿಯಾಂಕ ಉಪೇಂದ್ರ ಅಭಿನಯದ ಉಗ್ರಾವತಾರ ಉಳಿದಂತೆ ಧ್ರುವಸರ್ಜಾ ಅಭಿನಯದ ಕೆಡಿ ಸೇರಿದಂತೆ ಇನ್ನೂ ಐದು ಸಿನಿಮಾಗಳಲ್ಲಿ ನಟಿಸಿದ್ದಾರೆ.

ಸಿನಿಪದಬಂಧ-548



ಉಮ್ಮತ್ತೂರು ಇಂದುಶೇಖರ್

ಮೊ.9880820462



ಹೆಸರು ______

ವಿಳಾಸ ______

ದೂರವಾಣಿ ಸಂಖ್ಯೆ ______

ಎಡದಿಂದ ಬಲಕ್ಕೆ

1.ಸಾಂಸ್ಕೃತಿಕ ನಗರಿಯ ಪುಷ್ಪ ತೆರೆಯ ಮೇಲೂ ಪರಿಮಳಿಸಿದೆ 6
4.ಅಂಬಿ-ಸುಧಾರಾಣಿಯ ಏಳು ಹೆಜ್ಜೆಗಳ ಸಂಬಂಧ! 4
6.ಕಿಂಕರನ ಬಾಸ್ 2
7.ಪುಣ್ಯದೊಂದಿಗೆ ಇರುವ ಕೆಟ್ಟದು 2
8.ವಿಷ್ಣುವರ್ಧನ್-ಗಾಯತ್ರಿ ಅಭಿನಯಕ್ಕೆ ರಾಜಾಚಂದ್ರ ನಿರ್ದೇಶನವಿದೆ 7
10.ಆನೆಯ ಮುಖದ ದೇವರಿಗೆ ಹೀಗೂ ಹೇಳಿ 4
11.ವಿಷ್ಣುವರ್ಧನ್-ಮಂಜುಳಾ ಶರ್ಮಾ ಅಭಿನಯದಲ್ಲಿ ಬಂದ ಅರಸ 5
13.ರಾಕ್ ಲೈನ್ ವೆಂಕಟೇಶ್ "ಪರಾಕ್ರಾಮಿ" 2
14.ಮಾಲೆಯ ನಡುವೆ ನಡೆದ ಕದನ 3
15.ನಟ ಮೋಹನ್ ವಿಷ್ಣುವಿನ ಅವತಾರದಲ್ಲಿ ಭಯಂಕರ ರೂಪ ತಾಳಿದ್ದಾನೆ 6
17.ಗಡಿಬಿಡಿ ಕೃಷ್ಣ ಚಿತ್ರದ ನಾಯಕಿಯರಲ್ಲಿ ಒಬ್ಬಾಕೆ 3
18.ಹಕ್ಕಿಗಳು ವಾಪಸ್ಸು ತನ್ನ ನೆಲೆ ಸೇರಿದಾಗ ಚಿತ್ರವೊಂದು ಪ್ರತ್ಯಕ್ಷ! 6

ಮೇಲಿನಿಂದ ಕೆಳಕ್ಕೆ

1.ಪ್ರಭಾಕರ್ ನನ್ನು ಬಿರುದಿನೊಂದಿಗೆ ಪ್ರೀತಿಯಿಂದ ಕರೆಯಿರಿ! 7
2.ಸಂಜನಾ ಹರಿಸಿದ ಹೊಳೆ! 4
3.ಪೆದ್ದ _ _ 2
4.ಉಪಪತ್ನಿ ಬೀರಿದ ಛಾಯೆ 7
5.ಡಾರ್ಲಿಂಗ್ ಕೃಷ್ಣನಿಗೆ ಸಿಕ್ಕ ಬೇಕರಿಯ ಸಿಹಿ! 5
8.ಸುರಪತಿಯನ್ನು ನವರಸ ನಾಯಕ ಜಯಿಸಿದ್ದಾನೆ 8
9.ವಿಷ್ಣುವರ್ಧನ್, ರಾಶಿ, ರಮ್ಯಕೃಷ್ಣ ಅಭಿನಯದ ಚಿತ್ರ 6
12.ಶಿವರಾಜ್ ಕುಮಾರ್-ಶಿಲ್ಪಾ ಅಭಿನಯದ ಚಿತ್ರಕ್ಕೆ ಟಿ.ಎಸ್.ನಾಗಾಭರಣ ನಿರ್ದೇಶಕ 6
15."ನಿನ್ನಂಥ ಶ್ರೀಮತಿ ಕೈಹಿಡಿದಾಗ ನಿನ್ನಂಥ ಗುಣವತಿ...... ", ಗೀತೆಯ ಚಿತ್ರ 2
16.ಜಿಪುಣ ನನ್ನ ಗಂಡ ಚಿತ್ರದ ನಾಯಕಿ 3

ಸಿನಿ ಪದಬಂಧ 547ರ ಉತ್ತರ

ಅ	ಪೂ	ರ್ವ	ಸಂ	ಗ	ಮ		ಮ	ಧು	ಬಾ	ಲ
ಮ			ಗ್ರಾ				ದ			ತಾ
ರ	ಥ		ಮ	ದ	ಕ	ರಿ	ನಾ	ಯ್ಕ		ಹಂ
ಪ್ರೇ					ವಿ		ರಿ			ಸ
ಮ		ರ	ವಿ		ರ			ಅ	ಬ	ಲೇ
			ಷ್ಣು		ತ್ನ		ಜೋ			ಖ
	ಒ	ಲ	ವಿ	ನ	ಕಾ	ಣಿ	ಕೆ		ಬ	
	ಡೆ		ಜ		ಳಿ				ಲ	
	ಯ		ಯ		ದಾ		ಕ		ರಾ	
				ಕೆ	ಸ	ರಿ	ನ	ಕ	ಮ	ಲ
ಸ	ರೋ	ಜಾ	ದೇ	ವಿ			ಸು			

ವಿಜೇತರು: ಅಶ್ವತ್ಥ ನಾರಾಯಣ.ಕೆ.ಎನ್, ನಂ.332, 9-ಸಿ ಕ್ರಾಸ್, ಮಾಧವ ಪಾರ್ಕ್ ಹತ್ತಿರ, ಇ-ಎಫ್ ಬ್ಲಾಕ್, ರಾಮಕೃಷ್ಣನಗರ, ಮೈಸೂರು

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

'ಜಂಗಲ್ ಮಂಗಲ್' ದಟ್ಟ ಕಾಡಲ್ಲೊಂದು ಪ್ರೇಮಪ್ರಸಂಗ..



ಕಾಡು, ಕಾಡಿನ ಪರಿಸರ, ಅಲ್ಲಿ ವಾಸಿಸುವ ಜನರ ಬದುಕನ್ನು ಬಿಚ್ಚಿಡುವ ಅನೇಕ ಚಲನಚಿತ್ರಗಳು ನಿರ್ಮಾಣವಾಗಿವೆ. ಅದೇ ಥರದ ಮತ್ತೊಂದು ಚಿತ್ರ ಜಂಗಲ್ ಮಂಗಲ್ ತೆರೆಗೆ ಬರಲು ಸಿದ್ಧವಾಗಿದೆ, ಅರೆಮಲೆನಾಡಿನಲ್ಲಿ ವಾಸಿಸುವ ವಿವಿಧ ಸಂಸ್ಕೃತಿಯ ಜನರ ಸುತ್ತ ನಡೆಯೋ ಘಟನೆಗಳ ಜತೆಗೊಂದು ಪ್ರೇಮಕಥೆಯನ್ನು ನಿರ್ದೇಶಕ ರಕ್ಷಿತ್‌ಕುಮಾರ್ ಅವರು ಈ ಚಿತ್ರದಲ್ಲಿ ನಿರೂಪಿಸಿದ್ದಾರೆ, ಅಲ್ಲಿನ ಜನರ ಆಚಾರ ವಿಚಾರಗಳು, ಅವರಲ್ಲಿ ನಡೆದಂಥ ಘಟನೆಗಳು ಹೀಗೆ ಒಂದಷ್ಟು ಕುತೂಹಲಕರ ವಿಚಾರಗಳನ್ನು ನಿರ್ದೇಶಕರು ಜಂಗಲ್‌ಮಂಗಲ್ ಚಿತ್ರದ ಮೂಲಕ ಹೇಳಹೊರಟಿದ್ದಾರೆ. ಈವರೆಗೆ ಖಳನಾಯಕನಾಗಿ ಮಿಂಚಿದ್ದ ಯಶ್ ಶೆಟ್ಟಿ ಈ ಚಿತ್ರದಲ್ಲಿ ನಾಯಕನಾಗಿ ಬಡ್ತಿ ಪಡೆದಿದ್ದಾರೆ, ಇತ್ತೀಚೆಗೆ ಈ ಚಿತ್ರದ ಶೀರ್ಷಿಕೆಯನ್ನು ನಿರ್ದೇಶಕ ಸಿಂಪಲ್‌ಸುನಿ ಅವರು ಬಿಡುಗಡೆ ಮಾಡಿದರು. ಚಿತ್ರದ ಕುರಿತಂತೆ ಮಾತನಾಡಿದ ರಕ್ಷಿತ್‌ಕುಮಾರ್, ಮಲೆನಾಡಿನ ಜನರಿಗೆ ಕಾಡಿನ ಜತೆ ಒಂದು ಅವಿನಾಭಾವ ಸಂಬಂಧವಿದೆ. ಅದನ್ನೇ ಚಿತ್ರದಲ್ಲಿ ಹೇಳೋ ಪ್ರಯತ್ನ ಮಾಡಿದ್ದೇನೆ. ಯಶ್‌ಶೆಟ್ಟಿ, ಹರ್ಷಿತ ರಾಮಚಂದ್ರ ನಾಯಕ, ನಾಯಕಿಯಾಗಿದ್ದು, ಉಗ್ರಂ ಮಂಜು ಮತ್ತೊಂದು ಪ್ರಮುಖ ಪಾತ್ರದಲ್ಲಿದ್ದಾರೆ. ಈ ಚಿತ್ರದ ಶೇ.70ರಷ್ಟು ಕಥೆ ಕಾಡಲ್ಲೇ ನಡೆಯಲಿದ್ದು, ಸುಬ್ರಹ್ಮಣ್ಯ ಬಳಿಯ ಕಾಡಿನಲ್ಲಿ ಹೆಚ್ಚಿನ ಭಾಗದ ಚಿತ್ರೀಕರಣ ಮಾಡಿದ್ದೇವೆ. ದೀಪಕ್ ರೈ ಪಾಣಾಜೆ, ಬಲರಾಜವಾಡಿ ಇತರೆ ಪಾತ್ರದಲ್ಲಿದ್ದಾರೆ. ಈಗಾಗಲೇ ಚಿತ್ರೀಕರಣ ಮುಗಿದಿದ್ದು, ಸದ್ಯದಲ್ಲೇ ತೆರೆಗೆ ತರುವ ಯೋಚನೆಯಿದೆ. ಸಹ್ಯಾದ್ರಿ ಸ್ಟುಡಿಯೋಸ್ ಅಡಿ ಈ ಚಿತ್ರವನ್ನು ನಾವೆಲ್ಲ ಸೇರಿ ನಿರ್ಮಿಸಿದ್ದೇವೆ ಎಂದು ಹೇಳಿದರು.

ನಂತರ ನಾಯಕ ಯಶ್ ಶೆಟ್ಟಿ ಮಾತನಾಡುತ್ತ, ಈ ಚಿತ್ರದಲ್ಲಿ ಕಥೆಯೇ ನಿಜವಾದ ಹೀರೋ, ನಾಡಲ್ಲಿರುವ ಮಂಗಗಳು ಕಾಡಿಗೆ ಹೋದಾಗ ಅಲ್ಲಿ ಏನೇನು ನಡೆಯುತ್ತೆ ಅಂತ ಈ ಚಿತ್ರದಲ್ಲಿ ಹೇಳಲಾಗಿದೆ. ನಾವೆಲ್ಲ 30 ದಿನಗಳವರೆಗೆ ಕಾಡಲ್ಲೇ ಇದ್ದು ಚಿತ್ರೀಕರಣ ಮಾಡಿದ್ದೇವೆ ಎಂದು ಹೇಳಿದರು. ನಾಯಕಿ ಹರ್ಷಿತಾ ರಾಮಚಂದ್ರ ಮಾತನಾಡುತ್ತ, ದಿವ್ಯ ಎಂಬ ಕರಾವಳಿ ಭಾಗದ ಯುವತಿಯಾಗಿ ನಾನೀ ಚಿತ್ರದಲ್ಲಿ ನಟಿಸಿದ್ದೇನೆ. ಆಕೆಗೆ ಜವಾಬ್ದಾರಿ ಇಲ್ಲದ ಹುಡುಗನ ಜೊತೆ ಪ್ರೀತಿಯಾಗುತ್ತದೆ, ಒಂದು ಕಡೆ ಕುಟುಂಬ, ಮತ್ತೊಂದು ಕಡೆ ಪ್ರೀತಿ. ಈ ಎರಡರಲ್ಲಿ ಆಕೆ ಯಾವುದನ್ನು ಆಯ್ಕೆ ಮಾಡಿಕೊಳ್ಳುತ್ತಾಳೆ ಎನ್ನುವುದೇ ನನ್ನ ಕ್ಯಾರೆಕ್ಟರ್ ಎಂದು ಹೇಳಿದರು.

ಕೊನೆಯಲ್ಲಿ ಮಾತನಾಡಿದ ಸಿಂಪಲ್‌ಸುನಿ, ನನ್ನ ಕೆಲವು ಚಿತ್ರಗಳಿಗೆ ಮಂಜು ಶೇಡ್ಗಾರ್ ಎಡಿಟರ್ ಆಗಿ ಮಾಡಿದ್ದಾರೆ. ಅವರಿಂದ ನನಗೆ ಈ ತಂಡದ ಪರಿಚಯವಾಯಿತು. ಚಿತ್ರ ಚೆನ್ನಾಗಿದೆ. ಹಾಗಾಗಿ ನಾನು ನಿಮ್ಮ ಜೊತೆ ಇರುತ್ತೇನೆಂದು ಹೇಳಿದೆ ಎಂದರು.

ಮೈಸೂರು ಮಿತ್ರ

ಶುಕ್ರವಾರ 25 ಅಕ್ಟೋಬರ್ 2024

ವಿಜೃಂಭಣೆಯ ಕನ್ನಡ ರಾಜ್ಯೋತ್ಸವಕ್ಕೆ ಎಲ್ಲರೂ ಸಹಕರಿಸಿ

ಪೂರ್ವಭಾವಿ ಸಭೆಯಲ್ಲಿ ಶಾಸಕ ಡಿ.ರವಿಶಂಕರ್ ಮನವಿ



ಕನ್ನಡ ರಾಜ್ಯೋತ್ಸವ ಪೂರ್ವಭಾವಿ ಸಭೆಯಲ್ಲಿ ಶಾಸಕ ಡಿ.ರವಿಶಂಕರ್ ಮಾತನಾಡಿದರು.

ಕೆ.ಆರ್.ನಗರ, ಅ.24– ಈ ಬಾರಿ ಕನ್ನಡ ರಾಜ್ಯೋತ್ಸವವನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸಲು ಎಲ್ಲರೂ ಸಹಕರಿಸಬೇಕು ಎಂದು ಶಾಸಕ ಡಿ.ರವಿಶಂಕರ್ ಮನವಿ ಮಾಡಿದರು.

ಪಟ್ಟಣದ ತಾಲೂಕು ಕಚೇರಿ ಸಭಾಂಗಣದಲ್ಲಿ ತಾಲೂಕು ನಾಡಹಬ್ಬಗಳ ಸಮಿತಿ ವತಿಯಿಂದ ನಡೆದ ಕನ್ನಡ ರಾಜ್ಯೋತ್ಸವ ಪೂರ್ವಭಾವಿ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ನ.1 ರಂದು ಬೆಳಗ್ಗೆ 9 ಗಂಟೆಗೆ ಪಟ್ಟಣದ ಜೂನಿಯರ್ ಕಾಲೇಜಿನ ಆವರಣದಿಂದ ಭುವನೇಶ್ವರಿ ಪ್ರತಿಮೆ ಮೆರವಣಿಗೆ ಆರಂಭವಾಗಲಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು. ಸರ್ಕಾರಿ ಇಲಾಖಾಧಿಕಾರಿಗಳು ಮತ್ತು ಸಿಬ್ಬಂದಿಗಳು ಮೆರವಣಿಗೆ ಹಾಗೂ ವೇದಿಕೆ ಕಾರ್ಯಕ್ರಮ ಮುಗಿಯುವವರೆಗೂ ಕಡ್ಡಾಯ ಹಾಜರಿರಬೇಕು ಎಂದು ತಾಕೀತು ಮಾಡಿದರು.

ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣ ಮಾಡಿದ ಮಾಜಿ ಸಿಎಂ ದಿವಂಗತ ಡಿ.ದೇವರಾಜ ಅರಸು ಮತ್ತು ಕನ್ನಡ ಸಾಹಿತ್ಯ ಪರಿಷತ್ ಆರಂಭಿಸಿದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಭಾವ ಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮೆರವಣಿಗೆಗೆ ಚಾಲನೆ ನೀಡಲಾಗುತ್ತದೆ ಎಂದರು.

ರಾಜ್ಯೋತ್ಸವಕ್ಕೆ ಹೆಚ್ಚು ಮೆರಗು ನೀಡಲು ಎಲ್ಲಾ ಇಲಾಖೆಗಳು ಆಕರ್ಷಕ ಸ್ತಬ್ಧ ಚಿತ್ರಗಳನ್ನು ತಯಾರಿಸಬೇಕು. ಎಲ್ಲಾ ಸರ್ಕಾರಿ ಕಚೇರಿಗಳಿಗೂ ಕಡ್ಡಾಯವಾಗಿ ದೀಪಾಲಂಕಾರ ಮಾಡಬೇಕು. ರಸ್ತೆ ಬದಿ ಅಂದವಾದ ರಂಗೋಲಿ ಬಿಡಿಸುವ ಮೂವರು ಮಹಿಳೆಯರಿಗೆ ನಗದು ಬಹುಮಾನ ಮತ್ತು ಪಾರಿತೋಷಕ ನೀಡಲಾಗುತ್ತದೆ ಎಂದ ಶಾಸಕರು, ಅಂಗಡಿ ಮುಂಗಟ್ಟುಗಳ ಎದುರು ವಿದ್ಯುತ್ ಮತ್ತು ಹೂವಿನ ಅಲಂಕಾರ ಮಾಡುವಂತೆ ಪುರಸಭಾ ಮುಖ್ಯಾಧಿಕಾರಿಗಳು ವರ್ತಕರಿಗೆ ತಿಳಿಸಬೇಕು ಎಂದರು.

ಸರ್ಕಾರಿ ಕಚೇರಿಗಳಲ್ಲಿ ಅಧಿಕಾರಿಗಳು ಮತ್ತು ಸಿಬ್ಬಂದಿ ಕಡ್ಡಾಯವಾಗಿ ಕನ್ನಡ ಭಾಷೆ ಬಳಸಬೇಕು ಮತ್ತು ಎಲ್ಲಾ ಬ್ಯಾಂಕುಗಳಲ್ಲಿ ಗ್ರಾಹಕರೊಂದಿಗೆ ಕನ್ನಡದಲ್ಲಿಯೇ ವ್ಯವಹರಿಸುವಂತೆ ತಹಸೀಲ್ದಾರ್ ಬ್ಯಾಂಕ್ ವ್ಯವಸ್ಥಾಪಕರಿಗೆ ಪತ್ರ ಬರೆದು ಕನ್ನಡಕ್ಕೆ ಆದ್ಯತೆ ನೀಡು ವಂತೆ ಸೂಚನೆ ನೀಡಬೇಕೆಂದರು.

ಸಭೆಯಲ್ಲಿ ತಾಲೂಕು ಕಸಾಪ ಅಧ್ಯಕ್ಷ ಜಿ.ಡಿಂಡಿಮ ಶಂಕರ್, ನಗರಾಧ್ಯಕ್ಷ ಮೋಹನ ಕುಮಾರ್, ಜಿಪಂ ಮಾಜಿ ಸದಸ್ಯರಾದ ಜಯರಾಮೇಗೌಡ, ಜಿ.ಆರ್.ರಾಮೇಗೌಡ, ರೈತ ಮುಖಂಡ ಎಂ.ಜೆ.ಕುಮಾರ್, ಪುರಸಭೆ ಮಾಜಿ ಅಧ್ಯಕ್ಷೆ ಗೀತಾ, ಸದಸ್ಯ ನಟರಾಜು, ತಾಲೂಕು ಕಾಂಗ್ರೆಸ್ ವಕ್ತಾರ ಸೈಯದ್ ಜಾಬೀರ್, ಮುಖಂಡರಾದ ರಾಜಯ್ಯ, ಸಂಪತ್ತೇಗೌಡ, ಎಸ್.ಆರ್. ಆನಂದ್, ಚೆಲುವರಾಜು, ತಿಮ್ಮಶೆಟ್ಟಿ, ಸುಧಾಕರ್, ಸರಿತಾ, ಲತಾ, ತಹಸೀಲ್ದಾರ್ ರಾದ ಜಿ.ಸುರೇಂದ್ರಮೂರ್ತಿ, ಎಸ್.ಎನ್. ನರಗುಂದ್, ಇಓ ವಿ.ಪಿ.ಕುಲದೀಪ್, ಪುರಸಭೆ ಮುಖ್ಯಾಧಿಕಾರಿ ಬಿ.ವಿ.ವೆಂಕಟೇಶ್, ಬಿಇಓ ಆರ್.ಕೃಷ್ಣಪ್ಪ, ಪೊಲೀಸ್ ಇನ್ಸ್‌ಪೆಕ್ಟರ್ ಕೆ.ಎಸ್.ಶಿವಪ್ರಕಾಶ್ ಮತ್ತಿತರರು ಇದ್ದರು.

ಸಭೆಗೆ ಗೈರಾದವರಿಗೆ ನೋಟಿಸ್ ನೀಡಲು ಸೂಚನೆ

ಕೆ.ಆರ್.ನಗರ: ಕನ್ನಡ ರಾಜ್ಯೋತ್ಸವ ಪೂರ್ವಭಾವಿ ಸಭೆಗೆ ಗೈರಾದ ತಾಲೂಕು ಮಟ್ಟದ ಅಧಿಕಾರಿಗಳಿಗೆ ನೋಟಿಸ್ ನೀಡುವಂತೆ ಶಾಸಕ ಡಿ.ರವಿಶಂಕರ್ ತಹಸೀಲ್ದಾರ್ ಜಿ.ಸುರೇಂದ್ರಮೂರ್ತಿ ಅವರಿಗೆ ಸೂಚಿಸಿದರು.

ತಾಲೂಕು ಕಚೇರಿಯಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಈ ವಿಚಾರದಲ್ಲಿ ನಿರ್ಲಕ್ಷ್ಯ ವಹಿಸುವವರಿಗೆ ಕ್ಷಮೆ ಇಲ್ಲ. ಸಭೆಗೆ ಬಾರದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ನಾನು ಜಿಲ್ಲಾಧಿಕಾರಿಗಳೊಂದಿಗೆ ಮಾತನಾಡಲಿದ್ದು, ಮುಂದೆ ಇದೇ ಚಾಳಿ ಮುಂದುವರಿಸಿದರೆ ಅಂತಹವರಿಗೆ ತಾಲೂಕಿನಿಂದ ಗೇಟ್‌ಪಾಸ್ ನೀಡುವುದಾಗಿ ಎಚ್ಚರಿಸಿದರು. ರಾಷ್ಟ್ರೀಯ ಹಬ್ಬ ಮತ್ತು ನಾಡಹಬ್ಬಗಳ ಪೂರ್ವಭಾವಿ ಸಭೆಯಲ್ಲಿ ತಾಲೂಕು ಮಟ್ಟದ ಅಧಿಕಾರಿಗಳು ಕಡ್ಡಾಯವಾಗಿ ಹಾಜರಿರಬೇಕು ಹಾಗೂ ಕಾರ್ಯಕ್ರಮ ಮತ್ತು ಮೆರವಣಿಗೆಯಲ್ಲಿ ಕಚೇರಿಯ ಎಲ್ಲಾ ಸಿಬ್ಬಂದಿ ಉಪಸ್ಥಿತರಿರಬೇಕೆಂದು ತಾಕೀತು ಮಾಡಿದರು.

ಪೋಲಿಯೋ ನಿರ್ಮೂಲನೆಯಲ್ಲಿ ರೋಟರಿ ಕ್ಲಬ್ ಪಾತ್ರ ಪ್ರಮುಖ

ಸಹಾಯಕ ಗವರ್ನರ್ ಆರ್.ಆನಂದ್



ಪೋಲಿಯೋ ದಿನಾಚರಣೆ ಅಂಗವಾಗಿ ಜಾಥಾ ನಡೆಯಿತು.

ಹುಣಸೂರು, ಅ.24– ಇಡೀ ದೇಶದಲ್ಲಿ ಪೋಲಿಯೋ ನಿರ್ಮೂಲನೆಯಲ್ಲಿ ಅಂತಾರಾಷ್ಟ್ರೀಯ ರೋಟರಿ ಕ್ಲಬ್ ಪಾತ್ರ ಪ್ರಮುಖ ಎಂದು ರೋಟರಿ ಸಹಾಯಕ ಗವರ್ನರ್ ಆರ್.ಆನಂದ್ ತಿಳಿಸಿದರು.

ನಗರದ ರೋಟರಿ ಸಂಸ್ಥೆ ವತಿಯಿಂದ ನಡೆದ 52ನೇ ಪೋಲಿಯೋ ದಿನಾಚರಣೆ ಜಾಥಾದಲ್ಲಿ ಮಾತನಾಡಿದ ಅವರು, ಹಲವು ದಶಕಗಳಿಂದ ದೇಶಕ್ಕೆ ಮಾರಕವಾಗಿದ್ದ ಪೋಲಿಯೋ ನಿರ್ಮೂಲನೆಗೆ ಮುಂದಾಗಿ ಇಡೀ ವಿಶ್ವದಲ್ಲಿ ಪಣತೊಟ್ಟು ನಿಂತ ಏಕೈಕ ಸಂಸ್ಥೆ ರೋಟರಿ ಸಂಸ್ಥೆ ಎಂದರು.

ಕಾರ್ಯದರ್ಶಿ ಹೆಚ್.ಆರ್.ಕೃಷ್ಣಕುಮಾರ್ ಮಾತನಾಡಿ, ಪೋಲಿಯೋ ರೋಗವನ್ನು ದೇಶದಿಂದಲೇ ಹೊರ ಹಾಕಿದ ಸೇವಾ ಸಂಸ್ಥೆ ರೋಟರಿ ಕ್ಲಬ್ ಆಗಿದೆ. ಆ ನಿಟ್ಟಿನಲ್ಲಿ ಇಂದಿಗೂ ಸಮಾಜಕ್ಕೆ ಸ್ನೇಹ ಸೇತುವೆಯಾಗಿ ನಿಂತಿರುವುದು ಶ್ಲಾಘನೀಯವೆಂದರು. ವಿಶ್ವಸಂಸ್ಥೆಯಲ್ಲಿ ಇಂದಿಗೂ ಆರೋಗ್ಯ ಬಗ್ಗೆ ಹೆಚ್ಚಿನ ಕಾಳಜಿ ವಹಿಸಿ ಸಹಕಾರ ನೀಡುತ್ತಿರುವ ರೋಟರಿ ಕ್ಲಬ್ ಧ್ಯೇಯ ಇಟ್ಟುಕೊಂಡು ಸಮಾಜಮುಖಿ ಕೆಲಸ ಮಾಡುವ ನಿಟ್ಟಿನಲ್ಲಿ ಮುಂಚೂಣಿಯಲ್ಲಿದೆ ಎಂದರು. ಜಾಥಾದಲ್ಲಿ ರೋಟರಿ ಸದಸ್ಯರಾದ ಚನ್ನಕೇಶವ, ಶ್ಯಾಮಣ್ಣ, ನಗರಸಭೆ ಸದಸ್ಯರಾದ ಶ್ರೀನಾಥ್, ಹರೀಶ್, ರಮೇಶ್, ಶಿಕ್ಷಕಿ ತೇಜಸ್ವಿನಿ, ಶಿಕ್ಷಕ ಪ್ರಸನ್ನ ಹಾಗೂ ಶಾಲಾ ಮಕ್ಕಳು ಇದ್ದರು.

ಮಳೆಗೆ ಮನೆ ಗೋಡೆ ಕುಸಿತ



ನಗರ್ಲೆ, ಅ.24– ಕಳೆದೊಂದು ವಾರದಿಂದ ಸುರಿದ ಭಾರೀ ಮಳೆಗೆ ಮನೆ ಗೋಡೆ ಕುಸಿದಿರುವ ಘಟನೆ ಗುರುವಾರ ಸಂಜೆ ನಂಜನಗೂಡು ತಾಲೂಕಿನ ನಗರ್ಲೆ ಗ್ರಾಮದಲ್ಲಿ ನಡೆದಿದೆ. ಗ್ರಾಮದ ನಿವಾಸಿ ಜವನಮ್ಮ ಎಂಬುವರಿಗೆ ಸೇರಿದ ಮನೆ ಗೋಡೆ ಕುಸಿದಿರುವುದು. ಮನೆಯಲ್ಲಿದ್ದ ದಿನಬಳಕೆಯ ವಸ್ತುಗಳ ಮೇಲೆ ಗೋಡೆ ಕುಸಿದಿರುವುದರಿಂದ ಅಪಾರ ನಷ್ಟ ಸಂಭವಿಸಿದ್ದು, ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ. ಹೀಗಾಗಿ ಸಂಬಂಧಪಟ್ಟ ಅಧಿಕಾರಿಗಳು ಪರಿಶೀಲನೆ ನಡೆಸಿ ಸರ್ಕಾರದ ವತಿಯಿಂದ ಸೂಕ್ತ ಪರಿಹಾರ ಕೊಡಿಸುವಂತೆ ಜವನಮ್ಮ ಒತ್ತಾಯಿಸಿದ್ದಾರೆ.

ಕ್ಷುಲ್ಲಕ ಕಾರಣಕ್ಕೆ ಯುವಕನ ಮೇಲೆ ಹಲ್ಲೆ



ಹುಣಸೂರು, ಅ.24– ಕ್ಷುಲ್ಲಕ ಕಾರಣಕ್ಕೆ ಯುವಕನ ಮೇಲೆ ಹಲ್ಲೆ ನಡೆಸಿರುವ ಘಟನೆ ತಾಲೂಕಿನ ಬಿಳಿಕೆರೆ ಗ್ರಾಮದಲ್ಲಿ ನಡೆದಿದೆ.

ಬಿಳಿಕೆರೆ ಸಮೀಪದ ಗಾಗೇನಹಳ್ಳಿ ಗ್ರಾಮದ ಕೆಂಪಯ್ಯ ಅವರ ಪುತ್ರ ನಂದೀಶ್ ಹಲ್ಲೆಗೊಳಗಾದ ವರು. ಅದೇ ಗ್ರಾಮದ ನಿಂಗರಾಜಪ್ಪನವರ ಪುತ್ರ ಕೀರ್ತಿ ಕುಮಾರ್, ಆತನ ಸ್ನೇಹಿತ ಮಧು ಹಲ್ಲೆ ನಡೆಸಿದ ಆರೋಪಿಗಳು.

ವಿವರ: ಬಿಳಿಕೆರೆ ಬೈಪಾಸ್ ರಸ್ತೆಯಲ್ಲಿರುವ ಕ್ಯಾಂಟೀನ್‌ನಲ್ಲಿ ತಿಂಡಿ ತಿನ್ನುವ ವೇಳೆ ನಂದೀಶ್ ಹಾಗೂ ಕೀರ್ತಿ ಕುಮಾರ್ ನಡುವೆ ಮಾತಿಗೆ ಮಾತು ಬೆಳೆದು ಗಲಾಟೆಯಾಗಿದೆ. ಈ ವೇಳೆ ನಂದೀಶ್‌ಗೆ ಕೀರ್ತಿ ಹಾಗೂ ಮಧು ಹಲ್ಲೆ ನಡೆಸಿದ್ದು, ಮುಖ, ತಲೆ ಸೇರಿದಂತೆ ಮತ್ತಿತರ ಕಡೆ ತೀವ್ರ ಪೆಟ್ಟಾಗಿದೆ ಇದೀಗ ನಂದೀಶ್ ಹುಣಸೂರು ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಈ ಸುಬಂಧ ಬಿಳಿಕೆರೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ

ಕಾರ್ಮಿಕರ ಸಮಸ್ಯೆ ಬಗೆಹರಿಸಲು ಕ್ರಮ



ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮದ ಅಧ್ಯಕ್ಷರಾದ ಕನೀಜ್ ಫಾತಿಮಾ ಅವರನ್ನು ಸನ್ಮಾನಿಸಲಾಯಿತು.

ತಿ.ನರಸೀಪುರ, ಅ.24– ಕಾರ್ಖಾನೆ ಕಾರ್ಮಿಕರ ಸಮಸ್ಯೆಗಳನ್ನು ಹಂತ ಹಂತವಾಗಿ ಬಗೆಹರಿಸಲಾಗುವುದು ಎಂದು ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ಅಧ್ಯಕ್ಷರಾದ ಕನೀಜ್ ಫಾತಿಮಾ ತಿಳಿಸಿದರು.

ಇದೇ ಮೊದಲ ಬಾರಿಗೆ ಪಟ್ಟಣದ ಕೆಎಸ್‌ಐಸಿ ರೇಷ್ಮೆ ನೂಲು ತೆಗೆಯುವ ಘಟಕಕ್ಕೆ ಭೇಟಿ ನೀಡಿದ ವೇಳೆ ದಲಿತ ಸಂಘರ್ಷ ಸಮಿತಿ (ಬಣ ರಹಿತ) ಜಿಲ್ಲಾ ಸಂಚಾಲಕ ಸಿ.ಉಮಾಮಹದೇವ ಹಾಗೂ ಬೆಂಬಲಿಗರಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಕಾರ್ಮಿಕರ ಸಮಸ್ಯೆಗಳ ಬಗ್ಗೆ ಅರಿವಿದ್ದು, ಮುಂದಿನ ದಿನಗಳಲ್ಲಿ ಅವರ ಸಮಸ್ಯೆಗಳಿಗೆ ಸ್ಪಂದಿಸಿ ಅವುಗಳನ್ನು ಹಂತ ಹಂತವಾಗಿ ಬಗೆಹರಿಸಲಾಗುವುದು. ಅಲ್ಲದೇ ಕೆಎಸ್‌ಐಸಿಯನ್ನು ಮತ್ತಷ್ಟು ಲಾಭದತ್ತ ಕೊಂಡೊಯ್ಯುತ್ತೇನೆ. ಕಾರ್ಮಿಕರ ಅಭಿವೃದ್ಧಿಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಈ ವೇಳೆ ಫಾರಾಜ್, ಜಿಲ್ಲಾ ಸಂಘಟನಾ ಸಂಚಾಲಕ ಆಲತ್ತೂರು ಶಿವರಾಜ್, ತಾಲೂಕು ಸಂಚಾಲಕ ಕೇತುಪುರ ಶಿವಪ್ರಕಾಶ್, ಚಂದಳ್ಳಿ ಮಲ್ಲೇಶ್, ಕೇತುಪುರ ರವೀಂದ್ರ, ಕಾರ್ಮಿಕ ಮುಖಂಡ ನಾಗೇಂದ್ರ, ದಲಿತ ಸಂಘರ್ಷ ಸಮಿತಿ ತಿ.ನರಸೀಪುರ ಟೌನ್ ಮುಖಂಡ ಮಹೇಶ್, ಕಲಾವಿದರ ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಬಿ.ಹುಂಡಿ ನಾಗೇಶ್, ಮುರಡೀಪುರ ಮಲ್ಲಿಕಾರ್ಜುನ, ಯಡದೊರೆ ಜಯಪ್ಪ, ಶಿವರಾಜ್, ಮಾದಾಪುರ ನಂಜುಂಡ, ಇಂಡವಾಳು ಪ್ರದೀಪ್ ಸೇರಿದಂತೆ ಹಲವರಿದ್ದರು.

ಕರಾಟೆ: ರಾಜ್ಯ ಮಟ್ಟಕ್ಕೆ ಆಯ್ಕೆ



ಹೆಚ್.ಡಿ.ಕೋಟೆ, ಅ.24– ಪಟ್ಟಣದ ಆದಿಚುಂಚನಗಿರಿ ಹಿರಿಯ ಪ್ರಾಥಮಿಕ ಶಾಲೆ ವಿದ್ಯಾರ್ಥಿನಿ ಎಂ.ವರ್ಷ ಅವರು 2024–25ನೇ ಸಾಲಿನ 14 ವರ್ಷ ವಯೋಮಾನದ ಕರಾಟೆ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸಿ ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಹುಣಸೂರಲ್ಲಿ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ



ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ ನಡೆಯಿತು.

ಹುಣಸೂರು, ಅ.24– ಸರ್ಕಾರದ ಮಹತ್ವಕಾಂಕ್ಷಿ 5 ಗ್ಯಾರಂಟಿ ಯೋಜನೆಗಳ ಯಶಸ್ವಿ ಅನುಷ್ಠಾನ ಕುರಿತು ಗುರುವಾರ ನಗರದ ತಾಪಂ ಸಭಾಂಗಣದಲ್ಲಿ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ ನಡೆಯಿತು.

ಗ್ಯಾರಂಟಿ ಯೋಜನೆಗಳ ಅನುಷ್ಠಾನದ ರಾಜ್ಯ ಉಪಾಧ್ಯಕ್ಷೆ ಡಾ.ಪುಷ್ಪ ಅಮರನಾಥ್ ಮಾತನಾಡಿ, ಪಂಚ ಗ್ಯಾರಂಟಿ ಯೋಜನೆ ಬಡವರ ಸ್ವಾವಲಂಬಿ ಜೀವನಕ್ಕಾಗಿ ದೂರದೃಷ್ಟಿವುಳ್ಳ ದೇಶದ ಅತೀ ದೊಡ್ಡ ಯೋಜನೆ. 52 ಸಾವಿರ ಕೋಟಿ ಮೊತ್ತದ ದೊಡ್ಡ ಯೋಜನೆಯಡಿ ರಾಜ್ಯದ 1.20 ಲಕ್ಷ ಮಹಿಳೆಯರಿಗೆ ಡಿಬಿಟಿ ಮೂಲಕ ನಗದು ನೇರವಾಗಿ ತಲುಪುತ್ತಿದೆ. ಅಧಿಕಾರಿಗಳು, ಗಂಭೀರವಾಗಿ ತೆಗೆದುಕೊಂಡು ಅನುಷ್ಠಾನವನ್ನು ಪ್ರಾಮಾಣಿಕವಾಗಿ ಮಾಡಬೇಕು ಎಂದರು. ಆಹಾರ ಇಲಾಖೆ ಶಿರಸ್ತೇದಾರ್ ಲಕ್ಷ್ಮಿ ಮಾತನಾಡಿ, ತಾಲೂಕಿನಲ್ಲಿ 74,650 ಅರ್ಹ ಬಿಪಿಎಲ್ ಕಾರ್ಡ್‌ಗಳಿದ್ದು, 71,291 ಕಾರ್ಡ್‌ದಾರರಿಗೆ ಹಣ ಸಂದಾಯವಾಗುತ್ತಿದೆ. ಇ–ಕೆವೈಸಿ ಮಾಡಿಸದವರಿಗೆ ಹಣ ಸಂದಾಯವಾಗಿಲ್ಲ. ಕೆಲ ನ್ಯಾಯಬೆಲೆ ಅಂಗಡಿ ಉಸ್ತುವಾರಿಗಳು ತಮಗೆ ಅನುಕೂಲವಾದ ಸಮಯಕ್ಕೆ ಅಂಗಡಿ ತೆರೆದು ಅಕ್ಕಿ ವಿತರಿಸುತ್ತಿರುವುದರಿಂದ ಕಾರ್ಮಿಕರಿಗೆ ತೊಂದರೆಯಾಗುತ್ತಿದೆ ಎಂದು ಹೇಳಿದರು.

ಚೆಸ್ಕಾಂ ಅಧಿಕಾರಿ ಜಗದೀಶ್ ಮಾತನಾಡಿ, ಗೃಹಜ್ಯೋತಿ ಯೋಜನೆಯಡಿ 84,909 ಜನರು ಹೆಸರನ್ನು ನೋಂದಾಯಿಸಿಕೊಂಡು 82,668 ಜನ ಸರ್ಕಾರದ ಲಾಭ ಪಡೆಯುತ್ತಿದ್ದಾರೆ. 2,241 ಗ್ರಾಹಕರು ನೋಂದಾಯಿಸಿಕೊಂಡಿಲ್ಲ ಎಂದರು.

ಗೃಹಲಕ್ಷ್ಮಿ ಯೋಜನೆಯಡಿ ತಾಲೂಕಿನ 78,983 ಅರ್ಜಿಗಳಲ್ಲಿ 431 ಬಾಕಿ ಉಳಿದಿವೆ ಎಂದು ಸಿಡಿಪಿಓ ತಿಳಿಸಿದರು. ಮುಂದಿನ ಸಭೆಯೊಳಗೆ ಎಲ್ಲಾ ಅರ್ಜಿ ವಿಲೇವಾರಿ ಮಾಡಿ ಅರ್ಹರಿಗೆ ಯೋಜನೆ ಲಾಭ ಮುಟ್ಟಿಸಬೇಕು ಎಂದರು.

ಜಿಲ್ಲಾ ಯುವ ನಿಧಿ ಅಧಿಕಾರಿ ರಾಣಿ ಯುವನಿಧಿ ಯೋಜನೆ ಬಗ್ಗೆ ಮಾಹಿತಿ ನೀಡಿದರು. ಈ ವೇಳೆ ರಾಜ್ಯ ಉಪಾಧ್ಯಕ್ಷೆ ಡಾ.ಪುಷ್ಪ ಪ್ರತಿ ಇಲಾಖೆ ಎದುರು ಸಾರ್ವಜನಿಕ ಸ್ಥಳಗಳಲ್ಲಿ ಗ್ಯಾರಂಟಿ ಯೋಜನೆಗಳ ನಾಮಫಲಕ ಕಡ್ಡಾಯವಾಗಿ ಅಳವಡಿಸುವಂತೆ ತಾಪಂ ಇಓಗೆ ಆದೇಶಿಸಿದರು.

ತಾಪಂ ಇಓ ಹೊಂಗಯ್ಯ ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ನೂತನ 15 ಸದಸ್ಯರನ್ನು ಸನ್ಮಾನಿಸಿದರು. ಸಮಿತಿ ಅಧ್ಯಕ್ಷ ರಘು, ಜಿಲ್ಲಾ ಸಮಿತಿ ಉಪಾಧ್ಯಕ್ಷ ಕುಮಾರ್, ಸಮಿತಿ ಸದಸ್ಯರು ಮತ್ತು ಸಂಬಂಧಿಸಿದ ಇಲಾಖಾಧಿಕಾರಿಗಳು ಸೇರಿದಂತೆ ಇನ್ನಿತರರಿದ್ದರು.

ಕ್ರೀಡಾ ಪಟುಗಳಿಗೆ ಸ್ಪರ್ಧಾ ಮನೋಭಾವ ಮುಖ್ಯ



ಜಿಲ್ಲಾ ಮಟ್ಟದ ಬ್ಯಾಡ್ಮಿಂಟನ್ ಪಂದ್ಯಾವಳಿಗೆ ಚಾಲನೆ ನೀಡಲಾಯಿತು.

ಬನ್ನೂರು, ಅ.24– ಯಾವುದೇ ಸ್ಪರ್ಧೆಯಲ್ಲಿ ಸೋಲು–ಗೆಲುವು ಸಹಜ. ಗೆದ್ದಾಗ ಹಿಗ್ಗದೇ ಸೋತಾಗ ಕುಗ್ಗದೇ ಕ್ರೀಡಾ ಮನೋಭಾವದಿಂದ ಎರಡನ್ನೂ ಸ್ವೀಕರಿಸಿದಾಗ ಮಾತ್ರ ಉತ್ತಮ ಕ್ರೀಡಾಪಟುವಾಗಲು ಸಾಧ್ಯ ಎಂದು ಎನ್‌ಸಿಆರ್ ಇಂಟರ್ ನ್ಯಾಷನಲ್ ವಿದ್ಯಾಸಂಸ್ಥೆ ಕಾರ್ಯದರ್ಶಿ ಟಿ.ಸಿ.ರಾಜೇಶ್ ತಿಳಿಸಿದರು.

ತುರಗನೂರು ಗ್ರಾಮದ ಎನ್‌ಸಿಆರ್ ಇಂಟರ್‌ನ್ಯಾಷನಲ್ ವಿದ್ಯಾಸಂಸ್ಥೆ ಆವರಣದಲ್ಲಿ ನಡೆದ 14ರಿಂದ 17 ವಯೋಮಾನದ ಬಾಲಕ–ಬಾಲಕಿಯರ ಜಿಲ್ಲಾ ಮಟ್ಟದ ಬ್ಯಾಡ್ಮಿಂಟನ್ ಪಂದ್ಯಾವಳಿಗೆ ಚಾಲನೆ ನೀಡಿ ಮಾತನಾಡಿದ ಅವರು, ಕ್ರೀಡೆಯಲ್ಲಿ ಗೆಲುವಿನಷ್ಟೇ ಸೋಲು ಮುಖ್ಯವಾಗಿದ್ದು, ವ್ಯಕ್ತಿ ಸೋತಾಗ ತಾನು ಯಾವ ಆಯಾಮದಲ್ಲಿ ಸೋತೆ? ತನ್ನ ಸೋಲಿಗೆ ಕಾರಣವೇನೆಂದು ಅವಲೋಕಿಸಿ ವಿಜಯದ ಮೆಟ್ಟಿಲನ್ನು ಹತ್ತಲು ಯತ್ನಿಸುತ್ತಾನೆಂದು ತಿಳಿಸಿದರು. ಜಿಲ್ಲಾ ಮಟ್ಟಕ್ಕೆ ಆಯ್ಕೆಯಾದ ಕ್ರೀಡಾಪಟುಗಳು ಉತ್ತಮರು. ಮುಂದಿನ ಹಂತಕ್ಕೆ ಆಯ್ಕೆ ಮಾಡಲು ಇಂದಿನ ಸ್ಪರ್ಧೆ ಒಂದು ಮಾನದಂಡವೇ ಹೊರತು ಕ್ರೀಡಾಪಟುಗಳಿಗೆ ಇದೇ ಅಂತಿಮ ವೇದಿಕೆಯಲ್ಲ ಎಂದು ವಿದ್ಯಾರ್ಥಿಗಳಿಗೆ ಸ್ಫೂರ್ತಿ ತುಂಬಿದರು.

ದೈಹಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಪರಶುರಾಮಪ್ಪ ಮಾತನಾಡಿ, ವಿದ್ಯಾರ್ಥಿಗಳಿಗೆ ಕಲಿಕೆಯಷ್ಟೇ ಸಹಪಠ್ಯ ಚಟುವಟಿಕೆಗಳು ಮುಖ್ಯ. ಪಂದ್ಯಾವಳಿ ಯಲ್ಲಿ ಸ್ಪರ್ಧಿಸುವ ಕ್ರೀಡಾಪಟುಗಳಿಗೆ ಅನಿರೀಕ್ಷಿತವಾಗಿ ಎದುರಾಗುವ ಸೋಲು ಮುಂದಿನ ಗೆಲುವಿಗೆ ಸ್ಫೂರ್ತಿಯಾಗಲಿದೆ ಎಂದರು.

ಬಿಇಓ ಶಿವಮೂರ್ತಿ ಮಾತನಾಡಿ, ಪಠ್ಯಪುಸ್ತಕಗಳಿಗೆ ವಿದ್ಯಾರ್ಥಿಗಳು ಎಷ್ಟು ಪ್ರಾಮುಖ್ಯತೆ ನೀಡುತ್ತಿರೋ ಅಷ್ಟೇ ಪ್ರಾಮುಖ್ಯತೆಯನ್ನು ಕ್ರೀಡೆಗಳಿಗೂ ನೀಡುವಂತೆ ತಿಳಿಸಿದರು. ಕಾರ್ಯಕ್ರಮದಲ್ಲಿ ಬಿಆರ್‌ಸಿ ನಾಗೇಶ್, ದೈಹಿಕ ಶಿಕ್ಷಣ ಪರೀಕ್ಷಕ ಮರಿಸ್ವಾಮಿ, ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಪುಟ್ಟಸ್ವಾಮಿ, ಸಿಆರ್‌ಪಿ ನಾಗೇಶ್, ರಾಜೇಂದ್ರ, ಸಂಸ್ಥೆ ಅಧ್ಯಕ್ಷ ಚನ್ನೇಗೌಡ, ನಂಜುಂಡೇಗೌಡ ಸೇರಿದಂತೆ ಇತರರು ಹಾಜರಿದ್ದರು.

ಸರಗೂರು: ಮಹಾಸಭಾ ಸದಸ್ಯತ್ವ ಅಭಿಯಾನಕ್ಕೆ ಚಾಲನೆ

ಸರಗೂರು, ಅ.24– ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲೂಕು ಘಟಕದ ಗೌರವಾಧ್ಯಕ್ಷ ಶ್ರೀಚನ್ನಬಸವ ಸ್ವಾಮೀಜಿ ಅವರು ಮಹಾಸಭಾ ಸದಸ್ಯತ್ವ ಅಭಿಯಾನಕ್ಕೆ ಚಾಲನೆ ನೀಡಿದರು.

ತಾಲೂಕಿನ ಹಂಚೀಪುರದಲ್ಲಿ ನೂರಕ್ಕೂ ಹೆಚ್ಚು ಮಂದಿ ಮಹಾಸಭಾದ ಸದಸ್ಯತ್ವ ಪಡೆದರು. ಈ ವೇಳೆ ಮಹಾಸಭಾ ತಾಲೂಕು ಅಧ್ಯಕ್ಷ ವೀರಭದ್ರಪ್ಪ, ಪ್ರಧಾನ ಕಾರ್ಯ ದರ್ಶಿ ಗುರುಸ್ವಾಮಿ, ಬಸವ ಬಳಗ ಅಧ್ಯಕ್ಷ ಗಣಪತಿ, ಮಾಜಿ ಅಧ್ಯಕ್ಷ ಮಹದೇವಪ್ಪ, ನಿರ್ದೇಶಕರಾದ ಹೆಚ್.ಸಿ.ಮಹಾದೇವಸ್ವಾಮಿ, ಮಾದಪ್ಪ, ಸಿದ್ದಪ್ಪ, ಮಂಜುನಾಥ್, ಜಯಕುಮಾರ್, ಸುರೇಶ್, ಯಜಮಾನರಾದ ಗುರುಸಿದ್ದಪ್ಪ, ಶಿವು, ಮಂಜು, ಶಾಮಣ್ಣ, ಮಾದಪ್ಪ, ಶೇಖರ್, ತೇಜು, ರಘು, ರವಿ, ಮಲ್ಲು ಹಾಜರಿದ್ದರು.



ಸದಸ್ಯತ್ವ ಅಭಿಯಾನಕ್ಕೆ ಚಾಲನೆ ನೀಡಲಾಯಿತು.

ತಾಲೂಕು ಕಚೇರಿಗೆ ಅಲೆದಾಡಿದರೂ ಸಾಗುವಳಿ ಪತ್ರ ನೀಡಿಲ್ಲ

ರೈತ ಬೂದನೂರು ವೆಂಕಟೇಶ್ ಆರೋಪ



ಸುದ್ದಿಗೋಷ್ಠಿಯಲ್ಲಿ ರೈತ ಬೂದನೂರು ವೆಂಕಟೇಶ್ ಮಾತನಾಡಿದರು.

ಹೆಚ್.ಡಿ.ಕೋಟೆ, ಅ.24– ತಾಲೂಕಿನಲ್ಲಿ ಕಳೆದ 50 ರಿಂದ 60 ವರ್ಷಗಳಿಂದ ಸಾಗುವಳಿ ಮಾಡುತ್ತಿರುವ 11,175 ರೈತರು ಸಾಗುವಳಿಗೆ ಅರ್ಜಿ ಸಲ್ಲಿಸಿ, ತಾಲೂಕು ಕಚೇರಿಗೆ ಅಲೆದಾಡಿದರೂ ಸಾಗುವಳಿ ಪತ್ರ ನೀಡಿಲ್ಲ ಎಂದು ರೈತ ಬೂದನೂರು ವೆಂಕಟೇಶ್ ಆರೋಪಿಸಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಸಂಬಂಧ ಕರ್ನಾಟಕ ಭೂ ಹಕ್ಕುದಾರರ ವೇದಿಕೆ ರಾಜ್ಯಾದ್ಯಂತ ಈಗಾಗಲೇ 10 ವರ್ಷಗಳಿಂದ ಹೋರಾಡುತ್ತಾ ಬಂದಿದೆ. ಕಳೆದ ಹತ್ತಾರು ವರ್ಷಗಳಿಂದ ಸ್ವಾಧೀನದಲ್ಲಿರುವ ಜಮೀನಿಗೆ ರೈತರು ಈಗಾಗಲೇ ಫಾರಂ ನಂ.50, 57ರಲ್ಲಿ ಅರ್ಜಿ ಸಲ್ಲಿಸಿದ್ದು ಬಹಳಷ್ಟು ಅರ್ಜಿದಾರರಿಗೆ ಸಾಗುವಳಿ ಪತ್ರ ಇದುವರೆಗೂ ದೊರೆಯದೆ, ಪ್ರಕೃತಿ ವಿಕೋಪ, ಕಾಡುಪ್ರಾಣಿಗಳಿಂದ ಬೆಳೆ ನಷ್ಟವಾದಾಗ ಪರಿಹಾರ ಹಾಗೂ ಸರ್ಕಾರದ ಸವಲತ್ತುಗಳನ್ನು ಪಡೆಯಲು ಸಾಧ್ಯವಾಗದೆ ಅವಕಾಶ ವಂಚಿತರಾಗಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಪ್ರತಿಭೆ ಸಂಸ್ಥೆ ಸಂಯೋಜಕ ಶಿವರಾಜು ಮಾತನಾಡಿ, ಈ ಸಂಬಂಧ ಈಗಾಗಲೇ ಫಾರಂ ನಂ.57 ರಲ್ಲಿ ಹೆಚ್.ಡಿ.ಕೋಟೆ ತಾಲೂಕಿನ ಹಂಪಾಪುರ ಹೋಬಳಿಯಿಂದ 3677, ಕಸಬಾ ಹೋಬಳಿಯಿಂದ 2912, ಅಂತರಸಂತೆ ಹೋಬಳಿಯಿಂದ 1261, ಒಟ್ಟು 7850, ಸರಗೂರು ತಾಲೂಕು, ಸರಗೂರು ಹೋಬಳಿ ಯಿಂದ 2009, ಕಂದಲಿಕೆ ಹೋಬಳಿಯಿಂದ 1286, ಒಟ್ಟು 3325, ಹೆಗ್ಗಡದೇವನಕೋಟೆ ವಿಧಾನಸಭೆ ಕ್ಷೇತ್ರದಿಂದ ಒಟ್ಟು 11175 ಅರ್ಜಿಗಳು ಸಲ್ಲಿಕೆಯಾಗಿವೆ. ಆದ್ದರಿಂದ ರೈತರ ಅರ್ಜಿಗಳನ್ನು ಪರಿಶೀಲಿಸಿ ಭೂ ಮಾಪನ ಇಲಾಖೆಯಿಂದ ನಕ್ಷೆ ತಯಾರಿಸಿ ಕಂದಾಯ ಅಧಿಕಾರಿಗಳು ಸ್ಥಳ ಪರಿಶೀಲಿಸಿ ಅರ್ಹ ಫಲಾನುಭವಿಗಳಿಗೆ ಸಾಗುವಳಿ ನೀಡುವಂತೆ ಮನವಿ ಮಾಡಿದರು.

ನೋಂದಿರುವ ಸಾವಿರಾರು ಬಗರ್ ಹುಕುಂ ಸಾಗುವಳಿ ರೈತರು ಈ ಸಂಬಂಧ ಹೋರಾಡುತ್ತಾ ಬಂದಿದ್ದು, ಅಲ್ಲಲ್ಲಿ ಸಕಾರಾತ್ಮಕ ಸ್ಪಂದನೆ ದೊರೆತಿದೆ. ಪ್ರಸ್ತುತ ರಾಜ್ಯ ಸರ್ಕಾರ ಈ ಬಗ್ಗೆ ಕಾಳಜಿ ತೋರುತ್ತಿದ್ದು, ಕಂದಾಯ ಸಚಿವ ಕೃಷ್ಣ ಭೈರೇಗೌಡರು ಬಗರ್ ಹುಕುಂ ಸಾಗುವಳಿ ವಿಚಾರವಾಗಿ ರೈತರ ಪರ ಹೇಳಿಕೆ ನೀಡುತ್ತಿದ್ದು, ಇನ್ನು 6 ತಿಂಗಳೊಳಗೆ ಸಾಗುವಳಿಗೆ ಅರ್ಜಿ ಸಲ್ಲಿಸಿರುವ ಅರ್ಹ ರೈತರಿಗೆ ಸಾಗುವಳಿ ಚೀಟಿ ನೀಡುವಂತೆ ಅಧಿಕಾರಿಗಳಿಗೆ ಮಾರ್ಗದರ್ಶನ ನೀಡುತ್ತಿರುವುದು ನಮ್ಮ ರೈತರಲ್ಲಿ ಭರವಸೆ ಮೂಡಿಸಿದೆ ಎಂದರು.

ಶಾಸಕ ಅನಿಲ್ ನೇತೃತ್ವದಲ್ಲಿ ಈಗಾಗಲೇ ಭೂ ಸಕ್ರಮೀಕರಣ ಸಮಿತಿ ರಚನೆಯಾಗಿದ್ದು, ತ್ವರಿತಗತಿಯಲ್ಲಿ ಸಭೆ ನಡೆಸಿ ರೈತರಿಗೆ ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ ಶಾಸಕರು, ತಹಸೀಲ್ದಾರ್ ಹಾಗೂ ಅಧಿಕಾರಿ ವರ್ಗದವರು ಅರ್ಹ ರೈತರನ್ನು ಗುರುತಿಸಿ ಸಾಗುವಳಿ ಚೀಟಿ ಅಥವಾ ಹಕ್ಕು ಪತ್ರ ನೀಡುವ ಮೂಲಕ ಭೂಮಿಯನ್ನೇ ನಂಬಿ ಬದುಕುತ್ತಿರುವ ರೈತರ ಬಾಳಿಗೆ ಬೆಳಕಾಗಬೇಕೆಂದು ಆಗ್ರಹಿಸಿದ್ದಾರೆ. ಈ ವೇಳೆ ನಾಗೇಂದ್ರ ಕುಮಾರ್, ಹೆಚ್.ಎಸ್.ವಿ.ಸುಬ್ಬಣ್ಣ, ಮುನಿಯಾಂಡಿ, ಕೆ.ಎಂ.ಸುಶೀಲ, ಗೋಪಾಲರಾಜು, ಮಾರ್ಶಲಿನ್, ರಿತೇಶ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು

ಚೌಹಳ್ಳಿಯಲ್ಲಿ ಕೆರೆ ಹಸ್ತಾಂತರ, ಬಾಗಿನ ಸಮರ್ಪಣೆ



ಕಾರ್ಯಕ್ರಮವನ್ನು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಜಿಲ್ಲಾ ನಿರ್ದೇಶಕ ಬಿ.ಜಯರಾಮ್ ನಲ್ಲಿತಾಯ ಉದ್ಘಾಟಿಸಿದರು.

ತಿ.ನರಸೀಪುರ, ಅ.24– ಗ್ರಾಮದ ಕೆರೆ ಪ್ರಾಣಿ–ಪಕ್ಷಿ, ಜನಜಾನುವಾರುಗಳ ಕುಡಿಯುವ ನೀರಿಗೆ, ಜಲಚರಗಳಿಗೆ ಆವಾಸ ಸ್ಥಾನವಾಗಿದೆ ಎಂದು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮೈಸೂರು ಪ್ರಾದೇಶಿಕ ನಿರ್ದೇಶಕ ಬಿ. ಜಯರಾಮ್ ನಲ್ಲಿತಾಯ ತಿಳಿಸಿದರು.

ಪಟ್ಟಣ ಸಮೀಪದ ಚೌಹಳ್ಳಿ ಗ್ರಾಮದ ಸರ್ಕಾರಿ ಕೆರೆ ಆವರಣದಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಕೆರೆ ಸಮಿತಿ ಹಾಗೂ ಗ್ರಾಪಂ ಸಹಕಾರದೊಂದಿಗೆ ನಡೆದ 633ನೇ ನಮ್ಮೂರು ನಮ್ಮ ಕೆರೆ ಹಸ್ತಾಂತರ ಹಾಗೂ ಬಾಗಿನ ಸಮರ್ಪಣೆ ಕಾರ್ಯಕ್ರಮವನ್ನು ಕರೆಗೆ ಬಾಗಿನ ಅರ್ಪಿಸಿ ಬಳಿಕ ಗಿಡಕ್ಕೆ ನೀರು ಹಾಕುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ಒಂದು ಗ್ರಾಮಕ್ಕೆ ಕೆರೆ, ಬಾವಿ, ದೇವಸ್ಥಾನ, ಸಮುದಾಯ ಭವನ, ಆಸ್ಪತ್ರೆ, ಅಂಗನವಾಡಿ ಕೇಂದ್ರಗಳು ಸಂಪತ್ತಿದ್ದಂತೆ. ಇದನ್ನು ಸಂರಕ್ಷಿಸಿ ಉಳಿಸಿ ಬಳಸಿ ಮುಂದಿನ ಪೀಳಿಗೆಗೆ ವರ್ಗಾಯಿಸುವುದು ಬಹಳ ಅಗತ್ಯ ಎಂದರು.

ಹಿರಿಯ ಜಿಲ್ಲಾ ನಿರ್ದೇಶಕ ವಿಜಯಕುಮಾರ್ ನಾಗನಾಳ ಮಾತನಾಡಿ, ಕೆರೆಗಳನ್ನು ಉಳಿಸಿ ಬೆಳೆಸುವುದರಿಂದ ಅಂತರ್ಜಲ ಅಭಿವೃದ್ಧಿಯಾಗಿ ರೈತ ಬಾಂಧವರು ಕೃಷಿ ಕಾರ್ಯ ನಡೆಸಲು ಸಹಕಾರಿಯಾಗುತ್ತದೆ ಎಂದರು.


ಇದೇ ವೇಳೆ ಕೆರೆ ಅಭಿವೃದ್ಧಿ ಕೆಲಸ ಸುಗಮವಾಗಿ ಸಾಗಲು ಸಹಕರಿಸಿದ ಕೆರೆ ಸಮಿತಿ ಹಾಗೂ ಗ್ರಾಪಂಗೆ ಕೃತಜ್ಞತೆ ಅರ್ಪಿಸಿದರು.

ಜಿಲ್ಲಾ ಜನಜಾಗೃತಿ ವೇದಿಕೆ ಅಧ್ಯಕ್ಷ ಕೆ.ಎನ್. ಪ್ರಭುಸ್ವಾಮಿ ಮಾತನಾಡಿ, ವೀರೇಂದ್ರ ಹೆಗ್ಗಡೆ ಹಾಗೂ ಅವರ ಶ್ರೀಮತಿಯವರ ಕಾಳಜಿಯಿಂದ ಯೋಜನೆ ಪ್ರಾರಂಭವಾಗಿ ಲಕ್ಷಾಂತರ ಕುಟುಂಬಗಳ ಬಾಳಿಗೆ ಬೆಳಕಾಗಿದ್ದಾರೆ ಹಾಗೂ ಬೇಸಿಗೆ ಕಾಲದಲ್ಲಿ ಪಶು ಪಕ್ಷಿ ಪ್ರಾಣಿಗಳ ಕುಡಿಯುವ ನೀರಿನ ಬವಣೆಯನ್ನು ಅರಿತು ಕೆರೆಗಳನ್ನು ಪುನಶ್ಚೇತನಗೊಳಿಸುತ್ತಿರುವುದು. ಅವುಗಳ ಸಂರಕ್ಷಣೆಗೆ ಹಿಡಿದ ಕೈಗನ್ನಡಿಯಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಕ್ಷೇತ್ರ ಯೋಜನಾಧಿಕಾರಿ ಹನುಮಂತಪ್ಪ ಅಂಗಡಿ, ಗ್ರಾಪಂ ಅಧ್ಯಕ್ಷ ತ್ರಿಪುರ, ಕೆರೆ ಅಭಿಯಂತರರಾದ ಪುಷ್ಪರಾಜ್, ಅಭಿವೃದ್ಧಿ ಅಧಿಕಾರಿಗಳಾದ ಸ್ವಾಮಿರಾವ್, ಕೆರೆ ಸಮಿತಿ ಅಧ್ಯಕ್ಷ ಎಂ.ಗಿರೀಶ್, ಎಸ್.ಮಲ್ಲೇಶ್, ರಾಚಯ್ಯ, ಕುಳ್ಳಪ್ಪ, ರಾಜೇಶ್, ನಂಜುಂಡಸ್ವಾಮಿ, ರೈತ ಮುಖಂಡರಾದ ಕಿರಗಸೂರು ಶಂಕರ್, ಪ್ರಸಾದ್ ನಾಯಕ್, ಆಲಗೂಡು ನಾಗರಾಜ್, ಬಸವ ತತ್ವಗಳ ಪ್ರಚಾರಕ ನಿಂಗರಾಜಪ್ಪ, ಸುವರ್ಣ ಮರಿಸ್ವಾಮಿ, ಕೃಷಿ ಮೇಲ್ವಿಚಾರಕರಾದ ಕುಮಾರ್ ಟಿ.ಆರ್, ವಲಯ ಮೇಲ್ವಿಚಾರಕಿ ಜ್ಯೋತಿ, ಸೇವಾ ಪ್ರತಿನಿಧಿಗಳಾದ ಮಹದೇವಮ್ಮ, ಮಂಜುಳಾ, ಚಿನ್ನಸ್ವಾಮಿ, ಪುಟ್ಟರಾಜು, ರುಕ್ಮಿಣಿ, ಮಹದೇವಮ್ಮ, ಸಂಘದ ಸದಸ್ಯರು, ಗ್ರಾಮಸ್ಥರು ಉಪಸ್ಥಿತರಿದ್ದರು.

ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲಾ ಮಕ್ಕಳ ಕೌಶಲಕ್ಕೆ ಮಾರುಹೋದ ಪ್ರವಾಸಿಗರು

ಒಂದೋ-ಎರಡೋ ಹತ್ತಾರು ಚಮತ್ಕಾರ



ಸೇನಾ ಗಡಿ ಪ್ರದೇಶದಲ್ಲಿ ಅಳವಡಿಸಲು ಸೆನ್ಸಾರ್ ಬೋರ್ಡ್ ರೂಪಿಸಿರುವುದು.



ಸಮಾಜ ಕಲ್ಯಾಣ ಇಲಾಖೆಯ ಉಪಗ್ರಹ ಉಡಾವಣೆಯ ರಾಕೆಟ್ ಮಾದರಿಯ ಬೃಹತ್ ಮಳಿಗೆ



ಸೆನ್ಸಾರ್ ಡಸ್ಟ್‌ಬಿನ್ ರೂಪಿಸಿರುವ ಕೂಡ್ಲೂರು ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ ವಿದ್ಯಾರ್ಥಿನಿಯರು

ಮೈಸೂರು, ಅ.24(ಎಂಕೆ)- ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲಾ ಮಕ್ಕಳ ಕೌಶಲಕ್ಕೆ ಪ್ರವಾಸಿಗರು ನಿಬ್ಬೆರಗು... ವಿಜ್ಞಾನ-ತಂತ್ರಜ್ಞಾನದ ವಿವರಣೆ, ಆವಿಷ್ಕಾರದ ಅವಲಂಬನೆಗೆ ಸಲಹೆ...!

ಮೈಸೂರು ದಸರಾ ವಸ್ತುಪ್ರದರ್ಶನದಲ್ಲಿ ಸಮಾಜ ಕಲ್ಯಾಣ ಇಲಾಖೆ ಅಡಿಯಲ್ಲಿ ಬರುವ ವಿವಿಧ ಅಭಿವೃದ್ಧಿ ನಿಗಮಗಳ ಮಾಹಿತಿಯನ್ನೊಳಗೊಂಡ ಚಂದ್ರಯಾನ ಉಪಗ್ರಹ ಉಡಾವಣೆಯ ರಾಕೆಟ್ ಮಾದರಿಯ ಬೃಹತ್ ಮಳಿಗೆಯಲ್ಲಿ ವಿಜ್ಞಾನ-ತಂತ್ರಜ್ಞಾನದ ಆವಿಷ್ಕಾರದ ಜೊತೆಗೆ ನಿಗಮಗಳಿಂದ ದೊರೆಯುವ ಸಾಲ-ಸೌಲಭ್ಯಗಳ ಸಂಪೂರ್ಣ ಮಾಹಿತಿಗಳನ್ನು ಅನಾವರಣಗೊಳಿಸಲಾಗಿದೆ

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ವ್ಯಾಪ್ತಿಯಲ್ಲಿ ಬರುವ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯ ಹೆಣ್ಣು ಮಕ್ಕಳು ಚಮತ್ಕಾರ ಮಾಡಿದ್ದರೆ, ಇನ್ಫೋಸಿಸ್ ಪ್ರತಿಷ್ಠಾನದ ಹೆಣ್ಣು ಮಕ್ಕಳ ಸ್ವಾಸ್ಥ್ಯ ಕಾರ್ಯಕ್ರಮದಡಿ ಕಡಿಮೆ ಬೆಲೆಗೆ ನೀಡುವ ಕಾಟನ್ ಸ್ಯಾನಿಟರಿ ಪ್ಯಾಡ್ ಮಹಿಳೆಯರ ಖರ್ಚು ತಗ್ಗಿಸುವಲ್ಲಿ ಸಹಕಾರಿಯಾಗಿದೆ.

ಕೈ ಹತ್ತಿರ ತೋರುತ್ತಿದ್ದಂತೆ ಮುಚ್ಚಳ ತೆರೆಯುವ ಸೆನ್ಸಾರ್ ಡಸ್ಟ್‌ಬಿನ್(ಕಸದ ಬುಟ್ಟಿ) ರೂಪಿಸಿರುವ ಮೈಸೂರು ಜಿಲ್ಲೆಯ ಟಿ.ನರಸೀಪುರ ತಾಲೂಕು ಕೂಡ್ಲೂರು ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ ವಿದ್ಯಾರ್ಥಿನಿಯರು ಮನೆಗಳಲ್ಲಿ ಬಳಸುವ ಮಾಮೂಲಿ ಡಸ್ಟ್‌ಬಿನ್‌ಗಳಿಗಿಂತ ಸೆನ್ಸಾರ್ ಡಸ್ಟ್‌ಬಿನ್‌ನ ಉಪಯುಕ್ತತೆಯ ಕುರಿತು ಪ್ರವಾಸಿಗರಿಗೆ ಮಾಹಿತಿ ನೀಡುತ್ತಿದ್ದಾರೆ.

ಮಾಮೂಲಿಗಳ ಡಸ್ಟ್‌ಬಿನ್‌ಗಳ ಮುಚ್ಚಳವನ್ನು ಕೈಯಿಂದಲೇ ತೆಗೆಯಬೇಕು. ಇದರಿಂದ ಮುಚ್ಚಳದಲ್ಲಿರುವ ಕ್ರಿಮಿಕೀಟಗಳಿಂದ ಅನಾರೋಗ್ಯ ಉಂಟಾಗಲಿದೆ. ಆದ್ದರಿಂದ ಕೈಯಿಂದ ಮುಟ್ಟದೆ ಮುಚ್ಚಳ ತೆರೆಯುವ ಸೆನ್ಸಾರ್ ಡಸ್ಟ್‌ಬಿನ್ ಬಳಕೆ ಆರೋಗ್ಯಕರ ಹಾಗೂ ಉಪಯುಕ್ತವಾಗಿದೆ ಎಂಬುದನ್ನು ತಿಳಿಸಿಕೊಟ್ಟಿದ್ದಾರೆ.

ಹಾಗೆಯೇ ಹೆಬ್ಬೂರಿನ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ ವಿದ್ಯಾರ್ಥಿನಿಯರು, ಗಡಿಯಲ್ಲಿ ಸೈನಿಕರಿಗೆ ಉಪಯುಕ್ತವಾಗುವ ಸೆನ್ಸಾರ್ ಯಂತ್ರಗಳನ್ನು ಆವಿಷ್ಕಾರ ಮಾಡಿದ್ದಾರೆ. ಬಾರ್ಡರ್‌ನಲ್ಲಿ ಸೆನ್ಸಾರ್ ಲೈಟ್‌ಗಳನ್ನು ಅಳವಡಿಸಿ, ಶತ್ರುಗಳ ನುಸುಳುವಿಕೆಯ ಮಾಹಿತಿಯನ್ನು ನೀಡಲಿವೆ. ಅಲ್ಲದೆ ಆಕಾಶದಿಂದ ದಾಳಿ ನಡೆಸುವ ರಾಕೆಟ್, ಡ್ರೋನ್‌ಗಳ ದಾಳಿಯನ್ನು ಕ್ಷಿಪ್ರವಾಗಿ ಪತ್ತೆ ಹಚ್ಚುವ ಯಂತ್ರಗಳ ಆವಿಷ್ಕಾರ ಮಳಿಗೆಗೆ ಭೇಟಿ ನೀಡುವವರನ್ನು ನಿಬ್ಬೆರಗಾಗುವಂತೆ ಮಾಡಿದೆ. ಅದೇ ರೀತಿ ಪಿರಿಯಾಪಟ್ಟಣ ತಾಲೂಕಿನ ಅಬ್ಬಳತಿಯ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ ವಿದ್ಯಾರ್ಥಿನಿಯರು ಅರಣ್ಯ ಸಂರಕ್ಷಣೆ ಕುರಿತು ಹೊಸ ತಂತ್ರಜ್ಞಾನವನ್ನು ಆವಿಷ್ಕರಿಸಿದ್ದಾರೆ.

ಕಡಿಮೆ ಬೆಲೆಯ ಸ್ಯಾನಿಟರಿ ಪ್ಯಾಡ್: ಮಹಿಳೆಯರು, ಶಾಲಾ-ಕಾಲೇಜು ಹೆಣ್ಣುಮಕ್ಕಳಿಗೆ ಉಪಯುಕ್ತ ಹಾಗೂ ಕಡಿಮೆ ಖರ್ಚಿನ ಸ್ಯಾನಿಟರಿ ಪ್ಯಾಡ್‌ಗಳನ್ನು ಇನ್ಫೋಸಿಸ್ ಪ್ರತಿಷ್ಠಾನದ ಹೆಣ್ಣು ಮಕ್ಕಳ ಸ್ವಾಸ್ಥ್ಯ ಕಾರ್ಯಕ್ರಮದಡಿ ಮಾರಾಟ ಮಾಡಲಾಗುತ್ತಿದೆ. ಇದರ ನಡುವೆ ಎಂಎಸ್‌ಐಎಲ್ ನೋಟ್ ಪುಸ್ತಕಗಳು, ಮೈಸೂರ್ ಸ್ಯಾಂಡಲ್ ಸೋಪ್ ಹಾಗೂ ಇನ್ನಿತರೆ ಉತ್ಪನ್ನಗಳನ್ನು ಅನಾವರಣಗೊಳಿಸಲಾಗಿದೆ.

ಮಾಹಿತಿ ಹಂಚಿಕೆ: ಮಳಿಗೆಯಲ್ಲಿ ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮ, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ, ಕೇಂದ್ರ ಪರಿಹಾರ ಸಮಿತಿ, ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ, ಕರ್ನಾಟಕ ಅಲೆಮಾರಿ ಹಾಗೂ ಅರೆ ಅಲೆಮಾರಿ ಅಭಿವೃದ್ಧಿ ನಿಗಮ ಸೇರಿದಂತೆ ಸಮಾಜ ಕಲ್ಯಾಣ ಇಲಾಖೆಯಡಿ ಬರುವ ಎಲ್ಲಾ ನಿಗಮಗಳಲ್ಲಿ ದೊರೆಯುವ ಸಾಲ-ಸೌಲಭ್ಯಗಳ ಮಾಹಿತಿಯನ್ನು ನೀಡಲಾಗುತ್ತಿದೆ. 10ಕ್ಕೂ ಹೆಚ್ಚು ಟಿವಿಗಳನ್ನು ಅಳವಡಿಸಿ, ಪೂರಕ ಮಾಹಿತಿಯನ್ನು ಒದಗಿಸಲಾಗುತ್ತಿದೆ.

ಅಂಬೇಡ್ಕರ್ ಬಳಿ ಸೆಲ್ಫಿ: ಮಳಿಗೆಯ ಮಧ್ಯದಲ್ಲಿರುವ ಸುಮಾರು 15 ಅಡಿ ಎತ್ತರದ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಬಳಿ ಮಳಿಗೆ ವೀಕ್ಷಿಸಿದ ಪ್ರವಾಸಿಗರು ಸೆಲ್ಫಿ ಕ್ಲಿಕ್ಕಿಸಿಕೊಳ್ಳುವುದು ವಿಶೇಷವಾಗಿ ಕಾಣುತ್ತಿದೆ. ಮಳಿಗೆಯಿಂದ ಹೊರಗಡೆ ಹೋಗುವಾಗಲೂ ವಿಶ್ರಾಂತ ಕೊಠಡಿ ಇದ್ದು, ಪ್ರವಾಸಿಗರ ಅನುಕೂಲ ಮತ್ತು ಆಕರ್ಷಣೆಗೆ ಅನುಗುಣವಾಗಿ ಮಳಿಗೆ ನಿರ್ಮಿಸಲಾಗಿದೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	**(ದೂ: 2521923)**
ನಸಾಬ್ (ಕ)	1 ಪ್ರದರ್ಶನಗಳು
ಅನ್ನ (ಕ)	3 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಎಲ್ಲಿಗೆ ಪಯಣ ಯಾವುದೋ ದಾರಿ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ದಿ ಹಂಟರ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಯಲಾ ಕುನ್ನಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಮಾರ್ಟಿನ್ (ಕ)	4 ಪ್ರದರ್ಶನಗಳು
ರಾಜಕಮಲ್	
ದೇವರ (ತೆ)	4 ಪ್ರದರ್ಶನಗಳು
ಸಂಗಂ	
ಮಾರ್ಟಿನ್ (ಕ)	4 ಪ್ರದರ್ಶನಗಳು
ಲಿಡೋ	
ಪ್ರಾಪ್ತಿ (ಕ)	2 ಪ್ರದರ್ಶನಗಳು
ಕೃಷ್ಣಂ ಪ್ರಣಯ ಸಖಿ (ಕ)	2 ಪ್ರದರ್ಶನಗಳು
ತಿಬ್ಬಾದೇವಿ	
ವೇಟೇಯನ್ (ತ)	4 ಪ್ರದರ್ಶನಗಳು
ಪ್ರಭಾ	
ಮೂಕ ಜೀವ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ವೇನಂ ದಿ ಲಾಸ್ಟ್ ಡ್ಯಾನ್ಸ್ (3ಡಿ)(ಇಂ): ಬೆ.11.05ಕ್ಕೆ, ಮ.1.30ಕ್ಕೆ, ರಾ.7.15ಕ್ಕೆ, ರಾ.9.45ಕ್ಕೆ, ವೆಟ್ಟೈಯನ್ (ತ): ಸಂ.4ಕ್ಕೆ.
ಸ್ಕ್ರೀನ್ 2	ದಿ ವೈಲ್ಡ್ ರೋಬೋಟ್ (3ಡಿ)(ಇಂ): ಬೆ.11ಕ್ಕೆ, ಮಾರ್ಟಿನ್ (ಕ): ಮ.1.10ಕ್ಕೆ, ವೆಟ್ಟೈಯನ್ (ತ): ಸಂ.4.05ಕ್ಕೆ, ಯಲಾ ಕುನ್ನಿ (ಕ): ರಾ.7.10ಕ್ಕೆ, ನರುಡಿ ಬ್ರದುಕು ನಟನ (ತೆ): ರಾ.9.50ಕ್ಕೆ.
ಸ್ಕ್ರೀನ್ 3	ಎಲ್ಲಿಗೆ ಪಯಣ ಯಾವುದೋ ದಾರಿ (ಕ): ಬೆ.10.35ಕ್ಕೆ, ಇಬ್ಬನಿ ತಬ್ಬಿದ ಇಳೆಯಲಿ (ಕ): ಮ.1.15ಕ್ಕೆ, ಅನ್ನ (ಕ): ಸಂ.4.30ಕ್ಕೆ, ಮರ್ಫಿ (ಕ): ರಾ.7ಕ್ಕೆ, ಪಣಿ (ಮ): ರಾ.9.50ಕ್ಕೆ.
ಸ್ಕ್ರೀನ್ 4	ನಸಾಬ್ (ಕ): ಬೆ.10.20ಕ್ಕೆ, ವೆಟ್ಟೈಯನ್ (ತ): ಮ.1.05ಕ್ಕೆ, ಸಂ.6.55ಕ್ಕೆ, ಯಲಾಕುನ್ನಿ (ಕ): ಸಂ.4.15ಕ್ಕೆ, ರಾ.10.05ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821-2973519

ಸ್ಕ್ರೀನ್ 1	ವೆಟ್ಟೈಯನ್ (ತ): ಮ.1ಕ್ಕೆ, ಎಲ್ಲಿಗೆ ಪಯಣ ಯಾವುದೋ ದಾರಿ (ಕ): ಸಂ.4ಕ್ಕೆ, ಮಾರ್ಟಿನ್ (ಕ): ಸಂ.6.30ಕ್ಕೆ, ವೆಟ್ಟೈಯನ್ (ತ): ರಾ.9.15ಕ್ಕೆ.
ಸ್ಕ್ರೀನ್ 2	ವೇನಂ ದಿ ಲಾಸ್ಟ್ ಡ್ಯಾನ್ಸ್ (3ಡಿ)(ಇಂ): ಮ.1.30ಕ್ಕೆ, ಸಂ.4ಕ್ಕೆ, ರಾ.7ಕ್ಕೆ.
ಸ್ಕ್ರೀನ್ 3	ಯಲಾಕುನ್ನಿ (ಕ): ಮ.1.30ಕ್ಕೆ, ಒಬ್ಬಟ್ಟು (ಕ): ಸಂ.4.30ಕ್ಕೆ, ಉದಾಹರಣೆ (ಕ): ರಾ.7ಕ್ಕೆ, ವೇನಂ ದಿ ಲಾಸ್ಟ್ ಡ್ಯಾನ್ಸ್ (3ಡಿ)(ಇಂ): ರಾ.9.15ಕ್ಕೆ.
ಸ್ಕ್ರೀನ್ 4	ಮಾರ್ಟಿನ್ (ಕ): ಮ.1.10ಕ್ಕೆ, ಯಲಾಕುನ್ನಿ (ಕ): ಮ.3.55ಕ್ಕೆ, ವೆಟ್ಟೈಯನ್ (ತ): ಸಂ.6.30ಕ್ಕೆ, ಪಣಿ (ಮ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೇಟಗಳ್ಳಿಯ ರಸ್ತೆಯಲ್ಲಿ ದಿಢೀರ್ ಕಂದಕ ಪ್ರತ್ಯಕ್ಷ!

ಮೈಸೂರು, ಅ.24(ಎಸ್‌ಬಿಡಿ)- ಮೈಸೂರು ಮೇಟಗಳ್ಳಿಯ ರಸ್ತೆಯೊಂದರಲ್ಲಿ ದಿಢೀರ್ ಆರೇಳು ಅಡಿ ಕಂದಕ ಉಂಟಾಗಿದ್ದು, ಅದೃಷ್ಟವಶಾತ್ ಯಾವುದೇ ಅವಘಡ ಸಂಭವಿಸಿಲ್ಲ.

ಕೆಆರ್‌ಎಸ್ ರಸ್ತೆಯ ಮೇಟಗಳ್ಳಿ ಹಾಗೂ ಮಥುರಾನಗರ ಪಾರ್ಕ್ ಪಕ್ಕದ ರಸ್ತೆಯಲ್ಲಿ ಗುರುವಾರ ಸಂಜೆ ಈ ಘಟನೆ ಸಂಭವಿಸಿದೆ. ಮೂರ್ನಾಲ್ಕು ಅಡಿ ವಿಸ್ತೀರ್ಣದ ರಸ್ತೆ ಆರೇಳು ಅಡಿ ಆಳದಷ್ಟು ಕುಸಿದಿದೆ. ಕೆಆರ್‌ಎಸ್ ರಸ್ತೆಯಿಂದ ತಿರುವು ಪಡೆಯುವ ಸ್ಥಳದಲ್ಲೇ ಈ ಕಂದಕ ಉಂಟಾಗಿದ್ದು, ಅದೃಷ್ಟವಶಾತ್ ಯಾವುದೇ ರೀತಿಯ ಸಮಸ್ಯೆಯಾಗಿಲ್ಲ.

ವಿಷಯ ತಿಳಿದ ನಗರಪಾಲಿಕೆ ವಲಯ ಕಚೇರಿ 5ರ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿದ್ದಾರೆ. ವಾಹನ ಸವಾರರಿಗೆ ಅಪಾಯದ ಸೂಚನೆ ನೀಡಲು ಕಂದಕದ ಸುತ್ತ ಮರದ ಪೋಲ್‌ಗಳಿಗೆ ಟೇಪ್ ಕಟ್ಟಲಾಗಿದೆ. ಈ ರಸ್ತೆಯಲ್ಲಿ ಯುಜಿಡಿ ಪೈಪ್‌ಲೈನ್ ಅಳವಡಿಸಿ, ರಸ್ತೆ ದುರಸ್ತಿ ಮಾಡಲಾಗಿತ್ತು. ನಿರಂತರ ಮಳೆಯಾಗುತ್ತಿರುವುದರಿಂದ ನೀರು ಹರಿವಿನ ರಭಸದಿಂದ ಈ ರೀತಿ ಕಂದಕ ಉಂಟಾಗಿದೆ ಎನ್ನಲಾಗಿದೆ. ಆದರೆ ಕುಸಿದಿರುವ ಭಾಗದಲ್ಲಿ ಪೈಪ್‌ಲೈನ್ ಕಾಮಗಾರಿ ನಡೆಸಿಲ್ಲ ಎಂದು ಸ್ಥಳೀಯ ಮುಖಂಡರೊಬ್ಬರು ಹೇಳಿದ್ದಾರೆ.



ಕೆಆರ್‌ಎಸ್ ರಸ್ತೆ ಮೇಟಗಳ್ಳಿ ಪಾರ್ಕ್ ಬಳಿ ರಸ್ತೆಯಲ್ಲಿ ಸೃಷ್ಟಿಯಾಗಿರುವ ಕಂದಕ

ಈ ಬಗ್ಗೆ ವಲಯ ಕಚೇರಿ 5ರ ಅಭಿವೃದ್ಧಿ ಅಧಿಕಾರಿ ಮನು ಪ್ರತಿಕ್ರಿಯಿಸಿ, ಪೈಪ್‌ಲೈನ್ ನಡೆಸಲಾಗಿದ್ದ ರಸ್ತೆ ಬದಿಯಲ್ಲಿ ಕಂದಕದ ರೀತಿಯಲ್ಲಿ ಕುಸಿದಿದೆ. ಇದರಿಂದ ಯಾವುದೇ ರೀತಿಯ ಸಮಸ್ಯೆಯಾಗಿಲ್ಲ. ದುರಸ್ತಿಗೆ ಕ್ರಮ ವಹಿಸಲು ಶಾಸಕರೂ ಸೂಚಿಸಿದ್ದಾರೆ. ಕೂಡಲೇ ಕಾಮಗಾರಿ ಕೈಗೊಳ್ಳಲಾಗುವುದು ಎಂದು ತಿಳಿಸಿದ್ದಾರೆ.

ಮಳೆ ನೀರಿನಿಂದ 'ಸ್ಮಶಾನ' ದಿಗ್ಬಂಧನ; ಶಾಸಕ ಶ್ರೀವತ್ಸ ಭೇಟಿ

ತಕ್ಷಣ ಸಮಸ್ಯೆಗೆ ಪರಿಹಾರ ಕಲ್ಪಿಸಲು ಅಧಿಕಾರಿಗಳಿಗೆ ಸೂಚನೆ

ಮೈಸೂರು, ಅ.24(ಎಸ್‌ಬಿಡಿ)- ಚಾಮುಂಡಿಬೆಟ್ಟ ತಪ್ಪಲಿನ ಸುಡುವ ಸ್ಮಶಾನ, ಮಳೆ ನೀರಿನಿಂದ ಕೆರೆಯಾಗಿ ಪರಿವರ್ತನೆಯಾಗಿದ್ದ ಹಿನ್ನೆಲೆಯಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ ಅವರು ಅಧಿಕಾರಿಗಳೊಂದಿಗೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಕಳೆದ ಸೋಮವಾರ ಸುರಿದ ಭಾರಿ ಮಳೆಯಿಂದಾಗಿ ಸುಡುವ ಸ್ಮಶಾನ ಸಂಪೂರ್ಣ ಜಲಾವೃತವಾಗಿತ್ತು. ಪರಿಣಾಮ ಅಂತಿಮ ಸಂಸ್ಕಾರಕ್ಕೂ ಸಂಕಷ್ಟ ಎದುರಾಗಿತ್ತು. ಈ ಬಗ್ಗೆ 'ಮೈಸೂರು ಮಿತ್ರ'ನ ಅ.22ರ ಸಂಚಿಕೆಯಲ್ಲಿ ಸಚಿತ್ರ ವರದಿ ಪ್ರಕಟಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಶಾಸಕರು ಸ್ಥಳ ಪರಿಶೀಲನೆ ನಡೆಸಿ, ಅಧಿಕಾರಿಗಳಿಂದ ಸಮಸ್ಯೆ ಬಗ್ಗೆ ಮಾಹಿತಿ ಪಡೆದರು.

ಸ್ಮಶಾನದಲ್ಲಿ ನಿಂತಿದ್ದ ನೀರು ಖಾಲಿಯಾಗಿದ್ದರೂ ಆಗಾಗ್ಗೆ ಮಳೆ ಸುರಿಯುತ್ತಿರುವುದರಿಂದ ಕೆಸರು ಗದ್ದೆಯಂತಾಗಿದ್ದು, ಓಡಾಡಲು ಹರಸಾಹಸಪಡಬೇಕಿದೆ. ಇದನ್ನು ಗಮನಿಸಿದ ಶಾಸಕರು, ಸ್ಥಳದಲ್ಲೇ ನಗರ ಪಾಲಿಕೆ ಎಸ್‌ಇ ಸಿಂಧು ಅವರಿಗೆ ಕರೆ ಮಾಡಿ, ಕೂಡಲೇ ಡೋಜರ್ ಕಳುಹಿಸಿ ಮಣ್ಣಿನ ಬದಿಯನ್ನು ಸರಿಸಿ, ಜನರಿಗೆ ಓಡಾಡಲು ಅವಕಾಶ ಕಲ್ಪಿಸಬೇಕು. ಅದು ಒಣಗಿದ ನಂತರ ವಿಲೇವಾರಿಗೆ ಕ್ರಮ ವಹಿಸುವಂತೆ ಸೂಚಿಸಿದರು. ಅಲ್ಲದೆ ಮುಡಾ ಆಯುಕ್ತ ರಘುನಂದನ್ ಅವರಿಗೂ ಕರೆ ಮಾಡಿ, ಸ್ಥಳ ಪರಿಶೀಲಿಸಿ ಶಾಶ್ವತ ಪರಿಹಾರ ಕ್ರಮ ಕೈಗೊಳ್ಳುವಂತೆ ತಿಳಿಸಿದರು.



ಶಾಸಕ ಶ್ರೀವತ್ಸ ಅವರು ಚಾಮುಂಡಿಬೆಟ್ಟ ತಪ್ಪಲಿನ ಸುಡುವ ಸ್ಮಶಾನಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ನೀರು ಹರಿವಿಗೆ ವ್ಯವಸ್ಥೆ: ಸ್ಮಶಾನದಿಂದ ಮಳೆ ನೀರು ಹೊರ ಹೋಗಲು ಯಾವುದೇ ವ್ಯವಸ್ಥೆ ಇಲ್ಲದ ಕಾರಣ ಈ ಸಮಸ್ಯೆಯಾಗುತ್ತಿದೆ. ಮುಡಾ ಆಯುಕ್ತರೊಂದಿಗೆ ಮತ್ತೊಮ್ಮೆ ಪರಿಶೀಲನೆ ನಡೆಸಿ, ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸುವುದಾಗಿ ಶಾಸಕರು ಭರವಸೆ ನೀಡಿದರು.

ಗುತ್ತಿಗೆದಾರನಿಗೆ ಎಚ್ಚರಿಕೆ: ಉಳುವ ಸ್ಮಶಾನಕ್ಕೂ ಭೇಟಿ ನೀಡಿ, ಅಲ್ಲಿನ ಸ್ಥಿತಿಗಳನ್ನು ಪರಿಶೀಲಿಸಿದ ಶಾಸಕರು, ಸ್ಮಶಾನದ ಸ್ವಚ್ಛತೆಗೆ ಟೆಂಡರ್ ನೀಡಲಾಗಿದೆ. ಆದರೆ ಗುತ್ತಿಗೆದಾರ ಶೇ.25 ರಷ್ಟು ಕೆಲಸ ಮಾಡಿ, ಸುಮ್ಮನಾಗಿದ್ದಾನೆ. ಕೂಡಲೇ ಅವರನ್ನು ಸಂಪರ್ಕಿಸಿ ಕೆಲಸ ಪೂರ್ಣಗೊಳಿಸಲು ತಿಳಿಸಬೇಕು. ವಿಳಂಬ ಮಾಡಿದರೆ ಗುತ್ತಿಗೆದಾರನ ವಿರುದ್ಧ ಕ್ರಮ ವಹಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಈ ವೇಳೆ ಮಾಜಿ ಕಾರ್ಪೊರೇಟರ್ ಬಿ.ವಿ.ಮಂಜುನಾಥ್, ಮುಖಂಡ ಪ್ರದೀಪ್ ಕುಮಾರ್, ನಗರಪಾಲಿಕೆಯ ಚೇತನಾ, ಅಂಕಯ್ಯ, ಕಿಶೋರ್, ಆದಿತ್ಯ ಮತ್ತಿತರರು ಹಾಜರಿದ್ದರು.

ಅಭಿನಂದನೆ



ಸೈಕಲ್ ರೇಸ್ ಅಕ್ರಾಸ್ ಇಂಡಿಯಾ ಸಂಸ್ಥೆ ಆಯೋಜಿಸಿದ್ದ ಅಂತರರಾಷ್ಟ್ರೀಯ ದೀರ್ಘ ಸೈಕ್ಲಿಂಗ್ ರೇಸ್‌ನಲ್ಲಿ ಶ್ರೀನಗರದಿಂದ ಕನ್ಯಾಕುಮಾರಿವರೆಗೆ 3758 ಕಿ.ಮೀ ಕ್ರಮಿಸಿ, ಸಾಹಸ ಮೆರೆದ ಗೋಕುಲಂ ಬಡಾವಣೆಯ ನಿವಾಸಿ ನವೀನ್ ಸೋಲಂಕಿ ಹಾಗೂ ಅವರಿಗೆ ನೆರವಾದವರನ್ನು ಗೋಕುಲಂ-ಬೃಂದಾವನ ಬಡಾವಣೆಯ ನಗರ ಪಾಲಿಕೆ ಮಾಜಿ ಸದಸ್ಯ ಎಸ್‌ಬಿಎಂ ಮಂಜು ಅಭಿನಂದಿಸಿದರು.

ಬೆಂಗಳೂರು ಕಟ್ಟಡ ಕುಸಿತ ಪ್ರಕರಣ

ಮೃತರ ಕುಟುಂಬಕ್ಕೆ ತಲಾ 2 ಲಕ್ಷ ರೂ ಪರಿಹಾರ; ಪ್ರಧಾನಿ ಮೋದಿ ಘೋಷಣೆ

ಬೆಂಗಳೂರು, ಅ.24- ನಗರದ ಬಾಬುಸಾಬ್ ಪಾಳ್ಯ ಕಟ್ಟಡ ಕುಸಿತದಲ್ಲಿ ಮೃತಪಟ್ಟವರ ಕುಟುಂಬಗಳ ನೆರವಿಗೆ ಪ್ರಧಾನಿ ನರೇಂದ್ರ ಮೋದಿ ಧಾವಿಸಿದ್ದು, ತಲಾ 2 ಲಕ್ಷ ರೂ. ಪರಿಹಾರ ಘೋಷಿಸಿದ್ದಾರೆ. ಈ ವಿಚಾರವಾಗಿ ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಪ್ರಧಾನಿ ಕಾರ್ಯಾಲಯ ಸಂದೇಶ ಪ್ರಕಟಿಸಿದೆ.

ಮೃತ 8 ಜನರ ಕುಟುಂಬಸ್ಥರಿಗೆ ತಲಾ 2 ಲಕ್ಷ ರೂ. ಪರಿಹಾರ ಘೋಷಣೆ ಮಾಡಲಾಗಿದೆ. ಗಾಯಾಳುಗಳಿಗೆ ತಲಾ 50 ಸಾವಿರ ರೂಪಾಯಿ ಪರಿಹಾರ ಘೋಷಣೆ ಮಾಡಲಾಗಿದ್ದು, ಪ್ರಧಾನಮಂತ್ರಿಗಳ ರಾಷ್ಟ್ರೀಯ ಪರಿಹಾರ ನಿಧಿಯಿಂದ ಪರಿಹಾರ ನೀಡಲಾಗುತ್ತದೆ. ದುರಂತದಲ್ಲಿ ಮೃತಪಟ್ಟವರಿಗೆ ಸಂತಾಪ ಸೂಚಿಸಿದ ಪ್ರಧಾನಿ ಮೋದಿ, ಮೃತ ಕಾರ್ಮಿಕರ ಕುಟುಂಬಸ್ಥರ ದುಃಖದಲ್ಲಿ ನಾನು ಭಾಗಿ ಎಂದಿದ್ದಾರೆ. ಜತೆಗೆ, ಗಾಯಾಳುಗಳು ಬೇಗ ಚೇತರಿಸಿಕೊಳ್ಳಲಿ ಎಂದು ಪ್ರಾರ್ಥಿಸಿದ್ದಾರೆ.

ರಾಷ್ಟ್ರೀಯ ಆಯುರ್ವೇದ ದಿನಾಚರಣೆ ಪೋಸ್ಟರ್ ಬಿಡುಗಡೆ



9ನೇ ರಾಷ್ಟ್ರೀಯ ಆಯುರ್ವೇದ ದಿನಾಚರಣೆ ಪೋಸ್ಟರ್‌ಗಳನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ಬಿಡುಗಡೆ ಮಾಡಿದರು

ಮೈಸೂರು, ಅ.24(ಎಂಕೆ)- ಕರ್ನಾಟಕ ಸರ್ಕಾರ ಆಯುಷ್ ಇಲಾಖೆ ಮತ್ತು ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರ ಮೈಸೂರು ಸಂಯುಕ್ತ ಆಶ್ರಯದಲ್ಲಿ 9ನೇ ರಾಷ್ಟ್ರೀಯ ಆಯುರ್ವೇದ ದಿನಾಚರಣೆಯ ಬಿತ್ತಿ ಚಿತ್ರಗಳನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ಬಿಡುಗಡೆ ಮಾಡಿದರು.

ಬೆಂಗಳೂರಿನ ವಿಕಾಸಸೌಧದಲ್ಲಿ ಪೋಸ್ಟರ್ ಬಿಡುಗಡೆ ಮಾಡಿದ ಸಚಿವರು, ಆಯುರ್ವೇದ ದಿನಾಚರಣೆ ಆಯೋಜನೆ ಕುರಿತು ಶ್ಲಾಘಿಸಿದರು. ಅ.29ರಿಂದ ಆರಂಭವಾಗುವ ರಾಷ್ಟ್ರೀಯ ಆಯುರ್ವೇದ ದಿನಾಚರಣೆಯನ್ನು ಆಯುರ್ವೇದ ಸಂಶೋಧನಾ ಕೇಂದ್ರವು ರಾಷ್ಟ್ರೀಯ ಆಯುರ್ವೇದ ಮಾಸವನ್ನಾಗಿ ಆಚರಿಸುತ್ತಿದ್ದು, ಒಂದು ತಿಂಗಳ ಕಾಲ ವಿವಿಧ ಕಾರ್ಯಕ್ರಮ ಗಳನ್ನು ಆಯೋಜಿಸುವ ಸಂಕಲ್ಪವನ್ನು ಹೊಂದಿದೆ. ಇದರ ಅಂಗವಾಗಿ ವಿವಿಧ ಶಾಲಾ ಕಾಲೇಜುಗಳಲ್ಲಿ ಆಯುರ್ವೇದದ ಬಗ್ಗೆ ಜಾಗೃತಿ, ಆರೋಗ್ಯ ಶಿಬಿರಗಳು, ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ವಿಚಾರ ಸಂಕಿರಣಗಳು ಹಾಗೂ ಆಯುರ್ ನಡಿಗೆ ಮತ್ತು ಆಯುರ್ ಮಾನವ ಸರಪಳಿ ಕಾರ್ಯಕ್ರಮಗಳನ್ನು ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರವು ಹಮ್ಮಿಕೊಂಡಿದೆ

ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಅ.24- ಹೂಟಗಳ್ಳಿ ಉಪವಿಭಾಗ ವ್ಯಾಪ್ತಿ ಲಿಂಕ್‌ಲೈನ್ ಕೆಲಸದ ನಿಮಿತ್ತ ಅ.25, 27, 29, 31 ಹಾಗೂ ನ.2 ಮತ್ತು 6 ರಂದು (ದಿನ ಬಿಟ್ಟು ದಿನ) ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಗುಂಗ್ರಾಲ್‌ಛತ್ರ, ಯಡ್ಡಹಳ್ಳಿ, ಯಾಚೇಗೌಡನಹಳ್ಳಿ, ಹೊಸಕೋಟೆ, ದಡ್ಡಕಲ್ಲಹಳ್ಳಿ, ಛತ್ರದಕೊಪ್ಪಲು, ರಾಮೇನಹಳ್ಳಿ, ಕಲ್ಲೂರು ನಾಗನಹಳ್ಳಿ, ಕಲ್ಲೂರು, ಮೀನಾಕ್ಷಿಪುರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಿಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಈ ವ್ಯಾಪ್ತಿಯಲ್ಲಿನ ಕೃಷಿ ಪಂಪ್‌ಸೆಟ್‌ಗಳಿಗೆ ಸದರಿ ದಿನಗಳಂದು ರಾತ್ರಿ 10 ಗಂಟೆಯಿಂದ ಮಾರನೇ ದಿನದ ಬೆಳಗ್ಗೆ 10 ಗಂಟೆಯವರೆಗೆ 3 ಫೇಸ್ ವಿದ್ಯುತ್ ಸರಬರಾಜು ಮಾಡಲಾಗುವುದು ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಕೆ.ಆರ್.ಶ್ರೀನಿವಾಸನ್ ಐಪಿಎಸ್ ನಗರದಲ್ಲಿ ಹಂದಿಗಳ ವ್ಯಾಪಕ ಹಾವಳಿ

ತತ್ತರಿಸಿ ಹೋಗಿರುವ ನಿವಾಸಿಗಳು

ಮೈಸೂರು, ಅ.24(ಎಂಕೆ)- ಮೈಸೂರಿನ ರಿಂಗ್ ರಸ್ತೆಯಲ್ಲಿರುವ ಕೆ.ಆರ್.ಶ್ರೀನಿವಾಸನ್ ಐಪಿಎಸ್ ನಗರದಲ್ಲಿ ಹಂದಿಗಳ ಕಾಟದಿಂದ ಸ್ಥಳೀಯ ನಿವಾಸಿಗಳು ರೋಸಿ ಹೋಗಿದ್ದು, ರೋಗ ರುಜಿನಗಳಿಗೆ ತುತ್ತಾಗುವ ಆತಂಕ ಎದುರಾಗಿದೆ.

ಆಲನಹಳ್ಳಿ ಗ್ರಾಪಂ ವ್ಯಾಪ್ತಿಯ, ಪೊಲೀಸ್ ಅಧಿಕಾರಿ-ಸಿಬ್ಬಂದಿಗಳೇ ನೆಲೆಸಿರುವ ಐಪಿಎಸ್ ನಗರಕ್ಕೆ ಲಗ್ಗೆ ಹಿಡುವ ಹಿಂಡಿಂಡೂ ಹಂದಿಗಳು, ಇಡೀ ದಿನ ಮನೆಗಳ ಸುತ್ತಮುತ್ತ ಸುತ್ತಾಡಿ, ಕಸದ ಗುಂಡಿಗಳನ್ನು ಬಗೆದು ಹಾಕಿ ರಂಪಾಟ ಮಾಡುತ್ತಿವೆ.

ಬಡಾವಣೆಯಲ್ಲಿ ಸಮರ್ಪಕ ಚರಂಡಿ ವ್ಯವಸ್ಥೆ ಇಲ್ಲದಿರುವುದು ಹಾಗೂ ಕಸ ವಿಲೇವಾರಿ ವಿಳಂಬದಿಂದ ಸಮಸ್ಯೆ ದ್ವಿಗುಣಗೊಂಡಿದೆ. ಇದರಿಂದ ಸಾಂಕ್ರಾಮಿಕ ರೋಗ ಭೀತಿ ಕೂಡ ಎದುರಾಗಿದೆ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಕೆ.ಆರ್.ಶ್ರೀನಿವಾಸನ್ ಐಪಿಎಸ್ ನಗರದಲ್ಲಿ ಹಂದಿಗಳ ಹಿಂಡನ್ನು ಕಾಣಬಹುದು

ಕಳೆದೊಂದು ವರ್ಷದಿಂದ ಹಂದಿಗಳ ಜೊತೆ ನಮ್ಮದು ಗುದ್ದಾಟವಾಗಿದೆ. ಯಾರ ಹಂದಿಗಳೋ ಗೊತ್ತಿಲ್ಲ. ಮನೆ ಮುಂದೆ ಗಿಡಗಳನ್ನು ನೆಟ್ಟರೆ ಅವುಗಳನ್ನು ಬುಡ ಸಮೇತ ಬಗೆದು ಹಾಳು ಮಾಡುತ್ತವೆ. ಸೊಳ್ಳೆಗಳ ಕಾಟ ಕೂಡ ಹೆಚ್ಚಿದ್ದು, ಹಂದಿ ಜ್ವರ ಹಾಗೂ ಇನ್ನಿತರೆ ಸಾಂಕ್ರಾಮಿಕ ರೋಗಗಳು ಹರಡುವ ಬೀತಿ ಕಾಡುತ್ತಿದೆ ಎಂದು ಪರಿತಪಿಸಿದ್ದಾರೆ.

ಐಪಿಎಸ್ ನಗರದಲ್ಲಿ ದಿನ ಬೆಳಗಾದರೆ ಹಂದಿಗಳ ದರ್ಶನವಾಗಲಿದೆ. ಒಂದೊಂದು ಗುಂಪಿನಲ್ಲಿ 10-15 ಹಂದಿಗಳು ಇರಲಿವೆ. ಅವುಗಳನ್ನು ಹೊರಗಟ್ಟಲು ನಮ್ಮಿಂದ ಸಾಧ್ಯವಾಗುತ್ತಿಲ್ಲ. ಹತ್ತಿರದ ದೇವೇಗೌಡ ಸರ್ಕಲ್‌ನಲ್ಲಿ ಕೆಲವರು ಹಂದಿ ಮಟನ್ ಸ್ಟಾಲ್ ಇಟ್ಟುಕೊಂಡಿದ್ದು, ಅವರ ಹಂದಿಗಳು ಇರಬಹುದೇನೋ ಎಂದು ಪ್ರಶ್ನಿಸಿದರೆ, ಅವರೂ ಕೂಡ ನಮ್ಮ ಮೇಲೆ ಎಗರಾಡುತ್ತಾರೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಗ್ರಾಪಂನವರು ಬದುಕಿದ್ದಾರೆಂಬುದೇ ಡೌಟು!: ಬಡಾವಣೆಯಲ್ಲಿ ಹಂದಿಗಳ ಕಾಟ ತಪ್ಪಿಸಿ ಎಂದು ಆಲನಹಳ್ಳಿ ಗ್ರಾಪಂ ಅಧಿಕಾರಿಗಳಿಗೆ ಸಾಕಷ್ಟು ಬಾರಿ ಕರೆ ಮಾಡಿ, ಕೆಲ ಸಿಬ್ಬಂದಿಗಳನ್ನು ಭೇಟಿಯಾಗಿ ಮನವಿ ಮಾಡಲಾಗಿದೆ. ಆದರೆ ಯಾವುದೇ ಪ್ರಯೋಜನವಾಗಿಲ್ಲ. ಗ್ರಾಪಂ ಸಿಬ್ಬಂದಿಗಳು ಬದುಕಿದ್ದಾರೆ ಎಂಬುದೇ ಅನುಮಾನ ಎಂದು ನಿವೃತ್ತ ಪೊಲೀಸ್ ಅಧಿಕಾರಿ ಮಂಜುನಾಥ್ 'ಮೈಸೂರು ಮಿತ್ರ'ನಲ್ಲಿ ತಮ್ಮ ಅಸಹಾಯಕ ಪರಿಸ್ಥಿತಿಯನ್ನು ಬಿಚ್ಚಿಟ್ಟರು.

ಒಂದು ವರ್ಷದಿಂದಲೂ ಹಂದಿಗಳ ಕಾಟಕ್ಕೆ ನಲುಗಿ ಹೋಗಿದ್ದೇವೆ. ಯಾವ ಕಡೆ ನೋಡಿದರೂ ಹಂದಿಗಳ ಹಿಂಡು. ಸಂಬಂಧಪಟ್ಟವರು ಹಂದಿಗಳನ್ನು ಹಿಡಿದುಕೊಂಡರೆ ಒಳಿತು. ಇಲ್ಲವಾದರೆ ನಾವೇ ಹಂದಿ ಹಿಡಿಯುವವರನ್ನು ಕರೆಸಿ, ಹಿಡಿಸಿ ಮಾರಾಟ ಮಾಡಲಾಗುವುದು. ಅಲ್ಲದೆ ಗ್ರಾಪಂ ಕಚೇರಿಗೆ ಹಂದಿಗಳನ್ನು ನುಗ್ಗಿಸಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.


ಜನ್ಮ ದಿನದ
ಶುಭಾಶಯಗಳು
ಬಿಜೆಪಿ ಯುವ ಮುಖಂಡರು ಹಾಗೂ ಸಮಾಜ ಸೇವಕರು
ಸಂತೋಷ್ (ಶಂಭು) ಹಾಗೂ ಮನು ಶೈವ್
ಶುಭಕೋರುವವರು : ಸ್ನೇಹಿತರು ಹಾಗೂ ಹಿತೈಷಿಗಳು